Digitized by Arya Samaj Foundation Chennai and eGangotri

ವ್ಯವಹಾರಭಾನು

ಸ್ವಾಮೀ ದಯಾನಂದ ಸರಸ್ವತೀ

ಪ್ರಕಾಶಕರು
ಆರ್ಯ ಸಮಾಜ,
ಸ್ವಾಮೀ ಶ್ರದ್ಧಾನಂದ ಭವನ,
ವಿಶ್ವೇಶ್ವರಪುರಂ, ಬೆಂಗಳೂರು - 560 004

CC-0. In Public Domain. Gurukul Kangri Collection, Haridwar

ndatio

rukul

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

"ವೇದ ಸಂಪದಾ" ('ಬನಶ್ರೀ') ಗ್ರಂಥಮಾಲೆಯ ನಾಲ್ಕನೆಯ ಪುಷ್ಪ

Digitized by Arya Samaj Foundation Chennai and eGangotri

पुस्तकालय
गुरुकुल कांगड़ी विश्वविद्यालय
7750
DONA

ವ್ಯವಹಾರಭಾನು

ಸ್ವಾಮೀ ದಯಾನಂದ ಸರಸ್ವತೀ

1993

ಪ್ರಕಾಶಕರು:

ಆರ್ಯ ಸಮಾಜ

ಸ್ವಾಮಿ ಶ್ರದ್ಧಾನಂದ ಭವನ

ವಿಶ್ವೇಶ್ವರಪುರಂ, ಬೆಂಗಳೂರು–560 004

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

VYAVAHARABHANU (Kannada)

— An Array of Rays on Character-Building and Truthfulness for Students, Teachers, Elders and Statesmen; Along with several Interesting Anecdotes.

Written in Hindi by	:	**Swamy Dayananda Saraswati**
Translated by	:	**Upendra Bhoopala**
Second Edition	:	**1993**
Copies	:	**2000**
Pages	:	**86 + xiv**
Price	:	Rs. 15-00
Published by	:	**ARYA SAMAJ** Swamy Shraddhananda Bhavan, Visvesvarapuram, Bangalore-560 004 Phone : 626380
Printed by	:	**PARIMALA MUDRANALAYA** 517/60, Sriramanjaneya Road Hanumanthanagar Bangalore-560 019 Phone: 625516

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅನುವಾದಕನ ಬಿನ್ನಹ

ಮಹರ್ಷಿ ದಯಾನಂದರು ಸತ್ಯ, ವೈದಿಕ ಸಿದ್ಧಾಂತಗಳ ಪ್ರತಿಪಾದನೆಗಾಗಿಯೂ ಮತ್ತು ಅಸತ್ಯ, ಅವೈದಿಕ ಮತಗಳ ಖಂಡನೆಗಾಗಿಯೂ, ಜಗದ್ವಿಖ್ಯಾತವಾದ, ಹಾಗೂ 'ನ ಭೂತೋ ನ ಭವಿಷ್ಯತಿ', ಎಂಬ ಲೋಕೋಕ್ತಿಯನ್ನು ಈಗಿನವರೆಗೂ ಚರಿತಾರ್ಥ ಮಾಡುತ್ತಿರುವ, ಅಮೂಲ್ಯ ದಾರ್ಶನಿಕ ಕೃತಿ '**ಸತ್ಯಾರ್ಥ ಪ್ರಕಾಶ**'ವನ್ನು ಇಸವಿ 1874ರಲ್ಲಿ ಬರೆದು 1875ರಲ್ಲಿ ಪ್ರಕಾಶ ಪಡಿಸಿದರು.

ಇದು ಎಷ್ಟು ಸರಳಕೃತಿಯೋ, ಅಷ್ಟೇ ದುರೂಹವೂ ಆಗಿದೆ. ಏಕೆಂದರೆ, ಮಹರ್ಷಿ ದಯಾನಂದರಷ್ಟು ವೈದಿಕ-ಆರ್ಷ; ಅವೈದಿಕ-ಅನಾರ್ಷ ಗ್ರಂಥಗಳ ವಿಸ್ತೃತ ಅಧ್ಯಯನ ಮಾಡಿದ ಆರ್ಯ ಅಥವಾ ಪೌರಾಣಿಕ ವಿದ್ವಾಂಸನು ಈವರೆಗೂ ದೊರೆತಿಲ್ಲ.

'**ಸತ್ಯಾರ್ಥ ಪ್ರಕಾಶ**'ದಲ್ಲಿ ಮಹರ್ಷಿ ದಯಾನಂದರು ಮೊಟ್ಟ ಮೊದಲ ಬಾರಿಗೆ ಪ್ರತಿಪಾದನೆ ಮಾಡಿದ, ಅನೇಕ ದಾರ್ಶನಿಕ–ಸಾಮಾಜಿಕ ತತ್ವಗಳು ಈಗಲೂ ವಿದ್ವಾಂಸರಿಗೆ ತಲೆ ಕೆರೆದು ಕೊಳ್ಳುತ್ತಿರುವಂತೆ ಮಾಡಿವೆ. ಉದಾಹರಣೆಗೆ —

1. ಆರು ದರ್ಶನಶಾಸ್ತ್ರಗಳಲ್ಲಿ ಅವಿರೋಧ
2. ಅನಾರ್ಷ ಗ್ರಂಥಗಳ ಅಧ್ಯಯನದಿಂದ ಹಾನಿ
3. ಸ್ತ್ರೀ-ಶೂದ್ರರಿಗೂ ವೇದಾಧ್ಯನದ ಅಧಿಕಾರ ಇದೆ.
4. ಸತ್ಯಾಸತ್ಯದ ಐದು ವಿಧ ಪರೀಕ್ಷೆ
5. ನಾರೀ ಸತ್ಕಾರಕ್ಕೆ ಯೋಗ್ಯಳು
6. ನಿಯೋಗದ ಪ್ರಶಂಸೆ
7. ರಾಜ್ಯವ್ಯವಸ್ಥೆಗಾಗಿ ಮೂರು ಸಭೆ
8. ಈಶ್ವರನು ಹುಚ್ಚು ದರ್ಬಾರು ಮಾಡುವುದಿಲ್ಲ.
9. ಈಶ್ವರ-ಸ್ತುತಿ-ಪ್ರಾರ್ಥನೋಪಾಸನೆಯ ಫಲ
10. ಈಶ್ವರ-ಸ್ತುತಿ-ಪ್ರಾರ್ಥನೋಪಾಸನೆಯ ಉದ್ದೇಶ್ಯ
11. ಈಶ್ವರನ ಸಗುಣ-ನಿರ್ಗುಣತ್ವದ ಪರಿಭಾಷೆ
12. ವೇದಶಾಖೆಗಳೂ, ಹಾಗೂ ಬ್ರಾಹ್ಮಣ ಗ್ರಂಥಗಳೂ 'ವೇದ' ಅಲ್ಲ!
13. ಟಿಬೆಟ್ (ಹಿಮಾಲಯ)ದಲ್ಲಿ ಆದಿಸೃಷ್ಟಿ
14. ಆರ್ಯ-ಆರ್ಯಭಾಷೆ-ಆರ್ಯಾವರ್ತ
15. ಮೋಕ್ಷ, ಎಂದರೆ ದುಃಖದಿಂದ ಬಿಡುಗಡೆ
16. ಮುಕ್ತಿಯಿಂದ ಪುನರಾವೃತ್ತಿ ಇದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

17. ಸ್ವರ್ಗ-ನರಕಗಳ ವಿಶಿಷ್ಟವ್ಯಾಖ್ಯೆ

18. ಇತರ ಗ್ರಹಗಳಲ್ಲೂ ಜೀವಸೃಷ್ಟಿ ಇದೆ.

ಇತ್ಯಾದಿ.

ಹೀಗೆ, ಸತ್ಯ ಸಿದ್ಧಾಂತಗಳ ಪ್ರತಿಪಾದನೆಗಾಗಿಯೂ, ಹಾಗೂ ಅಸತ್ಯ ರಾದ್ಧಾಂತಗಳ ಖಂಡನೆಗಾಗಿಯೂ **'ಸತ್ಯಾರ್ಥಪ್ರಕಾಶ'**, ಎಂಬ ದಾರ್ಶನಿಕ ಗ್ರಂಥ ರಚಿಸಲ್ಪಟ್ಟಾಗ, ಸತ್ಯವ್ಯವಹಾರಗಳ ಪ್ರೇರಣೆ-ಪ್ರತಿಪಾದನೆಗಾಗಿ, ಹಾಗೂ ಅಸತ್ಯವ್ಯವಹಾರಗಳ ದೂಷಣೆ-ನಿರಾಕರಣೆಗಾಗಿ ವ್ಯವಹಾರೋಪಯೋಗಿಯಾದ ಸರಳ ಕೃತಿಯನ್ನು ಸ್ವಾಮೀ ದಯಾನಂದ ಸರಸ್ವತಿಯವರಂತಹ ಋಷಿತುಲ್ಯ ಅಪ್ರತಿಮ ವೇದ ವಿದ್ವಾಂಸರಿಂದ ಜನರು ನಿರೀಕ್ಷಿಸುವುದು ಸಹಜವೇ ಆಗಿತ್ತು!

ಈ ನಿರೀಕ್ಷೆಗೆ ಉತ್ತರವಾಗಿ ಬಂದಿತು ಈ **'ವ್ಯವಹಾರಭಾನು'**! ಇಸವಿ 1880ರಲ್ಲಿ!

ಮಹರ್ಷಿ ದಯಾನಂದರು ಈ ಗ್ರಂಥದ ತಮ್ಮ **'ಭೂಮಿಕಾ'**ದಲ್ಲಿ—

'ಮನುಷ್ಯರಿಗೆ ಉತ್ತಮ ಶಿಕ್ಷಣ ಕೊಡುವುದಕ್ಕಾಗಿ ಎಲ್ಲಾ ವೇದಾದಿಶಾಸ್ತ್ರಗಳ, ಹಾಗೂ ಸತ್ಯಾಚಾರಿ ವಿದ್ವಾಂಸರ ರೀತಿಯಿಂದ ಯುಕ್ತವಾದ ಈ **'ವ್ಯವಹಾರಭಾನು'** ಗ್ರಂಥವನ್ನು ನಾನು ನಿರ್ಮಿಸಿ, ಪ್ರಕಟಿಸುತ್ತಿದ್ದೇನೆ!', ಎಂದು ಬರೆಯುತ್ತಾರೆ.

ಹೀಗಾಗಿ, ಈ ಗ್ರಂಥವು ವಿದ್ಯಾರ್ಥಿಗಳಿಗೆ ಸುಶಿಕ್ಷಣವನ್ನು ಕೊಡುವ ಮುಖ್ಯ ಉದ್ದೇಶ್ಯದಿಂದ ಬರೆಯಲ್ಪಟ್ಟುದಾದರೂ ಕೂಡ, ಅವರಿಗೆ ಹಿರಿಯರಾದ ತಾಯಿ, ತಂದೆ, ಆಚಾರ್ಯ, ಪಂಡಿತರು, ಸಭಾಸದರು, ರಾಜರು, ಪ್ರಜೆಗಳು, ರಾಜ್ಯದ ಅಧಿಕಾರಿಗಳು, ವ್ಯಾಪಾರಿಗಳು-ಗಿರಾಕಿಗಳು—ಈ ಮೊದಲಾಗಿ ಸಮಾಜದ ಎಲ್ಲಾ ವರ್ಗದ ಜನರಿಗೂ ಸುಶಿಕ್ಷಣವನ್ನು ಕೊಡುತ್ತಿದೆ.

ಅಷ್ಟೇ ಅಲ್ಲದೇ, ಸತ್ಯವ್ಯವಹಾರಗಳ, ಹಾಗೂ ಮಿಥ್ಯಾವ್ಯವಹಾರಗಳ ದ್ಯೋತಕವಾದ ಅನೇಕ ರೋಚಕ ದೃಷ್ಟಾಂತಗಳು ಈ ಗ್ರಂಥದ ವಿಶಿಷ್ಟ ಪದ್ಧತಿಯಾಗಿದೆ. ಈ ದೃಷ್ಟಾಂತಗಳು **'ಸತ್ಯಾರ್ಥ ಪ್ರಕಾಶ'**ದ ದ್ವಿತೀಯ, ಹಾಗೂ ಏಕಾದಶ ಸಮುಲ್ಲಾಸಗಳನ್ನು ಪ್ರತಿಬಿಂಬಿಸುತ್ತಿವೆ.

ಈ ದೃಷ್ಟಾಂತಗಳು ಕಲ್ಪಿತವಲ್ಲ! ಸ್ವಾಮೀ ದಯಾನಂದ ಸರಸ್ವತಿಯವರು ತಮ್ಮ ನಿರಂತರ ಪ್ರವಾಸಮಯ ಜೀವನದಲ್ಲಿ ಸಮಾಜದ ಪ್ರಾಯಶಃ ಎಲ್ಲಾ ಶಿಷ್ಟ-ಅಶಿಷ್ಟವರ್ಗದ ಜನರನ್ನು ಭೇಟಿ ಮಾಡಿದ್ದರು*. ಆದುದರಿಂದ, ಅಂತಹ ಜನರ ಆಚರಣೆ-ದುರಾಚರಣೆ, ಸತ್ಯ-ಅಸತ್ಯ ವಾರ್ತಾಲಾಪ, ಮೊದಲಾದುವುಗಳ ಪ್ರತ್ಯಕ್ಷದರ್ಶಿ-ಶ್ರೋತ್ಯ ಆಗಿ ಈ ಗ್ರಂಥವನ್ನು (ಹಾಗೂ **'ಸತ್ಯಾರ್ಥಪ್ರಕಾಶ'**ವನ್ನೂ) ಅವರು ರಚಿಸಿದರು.

---

* **ಪಂ. ಲೇಖರಾಮ್ ಬರೆದ 'ಮಹರ್ಷಿದಯಾನಂದ ಕಾ ಜೀವನ ಚರಿತ್ರ', ಎಂಬ ಬೃಹದ್‌ಗ್ರಂಥವು ಕನ್ನಡದಲ್ಲಿ ಬೆಳಕು ಕಾಣಬೇಕಾಗಿದೆ.**

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಈ ರೀತಿ **'ಮೂರ್ತಿ ಚಿಕ್ಕದಾದರೂ ಕೀರ್ತಿದೊಡ್ಡದು'**, ಎಂಬಂತೆ ಈ ಗ್ರಂಥವು **'ಸತ್ಯಾರ್ಥ ಪ್ರಕಾಶ'**ದಷ್ಟೇ ಮಹತ್ವವನ್ನುಳ್ಳದ್ದಾಗಿದೆ.

'ವ್ಯವಹಾರಭಾನು' ಗ್ರಂಥವು ಕನ್ನಡದಲ್ಲಿ ಮೊದಲ ಬಾರಿಗೆ **ಡಾ|| ದಾ. ವಿಶ್ವಮಿತ್ರ,** ಎಚ್.ಎಂ.ಡಿ. ಸಿದ್ಧಾಂತ ವಿಶಾರದ, ಮೈಸೂರು ಅವರಿಂದ ಅನುವಾದಿಸಲ್ಪಟ್ಟು, **ಪ್ರತಿನಿಧಿ ಪ್ರಕಾಶನ ಸಮಿತಿ, ಮೈಸೂರು** ಅವರಿಂದ ಇಸವಿ 1955ರಲ್ಲಿ ಪ್ರಕಾಶಿಸಲ್ಪಟ್ಟಿತು. (ಪುಟಗಳು 72; 1000 ಪ್ರತಿಗಳು; ಬೆಲೆ: ನಾಲ್ಕು ಆಣೆ)

ಈಗ ಈ ಪುಸ್ತಕವು ದೊರೆಯುತ್ತಿಲ್ಲ. ಹೀಗಾಗಿ ಇದರ ಪುರ್ಮುದ್ರಣದ ಆವಶ್ಯಕತೆಯನ್ನು ಬಹುಕಾಲದಿಂದಲೇ ಜನರು ವೀಕ್ಷಿಸುತ್ತಾ ಬಂದಿದ್ದಾರೆ. +

ಈ ವರ್ಷ ಮಹರ್ಷಿ ದಯಾನಂದರ ಎಲ್ಲಾ ಲಘು-ಬೃಹತ್ ಗ್ರಂಥಗಳನ್ನೂ ಕನ್ನಡೀಕರಿಸಿ, ಪ್ರಕಾಶಿಸಬೇಕೆಂಬ ಯೋಜನೆ **'ವೇದಸಂಪದಾ'**, ವಿಚಾರಕ್ಕೆ ಬಂದಾಗ, ಲಘುಗ್ರಂಥಗಳ ಪ್ರಕಾಶನಕ್ಕೆ ಸಂಬಂಧಿಸಿದ **'ಜನಶ್ರೀ'** ವಿಭಾಗದಡಿಯಲ್ಲಿ **'ವ್ಯವಹಾರಭಾನು'** ಗ್ರಂಥದ ಸಮಾವೇಶ ಇದ್ದುದರಿಂದ, ಇದರ ಅನುವಾದವನ್ನು ಹೊಸದಾಗಿ ಮಾಡಲಾಯಿತು.

ಈ ಅನುವಾದದ ವೈಶಿಷ್ಟ್ಯ

ಈ ಗ್ರಂಥದಲ್ಲಿ ಎರಡು ವಿಧಗಳಿವೆ—

(1) ಸಿದ್ಧಾಂತ ಮತ್ತು (2) ದೃಷ್ಟಾಂತ

(1) ಸಿದ್ಧಾಂತಭಾಗವನ್ನು ಗ್ರಂಥಕರ್ತರ ಋಷಿಶೈಲಿಯಲ್ಲಿಯೇ ಶಬ್ದಶಃ ಅನುವಾದಿಸಿದ್ದೇವೆ. ಇದು ನಮಗೆ/ನಿಮಗೆ ಹೊಸದೇನಲ್ಲ.

(2) ದೃಷ್ಟಾಂತ ಭಾಗವನ್ನು ಪ್ರಾಯಃ ಭಾವಾನುವಾದರೂಪದಲ್ಲಿ ಮಾಡಲಾಗುತ್ತದೆ. ಏಕೆಂದರೆ, ಹೀಗೆ ಮಾಡುವುದರಿಂದ, ವಿಷಯದ ರೋಚಕತೆ ಹೆಚ್ಚುತ್ತದೆ.

ಆದರೆ, ಇಂತಹ ಅನುವಾದದಲ್ಲಿ ಅನೇಕ ಆವಶ್ಯಕ-ಅನಾವಶ್ಯಕ ಪ್ರಕ್ಷೇಪಗಳು ಅನುವಾದಕರ್ತನಿಂದ ಸಂಭವಿಸಿ, ಮೂಲಗ್ರಂಥಕರ್ತನಿಗೆ ದ್ರೋಹ ಮಾಡಿದಂತಾಗುತ್ತದೆ.

ಆದುದರಿಂದ, ನಾವು ದೃಷ್ಟಾಂತ ಭಾಗವನ್ನೂ ಕೂಡ, ಶಬ್ದಶಃ ಋಷಿಶೈಲಿಯಲ್ಲೇ ಅನುವಾದ ಮಾಡಿದ್ದೇವೆ. ಆದರೆ, ಹಲವು ಕಡೆ ಹಲವು ಹಿಂದೀ ಶಬ್ದಗಳ ಶಬ್ದಾನುವಾದ ಸರಿಯಾದ ಅಭಿಪ್ರಾಯವನ್ನು ಕನ್ನಡದಲ್ಲಿ ತೋರಿಸಲಾಗುತ್ತಿರಲಿಲ್ಲ. ಅಂತಹ ಶಬ್ದಗಳ ಅಭಿಪ್ರಾಯಸೂಚಕ ಅನುವಾದ ಮಾಡಿ, ಅವನ್ನು $ ಈ ಚಿಹ್ನೆಯಿಂದ ತೋರಿಸಿದ್ದೇವೆ. ಇವು ಅತ್ಯಲ್ಪವಾಗಿವೆ.

\+ **ಪಂ. ಗೋಪದೇವ ಅವರಿಂದ ಅನುವಾದಿಸಲ್ಪಟ್ಟ ತೆಲುಗು ಸಂಸ್ಕರಣವು ಇಸವಿ 1988ರ ವರೆಗೆ ಮೂರು ಆವೃತ್ತಿಗಳನ್ನು ಕಂಡಿದೆ.**

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(3) ವಿಷಯಕ್ಕೆ ತಕ್ಕಂತೆ ಬೃಹತ್ ವಿಷಯ ಸೂಚಿಕೆಯನ್ನು ತಯಾರಿಸಲಾಗಿದೆ.

(4) ಒಟ್ಟು ಹದಿನೆಂಟು ದೃಷ್ಟಾಂತಗಳನ್ನು ಗುರುತಿಸಿ, ಅವುಗಳಿಗೆ ಶೀರ್ಷಿಕೆಗಳನ್ನೂ, ಕ್ರಮ ಸಂಖ್ಯೆಯನ್ನೂ ಕೊಟ್ಟು, ಪ್ರಾಯಃ ಪ್ರತಿಯೊಂದರ 'ನೀತಿ'ಯನ್ನೂ ಸೂಚಿಸಲಾಗಿದೆ.

(5) ಪ್ರತಿ ಪುಟದಲ್ಲೂ ಉಪಶೀರ್ಷಿಕೆಗಳನ್ನು ಈ ( ) ಮತ್ತು ಈ [ ] ಕಂಸಗಳಲ್ಲಿ ತೋರಿಸಲಾಗಿದೆ.

(6) ವಿದ್ಯಾರ್ಥಿಗಳ ಉಪಯೋಗಕ್ಕಾಗಿ, ಎಲ್ಲಾ ಸಂಸ್ಕೃತ ಶ್ಲೋಕಗಳ ಪದಶಃ ಅನ್ವಯಾರ್ಥವನ್ನು ಪಾದ ಟಿಪ್ಪಣಿಯಲ್ಲಿ ಕೊಡಲಾಗಿದೆ.

(7) ಸಂಸ್ಕೃತವಾಕ್ಯಗಳ ಅನುವಾದವನ್ನೂ ಪಾದಟಿಪ್ಪಣಿಯಲ್ಲಿ ತೋರಿಸಿದ್ದೇವೆ.

(8) ಲಕ್ಷಣಾತ್ಮಕ, ಹಾಗೂ ಉಪದೇಶಾತ್ಮಕ ವಾಕ್ಯಗಳನ್ನು ನಿರ್ದಿಷ್ಟವಾಗಿ ಗುರುತಿಸುವ ಉದ್ದೇಶ್ಯದಿಂದ, ಪ್ರತಿಯೊಂದಕ್ಕೂ ಕ್ರಮಸಂಖ್ಯೆಯನ್ನು ಕೊಟ್ಟು, ಬೇರೆ ಕಂಡಿಕೆಗಳಲ್ಲಿ ಮುದ್ರಿಸಲಾಗಿದೆ.

(9) ಹಿಂದೀ ಭಾಷೆಯಲ್ಲಿ ಪ್ರಯುಕ್ತವಾಗುವ ಹಲವು ವ್ಯಕ್ತಿವಾಚಕಗಳನ್ನು ಹಾಗೆಯೇ ಕನ್ನಡಾನುವಾದದಲ್ಲಿ ಸೇರಿಸದೇ, ಅವುಗಳಿಗೆ ಕನ್ನಡದಲ್ಲಿ ನಾಮಕರಣ ಮಾಡಿದ್ದೇವೆ. ಉದಾಹರಣೆಗಾಗಿ —

ಶೇಖಚಿಲ್ಲೀ = ಬಡಾಯಿಖಾನ್
ಹುಡದಂಗಾ = ಗದ್ದಲೆ ತಿಮ್ಮ
ಲಾಲ್ ಬುಝುಕ್ಕಡ್ = ಮೊಡು ಮಂಡೆಯ ಗುಂಡಪ್ಪ
ಅಂಧೇರ್ ನಗರೀ = ಏರುಪೇರು ನಗರಿ
ಗವರ್ಗಂಡ ರಾಜಾ = ಐಲು ದೊರೆ
ಖುಶಾಮದೀ = ಭಟ್ಟಂಗಿ

(10) ಹಿಂದೀ ಭಾಷೆಯ ದೋಹಾ (ಪದ್ಯ)ವನ್ನು ಕನ್ನಡದಲ್ಲಿ ಹಾಗೆಯೇ ಇಡದೇ, ಅದೇ ಶೈಲಿಯಲ್ಲಿ ಅನುವಾದ ಮಾಡಿದ್ದೇವೆ.

(11) ವಿಷಯವು ಸ್ಪಷ್ಟವಾಗಿ ದೃಷ್ಟಿಗೋಚರವಾಗಲಿ, ಎಂಬ ಉದ್ದೇಶ್ಯದಿಂದ, ಗ್ರಂಥವನ್ನು ಸಣ್ಣ ಸಣ್ಣ ಕಂಡಿಕೆಗಳಲ್ಲಿ ವಿಭಜಿಸಲಾಗಿದೆ.

(12) ಬಲಗಡೆಯ ಪ್ರತಿಯೊಂದು ಪುಟದ ಮೇಲು ಭಾಗದಲ್ಲೂ ವಿಷಯನಿರ್ದೇಶ ಮಾಡಲಾಗಿದೆ.

(13) ವಾಕ್ಯಾರ್ಥದ ಸ್ಪಷ್ಟೀಕರಣೆಗಾಗಿ ಆವಶ್ಯಕವಾದ ಶಬ್ದಗಳನ್ನು ಈ [ ] ಕಂಸದಲ್ಲಿ ತೋರಿಸಿದ್ದೇವೆ.

(14) ಯಾವ ರೀತಿಯ ಪ್ರಕ್ಷೇಪವನ್ನೂ ಮಾಡಿಲ್ಲ!

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಈ ಗ್ರಂಥದ ಅನುವಾದಕ್ಕಾಗಿ ರಾಮಲಾಲ್ ಕಪೂರ್ ಟ್ರಸ್ಟ್, ಪೋ. ಬಹಾಲ್‌ಗಢ್, ಜಿಲ್ಲ ಸೋನೀಪತ್ (ಹರಿಯಾಣಾ) ಅವರ ಆಗಸ್ಟ್ 1985ನೆಯ ಸಂಸ್ಕರಣವನ್ನು ಆಧಾರವನ್ನಾಗಿ ಇಟ್ಟುಕೊಳ್ಳಲಾಗಿದೆ. ಆದುದರಿಂದ, ಆ ಟ್ರಸ್ಟಿನ ಅಧ್ಯಕ್ಷರಿಗೆ ಆಭಾರಿಗಳಾಗಿದ್ದೇವೆ.

ಉಪೇಂದ್ರ ಭೂಪಾಲ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಷಯ ಸೂಚಿಕೆ

ಪ್ರಕಾಶಕರ ಮುನ್ನುಡಿ

ಅನುವಾದಕನ ಬಿನ್ನಹ

ಭೂಮಿಕಾ — ಸ್ವಾಮೀ ದಯಾನಂದ ಸರಸ್ವತೀ

ವ್ಯವಹಾರಭಾನು

ಮನುಷ್ಯರ ಸುಧಾರಣೆಗಾಗಿ ವ್ಯವಹಾರ-ಶಿಕ್ಷಣ 1

ಪಂಡಿತನ ಲಕ್ಷಣಗಳು 2

ಮೂರ್ಖನ ಲಕ್ಷಣಗಳು 4

ದೃಷ್ಟಾಂತ –[1] **ಬಡಾಯಿಖಾನ್ ಮತ್ತು ವರ್ತಕನ ದಿವಾಸ್ವಪ್ನ** 5

ವರ್ತಕನ ಗಾಳಿಗೋಪುರ 6

ಬಡಾಯಿಖಾನನ ಗಾಳಿಗೋಪುರ! 6

ಗಾಳಿಗೋಪುರ ಉರುಳಿತು! 7

ನೀತಿ 7

ಮೂರ್ಖರ ಸಂಗ ಸದಾ ತ್ಯಾಜ್ಯ 8

ವಿದ್ಯಾರ್ಥಿಗಳ ದೋಷಗಳು 8

ಬ್ರಹ್ಮಚರ್ಯದ ಗುಣಗಳು 10

ಶೂರ-ವೀರರ ಪ್ರಕಾರಗಳು 11

'ಶಿಕ್ಷಣ', ಎಂದರೇನು? 12

ವಿದ್ಯೆ-ಅವಿದ್ಯೆ 12

ಬ್ರಹ್ಮಚಾರೀ 13

ಆಚಾರ್ಯ 13

ಬಾಲಕರ ಶಿಕ್ಷಣ ಹೇಗಾಗಬೇಕು? 13

ಕುಶಿಕ್ಷಣದ ಉಪದೇಶ 14

ದೃಷ್ಟಾಂತ–[2] **ಹಿರಿಯರಿಂದ ಕುಶಿಕ್ಷಣ** 14

ನೀತಿ 14

ಯಾರು ತಾಯಿ-ತಂದೆ, ಆಚಾರ್ಯರಾಗಲು ಅಯೋಗ್ಯರು? 14

ಸುಶಿಕ್ಷಣದ ರೀತಿ 15

ವಿದ್ಯಾಪ್ರಾಪ್ತಿಯ ನಾಲ್ಕು ಕಾಲಗಳು 15

ವಿದ್ಯಾಪ್ರಾಪ್ತಿಯ ನಾಲ್ಕು ಕರ್ಮಗಳು 16

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆಚಾರ್ಯರ ಜೊತೆ ವಿದ್ಯಾರ್ಥಿಗಳ ವರ್ತನೆ 17
ವಿದ್ಯಾರ್ಥಿಗಳ ಜೊತೆ ಆಚಾರ್ಯರ ವರ್ತನೆ 18

ದೃಷ್ಟಾಂತ-[3] **ಗದ್ದಲೆ ತಿಮ್ಮನ ಮತ್ತು ಸಜ್ಜನನ ಸಂವಾದ** 20

ಆಚಾರ್ಯರಿಂದ ಶಿಕ್ಷಣ 21
ವಿದ್ಯಾರ್ಥಿಗಳಿಂದ ಶಿಕ್ಷಾಗ್ರಹಣ 22

ಸತ್ಯ ಮತ್ತು ಅಸತ್ಯದ ಐದು ವಿಧದ ಪರೀಕ್ಷೆ 23
ಈಶ್ವರ 24
ಸೃಷ್ಟಿಕ್ರಮ 25
ಪ್ರತ್ಯಕ್ಷಾದಿ ಪ್ರಮಾಣಗಳು 25
ಆಪ್ತರ ಆಚರಣೆ 26
ಆತ್ಮಪರೀಕ್ಷೆ 26

ಧರ್ಮ ಮತ್ತು ಅಧರ್ಮ 27

ದೃಷ್ಟಾಂತ-[4] ಧರ್ಮಾಧರ್ಮದ ಬಗ್ಗೆ ಸಂವಾದ 27
ನೀತಿ 27

ಸಭೆಯಲ್ಲಿ ಸಭ್ಯತೆಯ ವ್ಯವಹಾರ 28
ಜಡಬುದ್ಧಿ ಮತ್ತು ತೀವ್ರಬುದ್ಧಿ 29

ದೃಷ್ಟಾಂತ-[5] ಬೈರಾಗಿ ರಾಮದಾಸನ 'ಪಾಂಡಿತ್ಯ'! 29
ನೀತಿ 31

ಎಂತಹ ಆಜ್ಞೆಯನ್ನು ಪಾಲಿಸಬಾರದು? 31

ದೃಷ್ಟಾಂತ-[6] **ಕುಮಾತಾಪಿತೃಗಳ ಉಪದೇಶ; ಮಕ್ಕಳಿಂದ ಪ್ರತ್ಯುತ್ತರ** 31
ಒಳ್ಳೆಯ ಮಕ್ಕಳಿಂದ ಕೆಟ್ಟ ತಾಯಿ-ತಂದೆಗಳಿಗೆ ಪ್ರತ್ಯುತ್ತರ 32
ಕೆಟ್ಟ ಮಕ್ಕಳಿಂದ ಒಳ್ಳೆಯ ತಾಯಿ-ತಂದೆಗಳಿಗೆ ಪ್ರತ್ಯುತ್ತರ 32
ಒಳ್ಳೆಯ ತಾಯಿ-ತಂದೆಯರಿಂದ ಮಕ್ಕಳಿಗೆ ಉಪದೇಶ 32
ನೀತಿ 35

ರಾಜಾ-ಪ್ರಜೆ ಮತ್ತು ಇಷ್ಟ-ಮಿತ್ರರೊಡನೆ ವ್ಯವಹಾರ 35
ಕನ್ಯೆಯರ ವಿದ್ಯಾಧ್ಯಯನ ಮತ್ತು ಬ್ರಹ್ಮಚರ್ಯವಿಧಾನ 35

ದೃಷ್ಟಾಂತ-[7] **ಪ್ರಮಾದೀ, ಹಾಗೂ ಸಜ್ಜನರ ಸಂವಾದ** 36
ನೀತಿ 37

ವಿದ್ಯಾಪ್ರಾಪ್ತಿಯ ಕ್ರಮ 37
ಓದದೇ ಇರುವ ಮನುಷ್ಯರ ಎರಡು ಗತಿ 38

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಎಲ್ಲರೂ ಧಾರ್ಮಿಕರಾಗಬಲ್ಲರು; ವಿದ್ಯಾವಂತರಾಗದಿರಬಹುದು! 38
ಆತ್ಮಹಂತಕರ ಕೆಟ್ಟ ಗತಿ 39
ವಿದ್ಯೆ-ಅವಿದ್ಯೆ; ನ್ಯಾಯ-ಅನ್ಯಾಯ 39

ದೃಷ್ಟಾಂತ - [8] ವಿದ್ಯಾಶತ್ರು ಗುರು-ಶಿಷ್ಯರ 'ಸಂಸ್ಕೃತ ರಚನೆ' 40
ನೀತಿ 42

ಪಠನ-ಪಾಠನ ಎರಡೂ ಏಕಕಾಲದಲ್ಲಾಗಬೇಕು 42

ದೃಷ್ಟಾಂತ-[9] · **ಪೋಪಪಂಡಿತರ ಸಂಕುಚಿತಬುದ್ಧಿ** 42
ನೀತಿ 44

ವಿದ್ಯೆ ಮತ್ತು ಧರ್ಮ ಒಟ್ಟಿಗೇ ಇರುತ್ತವೆ 44
ಸತ್ಪುರುಷರ ಮತ್ತು ಅಸತ್ಪುರುಷರ ಲಕ್ಷಣ 45
ಪುರುಷಾರ್ಥ ಮತ್ತು ಅದರ ಭೇದಗಳು 46
ತನು-ಮನ-ಧನಗಳ ಸದುಪಯೋಗ ಹೇಗೆ? 46
ವಿವಾಹಿತ ಸ್ತ್ರೀ-ಪುರುಷರ ಪರಸ್ಪರ ವರ್ತನೆ 48
ಪರಸ್ಪರ ಪ್ರೀತಿಯಿಲ್ಲದ ದಾಂಪತ್ಯದ ಸರ್ವನಾಶ 48
ಪರೀಕ್ಷಾಪೂರ್ವಕವಾದ ಸ್ವಯಂವರ ವಿವಾಹವೇ ಶ್ರೇಷ್ಠ 49
ಪಶುರೂಪೀ ಮನುಷ್ಯಜಾತಿಯ ಲಕ್ಷಣ 49
ಮನುಷ್ಯತ್ವದ ಲಕ್ಷಣ 50
ಯಾವಾಗಲೂ ಸತ್ಯವ್ಯವಹಾರ ಮಾಡಬೇಕು! 50

ದೃಷ್ಟಾಂತ-[10] **ಮೊಂಡು ಮಂಡೆಯ ಗುಂಡಪ್ಪನ 'ಪ್ರಗಲ್ಭತ್ವ'!** 51
ಜಿಂಕೆಯ ಪಾದಕ್ಕೆ ಬೀಸೇಕಲ್ಲು 51
ಕಂಬದಿಂದ ಕೈ ಬಿಡಿಸುವ 'ಉಪಾಯ'! 52
ನೀತಿ 54

ಸತ್ಯಾಸತ್ಯವ್ಯವಹಾರಗಳ ಲಾಭ-ಹಾನಿ 54

ದೃಷ್ಟಾಂತ -[11] **ಸುಳ್ಳುಗಿರಾಕಿಯ ಮತ್ತು ಮೋಸಗಾರ ಜವಳಿ ವ್ಯಾಪಾರಿಯ ಚೌಕಾಸಿ ಮತ್ತು ಜಗಳ** 55
ನೀತಿ 59

ದೃಷ್ಟಾಂತ-[12] **ಧಾರ್ಮಿಕರ ವ್ಯಾಪಾರ** 59

ದೃಷ್ಟಾಂತ-[13] **ಸತ್ಯವಂತ ಜವಳಿ ವ್ಯಾಪಾರಿ; ಮತ್ತು ಸುಳ್ಳು ಗಿರಾಕಿಯ ಚೌಕಾಸಿ** 59

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದೃಷ್ಟಾಂತ-[14]	**ಸತ್ಯವಂತ ಗಿರಾಕಿ ; ಮತ್ತು ಮೋಸಗಾರ ಜವಳಿ ವ್ಯಾಪಾರಿಯ ಚೌಕಾಸಿ**	60
	ನೀತಿ	61
ಆತ್ಮಾ-ಪರಮಾತ್ಮರ ಸಾಕ್ಷಿಯ ಅರಿವಿಲ್ಲದೇ ಸತ್ಯವ್ಯವಹಾರವಿಲ್ಲ		61
ದೃಷ್ಟಾಂತ-[15]	**ಪರಮಾತ್ಮನ ಸಾಕ್ಷಿಯ ಬಗ್ಗೆ ಪರೀಕ್ಷೆ**	62
	ನೀತಿ	63
ಜ್ಞಾನವಂತರೇ ಸತ್ಯದಲ್ಲಿ ದೃಢರಾಗಿರಬಲ್ಲರು		63
ದೃಷ್ಟಾಂತ -[16]	**ಮೂರ್ಖರಾಜನ ಲಂಚಕೋರ ಅಧಿಕಾರಿಗಳ ಪ್ರಪಂಚ**	64
	ಮೊದಲನೆಯ ಮೂರ್ಖಯಾಚಕನ ಜಪ	64
	ಎರಡನೆಯ ಮೂರ್ಖಯಾಚಕನ ಜಪ	67
	ಮೂರನೆಯ ಮೂರ್ಖಯಾಚಕನ ಜಪ	68
	ನಾಲ್ಕನೆಯ ಮೂರ್ಖಯಾಚಕನ ಜಪ	68
	ನೀತಿ	69
ದೃಷ್ಟಾಂತ-[17]	**ಧಾರ್ಮಿಕ ವಿದ್ವಾಂಸನಾದ ರಾಜನ ವ್ಯವಹಾರಪಟುತ್ವ**	69
	ಧೂರ್ತಯಾಚಕನಿಗೆ 'ಅರ್ಧಚಂದ್ರ'	69
	ವಿದ್ವಾಂಸನಾದ ಯಾಚಕನಿಗೆ ಸತ್ಕಾರ	70
	ನೀತಿ	71
ದಾನಾಭಕ್ಷ-ದಾನಾಧ್ಯಕ್ಷರ ಪರಿಭಾಷೆ		71
ರಾಜನ ಅರ್ಹತೆಗಳು ಯಾವುವು?		71
ಪ್ರಜೆಗಳ ಅರ್ಹತೆಗಳು ಯಾವುವು?		72
ರಾಜಾ-ಪ್ರಜೆಗಳ ಅನರ್ಹತೆ-ಅರ್ಹತೆ		72
ದೃಷ್ಟಾಂತ-[18]	**ಏರುಪೇರು ನಗರಿಯ ಇಲು ದೊರೆಯ '(ಅ)ನ್ಯಾಯ ವ್ಯವಸ್ಥೆ'**	73
	ಇಲು ದೊರೆಯ ಪ್ರಥಮ ದರ್ಬಾರು	73
	ಇಲುದೊರೆಯ 'ಇಲು' ಸಂವಿಧಾನ	74
	ಏರುಪೇರು ನಗರಿಗೆ ಗುರು-ಶಿಷ್ಯರ ಆಗಮನ	74
	ಕಳ್ಳತನ; 'ಕಳ್ಳ'ನ ಬಂಧನ	75
	ಶೂಲಕ್ಕೇರಿಸಲು ರಾಜಾಜ್ಞೆ	75
	ಸಮಾನಸ್ವಭಾವವುಳ್ಳವರಲ್ಲಿ ಮೈತ್ರಿ	76

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಿಪಾಯಿಗಳ ಧರ್ಮಸಂಕಟ 76

ಶಿಷ್ಯನಿಗೆ ಪೀಕಲಾಟ 77

ಶೂಲದ ಬಳಿ ಗುರು-ಶಿಷ್ಯರ ಕಾದಾಟ 78

ಐಲುದೊರೆಯ ದರ್ಬಾರಿನಲ್ಲಿ ಬದನೆಕಾಯಿ ಪ್ರಶಂಸೆ 78

ಭಟ್ಟಂಗಿಗಳ ಕುತಂತ್ರ 79

ರಾತ್ರಿಯಲ್ಲಿ ಐಲುದೊರೆಯ ಫಜೀತಿ 79

ಭಟ್ಟಂಗಿಗಳ ಚಿಂತೆ 80

ದರ್ಬಾರಿನಲ್ಲಿ ಬದನೆಕಾಯಿಯ ನಿಂದೆ 80

ಭಟ್ಟಂಗಿಗಳಿಂದ 'ರಾಜಧರ್ಮ'ದ (?) ಉಪದೇಶ 82

ಐಲುದೊರೆ 'ಸಾಕ್ಷಾತ್ ಪರಮೇಶ್ವರ!' 82

ಶೂಲಕ್ಕೇರಿ ಐಲುದೊರೆಯ ಮರಣ 83

'ಪ್ರಕಾವಶವತೀ' ನಗರಿಗೆ ನ್ಯಾಯವ್ಯವಸ್ಥೆ ವಾಪಸು 84

ದೇಶದ ಅಭಾಗ್ಯ-ಸೌಭಾಗ್ಯಗಳ ಪರಿಣಾಮ 85

ಎಲ್ಲರಿಗೂ ವಿದ್ಯೆ, ಧರ್ಮ ಮತ್ತು ಶಿಕ್ಷಣ ದೊರಕಬೇಕು! 86

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭೂಮಿಕಾ

ನಾನು ಈ ಜಗತ್ತಿನಲ್ಲಿ ಪರೀಕ್ಷೆ ಮಾಡಿ ನಿಶ್ಚಯಿಸಿರುವುದೇನೆಂದರೆ, ಯಾವನು ಧರ್ಮಯುಕ್ತ ವ್ಯವಹಾರದಲ್ಲಿ ಸರಿ ಸರಿಯಾಗಿ ವರ್ತಿಸುತ್ತಾನೋ, ಅವನಿಗೆ ಎಲ್ಲೆಡೆಯೂ ಸುಖಲಾಭವಾಗುತ್ತದೆ, ಮತ್ತು ಯಾವನು ವಿಪರೀತವಾಗಿ ವರ್ತಿಸುತ್ತಾನೋ, ಅವನು ಯಾವಾಗಲೂ ದುಃಖಿತನಾಗಿ ತನ್ನ ಹಾನಿಯನ್ನು ಮಾಡಿಕೊಂಡುಬಿಡುತ್ತಾನೆ.

ನೋಡಿರಿ! ಯಾವಾಗ ಯಾವನಾದರೂ ಸಭ್ಯ ಮನುಷ್ಯನು ವಿದ್ವಾಂಸರ ಸಭೆಗೆ ಹೋಗಿ, ಅಥವಾ ಬೇರಾವನಾದರೊಬ್ಬನ ಬಳಿಗೆ ಹೋಗಿ, ತನ್ನ ಯೋಗ್ಯತೆಗೆ ಅನುಸಾರವಾಗಿ, ನಮ್ರತಾಪೂರ್ವಕವಾಗಿ **'ನಮಸ್ತೇ'** ಮೊದಲಾದುವನ್ನು ಮಾಡಿ, ಕುಳಿತುಕೊಂಡು, ಬೇರೆಯವನ ಮಾತನ್ನು ಧ್ಯಾನಕೊಟ್ಟು ಆಲಿಸಿ, ಅವನ ಸಿದ್ಧಾಂತವನ್ನು ತಿಳಿದುಕೊಂಡು, ನಿರಭಿಮಾನಿಯಾಗಿ, ಯುಕ್ತವಾದ ಪ್ರತ್ಯುತ್ತರ ಕೊಡುತ್ತಾನೋ, ಆಗ ಸಜ್ಜನರು ಪ್ರಸನ್ನರಾಗಿ, ಅವನ ಸತ್ಕಾರ ಮಾಡುತ್ತಾರೆ; ಮತ್ತು ಯಾವನು ಯದ್ವಾ-ತದ್ವಾ ಒದರುತ್ತಾನೋ, ಅವನ ತಿರಸ್ಕಾರ ಮಾಡುತ್ತಾರೆ!

ಯಾವಾಗ ಮನುಷ್ಯನು ಧಾರ್ಮಿಕನಾಗುತ್ತಾನೋ, ಆಗ ಅವನ ವಿಶ್ವಾಸ ಮತ್ತು ಆದರವನ್ನು ಶತ್ರುಗಳೂ ಕೂಡ, ಮಾಡುತ್ತಾರೆ!

ಮತ್ತು ಯಾವಾಗ ಅಧರ್ಮಿಯಾಗುತ್ತಾನೋ, ಆಗ ಅವನ ವಿಶ್ವಾಸ ಮತ್ತು ಆದರವನ್ನು ಮಿತ್ರರೂ ಕೂಡ, ಮಾಡುವುದಿಲ್ಲ!

ಆದುದರಿಂದ, ಯಾವನು ಸ್ವಲ್ಪ ವಿದ್ಯೆಯುಳ್ಳ ಮನುಷ್ಯನಾದರೂ ಕೂಡ, ಶ್ರೇಷ್ಠ ಶಿಕ್ಷಣವನ್ನು ಪಡೆದು, ಸುಶೀಲನಾಗುತ್ತಾನೋ, ಅವನ ಯಾವ ಕೆಲಸವೂ ಕೆಡುವುದಿಲ್ಲ.

ಆದುದರಿಂದ, ಮನುಷ್ಯರಿಗೆ ಉತ್ತಮ ಶಿಕ್ಷಣ ಕೊಡುವುದಕ್ಕಾಗಿ, ಎಲ್ಲಾ ವೇದಾದಿಶಾಸ್ತ್ರಗಳ, ಹಾಗೂ ಸತ್ಯಾಚಾರಿ ವಿದ್ವಾಂಸರ ರೀತಿಯಿಂದ ಯುಕ್ತವಾದ ಈ **'ವ್ಯವಹಾರಭಾನು'** ಗ್ರಂಥವನ್ನು ನಿರ್ಮಿಸಿ, ಪ್ರಕಟಿಸುತ್ತಿದ್ದೇನೆ. ಇದನ್ನು ನೋಡಿ-ನೋಡಿಸಿ, ಓದಿ-ಓದಿಸಿ, ಮನುಷ್ಯರು ತಮ್ಮ, ಮತ್ತು ತಮ್ಮ-ತಮ್ಮ ಸಂತಾನಗಳ, ಹಾಗೂ ವಿದ್ಯಾರ್ಥಿಗಳ ಆಚರಣೆಯನ್ನು ಅತ್ಯುತ್ತಮವನ್ನಾಗಿ ಮಾಡಿಕೊಳ್ಳಲಿ; ಎಂದರೆ, ತಾವೂ ಮತ್ತು ಅವರೆಲ್ಲರೂ ಯಾವಾಗಲೂ ಸುಖಿಗಳಾಗಿರಲಿ!

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಈ ಗ್ರಂಥದಲ್ಲಿ ಅಲ್ಲಲ್ಲಿ ಪ್ರಮಾಣಕ್ಕಾಗಿ ಸಂಸ್ಕೃತವನ್ನೂ ಮತ್ತು ಭಾಷೆಯನ್ನೂ* ಬರೆದಿದ್ದೇನೆ. ಮತ್ತು ಅನೇಕ ಉಪಯುಕ್ತ ದೃಷ್ಟಾಂತಗಳನ್ನು ಕೊಟ್ಟು, ಸುಧಾರಣೆಯ ಅಭಿಪ್ರಾಯವನ್ನು ಪ್ರಕಾಶಿಸಿದ್ದೇನೆ. ಇದನ್ನು ಎಲ್ಲರೂ ಸುಖದಿಂದ ತಿಳಿದುಕೊಂಡು, ಎಲ್ಲಾ ಉತ್ತಮ ವ್ಯವಹಾರಗಳನ್ನೂ ಸಾಧಿಸಿಕೊಳ್ಳುತ್ತಿರಲಿ!

ಕಾಶೀ

[ವಿಕ್ರಮ] ಸಂವತ್ 1936 **ದಯಾನಂದ ಸರಸ್ವತೀ**

ಫಾಲ್ಗುನ ಶುಕ್ಲ ಪೂಣಿಮಾ+

---

* ಎಂದರೆ, ಸಂಸ್ಕೃತದ ಮತ್ತು ಹಿಂದೀಭಾಷೆಯ ಪ್ರಮಾಣಗಳನ್ನು.

\+ ದಿ. 26-3-1880 ಇಸವಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಕಾಶಕರ ನುಡಿ

ವೈದಿಕಸಿದ್ಧಾಂತದ ಸಾರ್ವಭೌಮತ್ವದ ಬಗೆಗೆ ಮನಃಪೂರ್ವಕವಾಗಿ ಒಪ್ಪಿ, ಆ ನಿಟ್ಟಿನಲ್ಲಿ ನಡೆಯುವ ಸಂಕಲ್ಪ ಮಾಡಿದ ವ್ಯಕ್ತಿಯು ಎದುರಿಸಬೇಕಾದ ಸಮಸ್ಯೆ, ಎಂದರೆ ವಿಚಾರ ಮತ್ತು ಆಚಾರದ ಮಧ್ಯೆ ಇರುವ ದೊಡ್ಡ ಕಂದರ!

ಒಂದು ವೇಳೆ, ನಂಬಿದ ತತ್ವಗಳೊಂದಿಗೆ ನಡತೆಯ ಸಹಯೋಗವಿಲ್ಲದಿದ್ದರೆ, ಅದು ನೀಚ ಬದುಕೆನ್ನಿಸಿಕೊಳ್ಳುತ್ತದೆ. ಆದರೆ, ದಿನ್ಯನಿತ್ಯದ ಪರಿಶೀಲನೆ, ಚಿಂತನೆ, ಮತ್ತು ದೃಢನಿರ್ಧಾರಗಳಿಂದ ಮಾತ್ರ ತತ್ವ-ನಡತೆಗಳ ಒಡಂಬಡಿಕೆ ಸಾಧಿಸಲು ಸಾಧ್ಯ!

ಪರಿಸ್ಥಿತಿ ಹೀಗಿರುವಾಗ, ಸತ್ಯ-ಅಸತ್ಯಗಳ ವಿವೇಚನೆಯಿಂದ ದೈನಂದಿನ ವ್ಯವಹಾರದಲ್ಲಿ ಹೇಗೆ ವರ್ತಿಸಬೇಕು? ಯಾವ ವರ್ತನೆ ನಮ್ಮನ್ನು ಪ್ರಗತಿಪಥಕ್ಕೆ ಕೊಂಡೊಯ್ಯುತ್ತದೆ? ಯಾವ ತೀರ್ಮಾನ ನಮಗೆ ಮೇಲ್ನೋಟಕ್ಕೆ ಸರಿಯಾಗಿ ಕಂಡು ಬಂದು ನಂತರ, ಅಧಃಪತನಗೊಳಿಸುತ್ತದೆ? ಈ ಮೊದಲಾದ ವ್ಯವಹಾರಗಳಿಂದ ಒದಗುವ ಫಲಿತಾಂಶಗಳನ್ನು, ವಿವೇಕಪೂರ್ಣಸಾಂದರ್ಭಿಕ ಟೀಕೆ-ಟಿಪ್ಪಣಿಗಳೊಂದಿಗೆ ಸಾಮಾನ್ಯಮನುಷ್ಯರಿಗಾಗಿ ಸುಮಾರು 100 ವರ್ಷಗಳ ಹಿಂದೆ ಮಹರ್ಷಿ ದಯಾನಂದ ಸರಸ್ವತಿ ಅವರು ಹಿಂದೀಭಾಷೆಯಲ್ಲಿ **'ವ್ಯವಹಾರ ಭಾನು'**, ಎಂಬ ಸಣ್ಣ ಪುಸ್ತಿಕೆಯ ರೂಪದಲ್ಲಿ ಬರೆದಿರುತ್ತಾರೆ. ಇಂದಿಗೂ ಈ ಪುಸ್ತಿಕೆಯ ವಿಷಯವಸ್ತುವು ಬಹಳ ಅಮೂಲ್ಯವಾಗಿದ್ದು, ದೈನಂದಿನ ವ್ಯವಹಾರದಲ್ಲಿ ಒದಗುವ ಪರಿಸ್ಥಿತಿಯನ್ನು ಸುಧಾರಿಸಿ, ಉನ್ನತಿ ಸಾಧಿಸಲು ಅನುವಾಗುತ್ತದೆ.

ಈ ಪುಸ್ತಿಕೆಯನ್ನು ಪರಿಷ್ಕರಿಸಿ, ಅನುವಾದ ಮಾಡಿ, ಕರ್ನಾಟಕ ಆರ್ಯ ಪ್ರತಿನಿಧಿ ಸಭಾ—ಆಚಾರ್ಯರಾದ ಪ॥ ಉಪೇಂದ್ರ ಭೂಪಾಲರು ನಮ್ಮೆದುರಿಗಿಟ್ಟಿರುತ್ತಾರೆ. ವೇದ ವಿದ್ವಾಂಸರೂ, ಶಿಸ್ತಿನ ಸಿಪಾಯಿಗಳೂ, ಆದ ಆಚಾರ್ಯರು ಮಹರ್ಷಿ ದಯಾನಂದ ಕೃತ ಎಲ್ಲ ಗಂಥಗಳನ್ನೂ ಕನ್ನಡಕ್ಕೆ ಅನುವಾದಿಸಲು ಸಂಕಲ್ಪ ತಾಳಿ, ತಮ್ಮನ್ನು ವೇದಮಾತೆಯ ಸೇವೆಯಲ್ಲಿ ತೊಡಗಿಸಿಕೊಂಡು, ಈ ಗ್ರಂಥವನ್ನು ಮುದ್ರಿಸಲು ಪ್ರಮುಖ ಕಾರಣಕರ್ತರಾಗಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು!

"ವೇದ ಸಂಪದಾ" ಯೋಜನೆಯಡಿಯಲ್ಲಿ, **'ಜನಶ್ರೀ'** ವಿಭಾಗದಲ್ಲಿ 4ನೆಯ ಪುಷ್ಪವಾಗಿ ಹೊರಬರುತ್ತಿರುವ ಈ ಪುಸ್ತಿಕೆಯನ್ನು ಅಂದವಾಗಿ ಮುದ್ರಿಸಿದ **ಮೆ॥ ಪರಿಮಳ ಮುದ್ರಣಾಲಯ**ದವರಿಗೂ, ಹಾಗೂ ಸಮಸ್ತ ದಾನೀ ಮಹಾಶಯರಿಗೂ

CC-0. In Public Domain. Gurukul Kangri Collection, Haridwar

ನಮ್ಮ ಧನ್ಯವಾದಗಳನ್ನು ಅರ್ಪಿಸುತ್ತೇವೆ.
Digitized by Arya Samaj Foundation Chennai and eGangotri

ಈ ಪುಟ್ಟ ಪುಸ್ತಕವನ್ನು ಏಕಾಗ್ರಚಿತ್ತರಾಗಿ ಓದುಗರು ಓದಿ, ಇದರ ಮಹತ್ವವನ್ನು ಗ್ರಹಿಸಿ, ದೈನಂದಿನ ಆಚರಣೆಯಲ್ಲಿ ಅಳವಡಿಸಿಕೊಂಡರೆಂದರೆ, ನಮ್ಮ ಉದ್ದೇಶ್ಯ ಸಾರ್ಥಕವೆಂದು ಭಾವಿಸುತ್ತೇವೆ.

ಆರ್ಯಸಮಾಜ,
ವಿಶ್ವೇಶ್ವರ ಪುರಂ,
ಬೆಂಗಳೂರು,
ದಿನಾಂಕ : 13ನೇ ಫೆಬ್ರುವರಿ 1993

ಬಿ.ವಿ. ಯತಿರಾಜ್	**ಎ. ಸಂಜುಂಡಪ್ಪ**	**ರಮಾನಂದ ಆರ್ಯ**
ಕೋಶಾಧ್ಯಕ್ಷ	ಕಾರ್ಯದರ್ಶಿ	ಅಧ್ಯಕ್ಷ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

॥ಓ೩ಮ್॥

ವ್ಯವಹಾರಭಾನು

(ಮನುಷ್ಯರ ಸುಧಾರಣೆಗಾಗಿ ವ್ಯವಹಾರಶಿಕ್ಷಣ)

ಸುಖಗಳನ್ನು ಸಾಧಿಸಿಕೊಳ್ಳುವ ವ್ಯವಹಾರಗಳನ್ನು ಬಿಟ್ಟು, ವಿಪರೀತ ಆಚರಣೆಯನ್ನು ಮಾಡುವುದರಲ್ಲಿ ಪ್ರಸನ್ನವಾಗುವಂತಹ ಆತ್ಮವು ಯಾವ ಮನುಷ್ಯನದಿರಬಹುದು?

ಯಥಾಯೋಗ್ಯವಾಗಿ ವ್ಯವಹಾರವನ್ನು ಮಾಡದೇ, ಯಾವನಿಗಾದರೂ ಎಲ್ಲಾ ಸುಖವೂ ಉಂಟಾಗಬಲ್ಲದೇನು?

ಒಳ್ಳೆಯ ಶಿಕ್ಷಣದಿಂದ ಮನುಷ್ಯನು ಧರ್ಮ, ಅರ್ಥ, ಕಾಮ ಮತ್ತು ಮೋಕ್ಷದ ಫಲಗಳನ್ನು ಸಂಪಾದಿಸಿಕೊಳ್ಳಲಾರನೇನು? ಮತ್ತು ಇದಿಲ್ಲದೇ, ಪಶುವಿಗೆ ಸಮಾನನಾಗಿ ದುಃಖಿತನಾಗಿರುವುದಿಲ್ಲವೇನು?

ಯಾವ ಕಾರಣಕ್ಕಾಗಿ ಮನುಷ್ಯರೆಲ್ಲರೂ ಸುಶಿಕ್ಷಣದಿಂದ ಯುಕ್ತರಾಗುವುದು ಆವಶ್ಯಕವೋ, ಆ ಕಾರಣದಿಂದ, ಬಾಲಕನಿಂದ ಹಿಡಿದು ವೃದ್ಧರ ತನಕ ಮನುಷ್ಯರ ಸುಧಾರಣೆಯ ಪ್ರಯೋಜನಕ್ಕಾಗಿ ವ್ಯವಹಾರ ಸಂಬಂಧಿಯಾದ ಈ ಶಿಕ್ಷಣದ ವಿಧಾನ ಮಾಡಲಾಗುತ್ತದೆ.

ಪಂಡಿತನ ಲಕ್ಷಣಗಳು

ಪ್ರಶ್ನೆ: ಎಂತಹ ಮನುಷ್ಯರು ಓದಿಸುವವರೂ, ಹಾಗೂ ಶಿಕ್ಷಣ ಕೊಡುವಂತಹವರೂ ಆಗಿರಬೇಕು?

ಉತ್ತರ: ಓದಿಸುವವರ ಲಕ್ಷಣಗಳೇನೆಂದರೆ—

ಆತ್ಮಜ್ಞಾನಂ ಸಮಾರಂಭಸ್ತಿತಿಕ್ಷಾ ಧರ್ಮನಿತ್ಯತಾ ।
ಯಮರ್ಥಾ ನಾಪಕರ್ಷಂತಿ ಸ ವೈ ಪಂಡಿತ ಉಚ್ಯತೇ * ॥

[ಮಹಾಭಾರತ, ಉದ್ಯೋಗಪರ್ವ, ವಿದುರಪ್ರಜಾಗರ, ಅಧ್ಯಾಯ 33, ಶ್ಲೋಕ 15]

* ಇದು ಮತ್ತು ಈ ಮುಂದಿನ ಶ್ಲೋಕಗಳಿಗಾಗಿ 'ಸತ್ಯಾರ್ಥಪ್ರಕಾಶ', ಚತುರ್ಥ ಸಮುಲ್ಲಾಸ, ಪುಟ 190-192ನ್ನು ನೋಡಿ. 'ವಿದುರ ಪ್ರಜಾಗರ'ದಲ್ಲಿ ಇದು ಪ್ರಥಮ ಅಧ್ಯಾಯದ 20ನೆಯ ಶ್ಲೋಕವಾಗಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

[ಅರ್ಥ][1]:— ಯಾವನಿಗೆ ಪರಮಾತ್ಮನ ಮತ್ತು ಜೀವಾತ್ಮನ ಯಥಾರ್ಥಜ್ಞಾನವಿದೆಯೋ, ಯಾವನು ಆಲಸ್ಯವನ್ನು ಬಿಟ್ಟು, ಯಾವಾಗಲೂ ಉದ್ಯೋಗಿಯಾಗಿರುತ್ತಾನೋ, ಸುಖ-ದುಃಖ ಮೊದಲಾದುವನ್ನು ಸಹಿಸಿಕೊಂಡು, ನಿತ್ಯವೂ ಧರ್ಮದ ಸೇವನೆ ಮಾಡುವವನಾಗಿರುತ್ತಾನೋ, ಯಾವನನ್ನು ಯಾವ ಪದಾರ್ಥವೂ ಧರ್ಮದಿಂದ ಬೇರೆ ಮಾಡಿ, ಅಧರ್ಮದ ಕಡೆಗೆ ಎಳೆಯಲಾರದೋ, ಅವನು '**ಪಂಡಿತ**', ಎಂದು ಕರೆಯಲ್ಪಡುತ್ತಾನೆ. [1]

ನಿಷೇವತೇ ಪ್ರಶಸ್ತಾನಿ ನಿಂದಿತಾನಿ ನ ಸೇವತೇ ।
ಅನಾಸ್ತಿಕಃ ಶ್ರದ್ದಧಾನ ಏತತ್ ಪಂಡಿತಲಕ್ಷಣಮ್ ॥ 2 ॥

[ಮಹಾಭಾರತ, ಉದ್ಯೋಗ, ವಿದುರ, 33.16]

[ಅರ್ಥ][2] :— ಯಾವನು ಯಾವಾಗಲೂ ಈ ಪ್ರಶಂಸಿತವಾದ ಧರ್ಮಯುಕ್ತ ಕರ್ಮಗಳನ್ನು ಮಾಡುವವನೋ, ಮತ್ತು ನಿಂದಿತವಾದ ಅಧರ್ಮಯುಕ್ತ ಕರ್ಮಗಳನ್ನು ಎಂದಿಗೂ ಸೇವಿಸುವುದಿಲ್ಲವೋ, ಯಾವನು ಎಂದಿಗೂ ಈಶ್ವರ, ವೇದ ಮತ್ತು ಧರ್ಮದ ವಿರೋಧಿಯಲ್ಲವೋ, ಮತ್ತು ಪರಮಾತ್ಮಾ, ಸತ್ಯವಿದ್ಯೆ, ಹಾಗೂ ಧರ್ಮದಲ್ಲಿ ದೃಢವಿಶ್ವಾಸಿಯೋ, ಆ ಮನುಷ್ಯನೇ '**ಪಂಡಿತ**'ನ ಲಕ್ಷಣದಿಂದ ಯುಕ್ತನಾಗಿರುತ್ತಾನೆ. [2]

ಕ್ಷಿಪ್ರಂ ವಿಜಾನಾತಿ ಚಿರಂ ಶೃಣೋತಿ ವಿಜ್ಞಾಯ ಚಾರ್ಥಂ ಭಜತೇ ನ ಕಾಮಾತ್ ।
ನಾಸಂಪೃಷ್ಟೋ ಹ್ಯುಪಯುಂಕ್ತೇ ಪರಾರ್ಥೇ ತತ್ ಪ್ರಜ್ಞಾನಂ ಪ್ರಥಮಂ ಪಂಡಿತಸ್ಯ ॥3॥

[ಮಹಾಭಾರತ, ಉದ್ಯೋಗ, ವಿದುರ 33. 22]

[ಅರ್ಥ][3]:— ಯಾವನು ವೇದಾದಿಶಾಸ್ತ್ರಗಳನ್ನೂ, ಮತ್ತು ಇತರರಿಂದ ಹೇಳಿದ ಅಭಿಪ್ರಾಯವನ್ನೂ ಶೀಘ್ರವಾಗಿಯೇ ತಿಳಿಯಬಲ್ಲನೋ, ದೀರ್ಘಕಾಲದ ತನಕ

1. ಅರ್ಥ:— [ಯಾವನಲ್ಲಿ] (ಆತ್ಮಜ್ಞಾನಮ್) ಆತ್ಮನ ಬಗ್ಗೆ ತಿಳುವಳಿಕೆಯೂ, (ಸಮಾರಂಭಃ) ಉತ್ತಮ ರೀತಿಯಲ್ಲಿ [ಕಾರ್ಯವನ್ನು] ಆರಂಭಿಸುವ [ಯೋಗ್ಯತೆಯೂ] (ತಿತಿಕ್ಷಾ) ಸಹನ ಶಕ್ತಿಯೂ,(ಧರ್ಮನಿತ್ಯತಾ) ಧರ್ಮದಲ್ಲಿ ದೃಢತ್ವವೂ [ಇರುತ್ತದೋ, ಮತ್ತು] (ಯಮ್) ಯಾವನನ್ನು (ಅರ್ಥಾಃ) ವಿಷಯಗಳು (ನ ಅಪಕರ್ಷಂತಿ) ಕೆಳಕ್ಕೆ ಎಳೆಯುವುದಿಲ್ಲವೋ, (ಸಃ ವೈ) ಅವನೇ ನಿಶ್ಚಯವಾಗಿ (ಪಂಡಿತಃ) ಪಂಡಿತ, ಎಂದು (ಉಚ್ಯತೇ) ಕರೆಯಲ್ಪಡುತ್ತಾನೆ.

2. ಅರ್ಥ:— (ಪ್ರಶಸ್ತಾನಿ) ಪ್ರಶಂಸಿತ [ಕರ್ಮಗಳನ್ನು] (ನಿಷೇವತೇ) ಆಚರಿಸುತ್ತಾನೆ. (ನಿಂದಿತಾನಿ) ನಿಂದಿತ [ಕರ್ಮಗಳನ್ನು] (ನ ಸೇವತೇ) ಆಚರಿಸುವುದಿಲ್ಲ. (ಅನಾಸ್ತಿಕಃ) ನಾಸ್ತಿಕನಾಗಿರುವುದಿಲ್ಲ. (ಶ್ರದ್ದಧಾನಃ) ಶ್ರದ್ಧೆಯುಳ್ಳವನು [ಆಗಿರುತ್ತಾನೆ]. (ಏತತ್) ಇದು(ಪಂಡಿತಲಕ್ಷಣಮ್) ಪಂಡಿತನ ಲಕ್ಷಣ [ಆಗಿರುತ್ತದೆ.]

3. ಅರ್ಥ:— (ಕ್ಷಿಪ್ರಮ್) ಶೀಘ್ರವಾಗಿ (ವಿಜಾನಾತಿ) ತಿಳಿದುಕೊಂಡು ಬಿಡುತ್ತಾನೆ. (ಚಿರಮ್) ಹೆಚ್ಚು ಹೊತ್ತಿನ ತನಕ (ಶೃಣೋತಿ) ಆಲಿಸುತ್ತಾನೆ. (ಚ) ಮತ್ತು (ಅರ್ಥಮ್) ವಸ್ತುವನ್ನು (ವಿಜ್ಞಾಯ) ವಿಶೇಷವಾಗಿ ತಿಳಿದುಕೊಂಡೇ, (ಭಜತೇ) ಸೇವಿಸುತ್ತಾನೆ; (ಕಾಮಾತ್ ನ) [ಕೇವಲ] ಅಭಿಲಾಷೆಯಿಂದಲ್ಲ! (ಪರಾರ್ಥೇ) ಇತರರ ವಿಷಯದಲ್ಲಿ (ಅಸಂಪೃಷ್ಟಃ) ಚೆನ್ನಾಗಿ ಪ್ರಶ್ನಿಸಲ್ಪಡದೇ (ನ ಉಪಯುಂಕ್ತೇ ಹಿ) [ಮಾತನ್ನು] ಪ್ರಯೋಗಿಸುವುದೇ ಇಲ್ಲ. (ತತ್) ಅದು (ಪಂಡಿತಸ್ಯ) ಪಂಡಿತನ (ಪ್ರಜ್ಞಾನಮ್) ಉತ್ಕೃಷ್ಟ ಬುದ್ಧಿಯ (ಪ್ರಥಮಮ್) ಪ್ರಥಮ [ಲಕ್ಷಣವಾಗಿರುತ್ತದೆ.]

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವೇದಾದಿಶಾಸ್ತ್ರಗಳ ಮತ್ತು ಧಾರ್ಮಿಕವಿದ್ವಾಂಸರ ವಚನಗಳನ್ನು ಧ್ಯಾನಕೊಟ್ಟು ಆಲಿಸಿ, ಸರಿ ಸರಿಯಾಗಿ ತಿಳಿಯಬಲ್ಲನೋ, ನಿರಭಿಮಾನಿಯೋ, ಶಾಂತನಾಗಿ ಇತರರೊಡನೆ [ಉತ್ತರ]–ಪ್ರತ್ಯುತ್ತರ ಕೊಡಬಲ್ಲನೋ, ಪರಮೇಶ್ವರನಿಂದ ಹಿಡಿದು ಪೃಥಿವೀಪರ್ಯಂತದ ಪದಾರ್ಥಗಳನ್ನು ತಿಳಿದುಕೊಂಡು, ಅವುಗಳಿಂದ ಉಪಕಾರ ತೆಗೆದುಕೊಳ್ಳುವುದರಲ್ಲಿ ತನು-ಮನ-ಧನಗಳಿಂದ ಪ್ರವೃತ್ತನಾಗಿ, ಕಾಮ, ಕ್ರೋಧ, ಲೋಭ, ಮೋಹ, ಭಯ, ಶೋಕ ಮೊದಲಾದ ದುಷ್ಟಗುಣಗಳಿಂದ ಬೇರೆಯಿರುತ್ತಾ, ಯಾವನಿಂದಲಾದರೂ ಪ್ರಶ್ನಿಸಲ್ಪಟ್ಟಾಗ, ಅಥವಾ ಇಬ್ಬರ ಸಂವಾದದಲ್ಲಿ ಪ್ರಸಂಗವಿಲ್ಲದೇ, ಅಯುಕ್ತ ಭಾಷಣವೇ ಮೊದಲಾದ ವ್ಯವಹಾರಗಳನ್ನು ಮಾಡದಂತಹ ಮನುಷ್ಯನೋ; ಅದೇ '**ಪಂಡಿತ**'ನ ಬುದ್ಧಿವಂತಿಕೆಯ ಪ್ರಥಮ ಲಕ್ಷಣವಾಗಿರುತ್ತದೆ. [3]

ನಾಪ್ರಾಪ್ಯಮಭಿವಾಂಛಂತಿ ನಷ್ಟಂ ನೇಚ್ಛಂತಿ ಶೋಚಿತುಮ್ ।
ಆಪತ್ಸು ಚ ನ ಮುಹ್ಯಂತಿ ನರಾಃ ಪಂಡಿತಬುದ್ಧಯಃ ॥ 4 ॥

[**ಮಹಾಭಾರತ, ಉದ್ಯೋಗ,** ವಿದುರ 33. 23]

[ಅರ್ಥ][4]:— ಯಾವ ಮನುಷ್ಯರು ಪ್ರಾಪ್ತಿ ಮಾಡಿಕೊಳ್ಳಲು ಅಯೋಗ್ಯವಾದ ಪದಾರ್ಥಗಳ ಇಚ್ಛೆಯನ್ನು ಎಂದಿಗೂ ಮಾಡುವುದಿಲ್ಲವೋ, ಕಾಣೆಯಾದಾಗ, ಅಥವಾ ಯಾವುದಾದರೂ ಪದಾರ್ಥವು ನಷ್ಟ-ಭ್ರಷ್ಟವಾಗಿ ಹೋದಾಗ ಶೋಕ ಮಾಡುವ ಅಭಿಲಾಷೆಯನ್ನಿಟ್ಟು ಕೊಳ್ಳುವುದಿಲ್ಲವೋ, ಮತ್ತು ದೊಡ್ಡ ದೊಡ್ಡ ದುಃಖಗಳಿಂದ ಕೂಡಿದ ವ್ಯವಹಾರಗಳು ದೊರೆತಾಗಲೂ ಕೂಡ, ಮೂಢರಾಗಿ ಗಾಬರಿಗೊಳ್ಳುವುದಿಲ್ಲವೋ, ಆ ಮನುಷ್ಯರು '**ಪಂಡಿತರ ಬುದ್ಧಿ**'ಯಿಂದ ಕೂಡಿದವರು, ಎಂದು ಕರೆಯಲ್ಪಡುತ್ತಾರೆ. [4]

ಪ್ರವೃತ್ತವಾಕ್ ಚಿತ್ರಕಥ ಊಹವಾನ್ ಪ್ರತಿಭಾನವಾನ್ ।
ಆಶು ಗ್ರಂಥಸ್ಯ ವಕ್ತಾ ಚ ಯಃ ಸ ಪಂಡಿತ ಉಚ್ಯತೇ ॥ 5 ॥

[**ಮಹಾಭಾರತ, ಉದ್ಯೋಗ, ವಿದುರ,** 33. 28]

[ಅರ್ಥ][5]:— ಯಾವನ ಮಾತು ಎಲ್ಲಾ ವಿದ್ಯೆಗಳಲ್ಲೂ ಗತಿಶೀಲವಾಗಿದೆಯೋ, ಯಾವನು ಅತ್ಯಂತ ಅದ್ಭುತ ವಿದ್ಯೆಗಳ ಕಥನ ಮಾಡಬಲ್ಲನೋ, ತಿಳಿಯದ ಪದಾರ್ಥಗಳನ್ನು ತರ್ಕದಿಂದ

4. ಅರ್ಥ :— (**ಪಂಡಿತಬುದ್ಧಯಃ**) ಪಂಡಿತನ ಬುದ್ಧಿಯುಳ್ಳವರಾದ (**ನರಾಃ**) ಮನುಷ್ಯರು (**ಅಪ್ರಾಪ್ತಮ್**) ಸಿಗದುದನ್ನು (**ನ ಅಭಿ ವಾಂಛ**) ಇಚ್ಛಿಸ ುವ ುದಿಲ್ಲ(**ನಷ್ಟಮ್**) ನಾಶ ವಾದ ುದ (**ಶೋಚಿತುಮ್**) ದುಃಖ ಪಡುವುದಕ್ಕಾಗಿ (**ನ ಇಚ್ಛಂತಿ**) ಇಚ್ಛಿಸುವುದಿಲ್ಲ. (**ಚ**) ಮತ್ತು (**ಆಪತ್ಸು**) ವಿಪತ್ತಿಗಳಲ್ಲಿ (**ನ ಮುಹ್ಯಂತಿ**) ಗಾಬರಿಗೊಳ್ಳುವುದಿಲ್ಲ.

5. ಅರ್ಥ:— (**ಯಃ**) ಯಾವನು (**ಪ್ರವೃತ್ತವಾಕ್**) ಗತಿಶೀಲವಾಣಿಯನ್ನುಳ್ಳವನಾಗಿದ್ದಾನೋ, (**ಚಿತ್ರಕಥಃ**) ಅದ್ಭುತ ಕಥನ ಮಾಡಬಲ್ಲವನೋ, (**ಊಹವಾನ್**) ತರ್ಕಶೀಲನೋ, (**ಪ್ರತಿಭಾನವಾನ್**) ವಿದ್ಯೆಯ ಪ್ರಾಕಟ್ಯ ಮಾಡಬಲ್ಲನೋ, (**ಚ**) ಮತ್ತು (**ಗ್ರಂಥಸ್ಯ**) ವಿದ್ಯೆಯ (**ಆಶು ವಕ್ತಾ**) ಶೀಘ್ರ ಅಧ್ಯಾಪಕನೋ, (**ಸಃ**) ಅವನು (**ಪಂಡಿತಃ**) ಪಂಡಿತ, ಎಂದು (**ಉಚ್ಯತೇ**) ಕರೆಯಲ್ಪಡುತ್ತಾನೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶೀಘ್ರವಾಗಿ ತಿಳಿಯಬಲ್ಲನೋ, [ಹಾಗೂ] ತಿಳಿಸಬಲ್ಲನೋ, ಆಲಿಸಿದ-ಯೋಚಿಸಿದ ವಿದ್ಯೆಗಳನ್ನು ಯಾವಾಗಲೂ ಪ್ರಕಟಮಾಡಬಲ್ಲನೋ, ಮತ್ತು ಯಾವನು ಎಲ್ಲಾ ವಿದ್ಯೆಗಳ ಗ್ರಂಥಗಳನ್ನು ಇತರ ಮನುಷ್ಯರಿಗೆ ಶೀಘ್ರವಾಗಿ ಕಲಿಸಬಲ್ಲ ಮನುಷ್ಯನಾಗಿರುತ್ತಾನೋ, ಅವನೇ **'ಪಂಡಿತ'**, ಎನಿಸುತ್ತಾನೆ. [5]

ಶ್ರುತಂ ಪ್ರಜ್ಞಾನುಗಂ ಯಸ್ಯ ಪ್ರಜ್ಞಾ ಚೈವ ಶ್ರುತಾನುಗಾ ।
ಅಸಂಭಿನ್ನಾರ್ಯಮರ್ಯಾದಃ ಪಂಡಿತಾಖ್ಯಾಂ ಲಭೇತ ಸಃ ॥ 6 ॥

[ಮಹಾಭಾರತ, ಉದ್ಯೋಗ, ವಿದುರ, 33. 29]

[ಅರ್ಥ][6]:— ಆಲಿಸಿದ ಮತ್ತು ಓದಿದ ಯಾವನ ವಿದ್ಯೆಯು ಅವನ ಬುದ್ಧಿಗೆ ಯಾವಾಗಲೂ ಅನುಕೂಲವಾಗಿರುತ್ತದೋ, ಮತ್ತು ಬುದ್ಧಿ, ಹಾಗೂ ಕ್ರಿಯೆ ಆಲಿಸಿದ-ಓದಿದ ವಿದ್ಯೆಗಳಿಗೆ ಅನುಸಾರವಾಗಿರುತ್ತವೋ, ಯಾವನು ಧಾರ್ಮಿಕ, ಶ್ರೇಷ್ಠ ಪುರುಷರ ಮರ್ಯಾದೆಯ ರಕ್ಷಕನೋ, ಮತ್ತು ದುಷ್ಟ ದರೋಡೆಕೋರರ ರೀತಿಯನ್ನು ವಿದೀರ್ಣ ಮಾಡುವಂತಹ ಮನುಷ್ಯನಾಗಿರುತ್ತಾನೋ, ಅವನೇ **'ಪಂಡಿತ'** ,ಎಂಬ ನಾಮಕರಣಕ್ಕೆ ಯೋಗ್ಯನಾಗಿರುತ್ತಾನೆ.[6]

ಎಲ್ಲಿ ಇಂತಿಂತಹ ಸತ್ಯಪುರುಷರೂ ಮತ್ತು ಬುದ್ಧಿವಂತರೂ ಕಲಿಸುವವರಾಗಿರುತ್ತಾರೋ, ಅಲ್ಲಿ ವಿದ್ಯೆ ಮತ್ತು ಧರ್ಮದ ವೃದ್ಧಿಯಾಗಿ, ಯಾವಾಗಲೂ ಆನಂದವೇ ಹೆಚ್ಚುತ್ತಾ ಹೋಗುತ್ತದೆ.

ಮತ್ತು ಎಲ್ಲಿ ಕೆಳಗೆ ಉಲ್ಲಿಖಿತವಾಗಿರುವ ಮೂಢರು ಕಲಿಯುವವರು-ಕಲಿಸುವವರಾಗಿರುತ್ತಾರೋ, ಅಲ್ಲಿ ಅವಿದ್ಯೆಯ, ಹಾಗೂ ಅಧರ್ಮದ ಉನ್ನತಿಯಾಗಿ, ದುಃಖವೇ ಹೆಚ್ಚುತ್ತಾ ಹೋಗುತ್ತದೆ.

ಮೂರ್ಖನ ಲಕ್ಷಣಗಳು

ಪ್ರಶ್ನೆ: ಎಂತಹ ಮನುಷ್ಯರು ಕಲಿಸುವವರೂ ಮತ್ತು ಉಪದೇಶ ಮಾಡುವವರೂ ಆಗಬಾರದು?

ಉತ್ತರ:

ಅಶ್ರುತಶ್ಚ ಸಮುನ್ನದ್ಧೋ ದರಿದ್ರಶ್ಚ ಮಹಾಮನಾಃ ।
ಅರ್ಥಾಂಶ್ಚಾಕರ್ಮಣಾ ಪ್ರೇಪ್ಸುರ್ಮೂಢ ಇತ್ಯುಚ್ಯತೇ ಬುಧೈಃ ॥ 1 ॥*

[ಮಹಾಭಾರತ, ಉದ್ಯೋಗ, ವಿದುರ, 33. 30]

---

6. **ಅರ್ಥ**:—(ಯಸ್ಯ) ಯಾವನ (ಶ್ರುತಮ್) ಆಲಿಸಿದ [ವಿದ್ಯೆಯು] (ಪ್ರಜ್ಞಾನುಗಮ್) ಬುದ್ಧಿಯ ಅನುಗಮನ ಮಾಡುವಂತಹುದು [ಆಗಿರುತ್ತದೋ,] (ಚ) ಮತ್ತು (ಪ್ರಜ್ಞಾ ಏವ) ಬುದ್ಧಿಯೂ ಕೂಡ, (ಶ್ರುತಾನುಗಾ) ಆಲಿಸಿದ [ವಿದ್ಯೆಯ] ಅನುಗಮನ ಮಾಡುವಂತಹುದು [ಆಗಿರುತ್ತದೋ: ಹಾಗೂ ಯಾವನು] (ಅಸಂಭಿನ್ನಾರ್ಯಮರ್ಯಾದಃ) ಶ್ರೇಷ್ಠರ ನಡವಳಿಕೆಯನ್ನು ಮುರಿಯದವನು[ಆಗಿರುತ್ತಾನೋ,] (ಸಃ) ಅವನು (ಪಂಡಿತಾಖ್ಯಾಮ್) 'ಪಂಡಿತ', ಎಂಬ ಹೆಸರನ್ನು (ಲಭೇತ) ಪಡೆದುಕೊಳ್ಳುತ್ತಾನೆ.

* ಇದು, ಮತ್ತು ಮುಂದಿನ ಶ್ಲೋಕವು 'ಸತ್ಯಾರ್ಥ ಪ್ರಕಾಶ, ಚತುರ್ಥ ಸಮುಲ್ಲಾಸ, ಪುಟ192ರಲ್ಲಿ ವ್ಯಾಖ್ಯಾತವಾಗಿವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

[ಅರ್ಥ][1] :— ಯಾವನು ಯಾವ ವಿದ್ಯೆಯನ್ನೂ ಓದದೇ, ಮತ್ತು ಯಾವ ವಿದ್ವಾಂಸನ ಉಪದೇಶವನ್ನೂ ಆಲಿಸದೇ, ದೊಡ್ಡ ಗರ್ವಿಷ್ಠನಾಗಿರುತ್ತಾನೋ; ದರಿದ್ರನಾಗಿದ್ದರೂ ಕೂಡ, ದೊಡ್ಡ ದೊಡ್ಡ ಕೆಲಸಗಳನ್ನು [ಮಾಡಲು] ಇಚ್ಛಿಸುತ್ತಾನೋ[+], ಮತ್ತು ಏನೂ [ಕರ್ಮ] ಮಾಡದೇ, ದೊಡ್ಡ ದೊಡ್ಡ ಫಲಗಳ ಇಚ್ಛೆ ಮಾಡುವಂತಹವನಾಗಿರುತ್ತಾನೋ, [ಅವನು ಬುದ್ಧಿವಂತರುಗಳಿಂದ '**ಮೂಢ**', ಎಂದು ಕರೆಯಲ್ಪಡುತ್ತಾನೆ.]

ದೃಷ್ಟಾಂತ –[1]

(ಬಡಾಯಿಖಾನ್ ಮತ್ತು ವರ್ತಕನ ದಿವಾಸ್ವಪ್ನ)

'**ಬಡಾಯಿಖಾನ್**', ಎಂಬ ಹೆಸರಿನ ಒಬ್ಬ ದರಿದ್ರನು ಯಾವುದೋ ಗ್ರಾಮದಲ್ಲಿರುತ್ತಿದ್ದನು.

ಅಲ್ಲಿಗೆ ಯಾವುದೋ, ನಗರದ ವರ್ತಕನು ಹತ್ತು ರೂಪಾಯಿಯ ಸಾಲ ಪಡೆದು, ತುಪ್ಪವನ್ನು ಕೊಂಡುಕೊಳ್ಳಲು ಬಂದಿದ್ದನು. ಅವನು ತುಪ್ಪವನ್ನು ಕೊಂಡು, ಗಡಿಗೆಯಲ್ಲಿ ತುಂಬಿ, ಯಾವನಾದರೂ ಕೂಲಿಯ ಹುಡುಕಾಟದಲ್ಲಿದ್ದನು. ಅಲ್ಲಿಗೆ [ಸರಿಯಾಗಿ] ಬಡಾಯಿಖಾನ್ ಬಂದು ಸೇರಿದನು.

[ವರ್ತಕನು] ಅವನನ್ನು —

'ಈ ಗಡಿಗೆಯನ್ನು ಮೂರು 'ಕೋಸ'* ತೆಗೆದುಕೊಂಡು ಹೋಗುವುದಕ್ಕಾಗಿ ಎಷ್ಟು ಕೂಲಿ ತೆಗೆದುಕೊಳ್ಳುತ್ತೀಯೆ?', ಎಂದು ಕೇಳಿದನು.

ಅವನು[+]— 'ಎಂಟಾಣೆ!', ಎಂದು ಹೇಳಿದನು.

ಆಗ, ವರ್ತಕನು— 'ನಾಲ್ಕಾಣೆ ತೆಗೆದುಕೊಳ್ಳುವೆಯಾದರೆ, ತೆಗೆದುಕೋ', ಎಂದು ಹೇಳಿದನು.

ಅವನು— 'ಸರಿ, ಆಗಲಿ', ಎಂದು ಹೇಳಿದನು.

ಬಡಾಯಿಖಾನನು ಗಡಿಗೆಯನ್ನು [ತಲೆಯ ಮೇಲೆ], ಹೊತ್ತುಕೊಂಡು, ಮುಂದೆ ಹೊರಟನು.

---

1. **ಅರ್ಥ:— (ಅಶ್ರುತಃ) [ವಿದ್ಯೆಯನ್ನು] ಆಲಿಸದೇ [ಇದ್ದರೂ] (ಚ) ಕೂಡ, (ಸಮುನ್ನದ್ಧಃ) ಉದ್ದಂಡನಾಗಿರುವವನೂ, (ದರಿದ್ರಃ) ದರಿದ್ರನು [ಆಗಿದ್ದರೂ,] (ಚ) ಕೂಡ, (ಮಹಾಮನಾಃ) ದೊಡ್ಡ ಉದಾರಿಯೂ, (ಚ) ಮತ್ತು (ಅಕರ್ಮಣಾ) ಪುರುಷಾರ್ಥ ಮಾಡದೇನೇ, (ಅರ್ಥಾನ್) ಫಲಗಳನ್ನು (ಪ್ರೇಪ್ಸುಃ) ಪಡೆಯಲು ಇಚ್ಛಿಸುವವನೂ [ಆದವನು] (ಬುಧೈಃ) ಬುದ್ಧಿವಂತರಿಂದ (ಮೂಢಃ) ಮೂರ್ಖ, (ಇತಿ) ಎಂದು (ಉಚ್ಯತೇ) ಕರೆಯಲ್ಪಡುತ್ತಾನೆ.**

\+ **'ಮಹಾಮನಾಃ, ಎಂದರೆ ಅತಿ ಉದಾರಿ, ಎಂಬ ಅರ್ಥ ಇಲ್ಲಿ ಸೂಕ್ತವಾಗಿದೆ.**

* **ಎಂದರೆ, ಆರು ಮೈಲಿ**

\+ **ಬಡಾಯಿಖಾನ್**

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ವರ್ತಕನ ಗಾಳಿಗೋಪುರ)

ವರ್ತಕನು ಹಿಂದೆ ಹಿಂದೆ ನಡೆಯುತ್ತಾ, ಮನಸ್ಸಿನಲ್ಲಿ ಮಂಡಿಗೆ ಮುರಿಯತೊಡಗಿದ್ದನು—

"ಹತ್ತು ರೂಪಾಯಿಯ ತುಪ್ಪಕ್ಕೆ ಹನ್ನೊಂದು ರೂಪಾಯಿ ಬರುವುದು! ಹತ್ತು ರೂಪಾಯಿಯನ್ನು ಸಾಹುಕಾರನಿಗೆ ಕೊಟ್ಟು ಬಿಡುವೆನು! ಆಗ, ಒಂದು ರೂಪಾಯಿ ಮನೆಯ ಬಂಡವಾಳಕ್ಕಾಗುವುದು! ಹೀಗೆಯೇ ಹತ್ತು ಸಲ ತಿರುಗಾಡಿದರೆ, ಹತ್ತು ರೂಪಾಯಿ ಗಳಾಗುವುವು! ಹೀಗೆಯೇ ಹತ್ತರಿಂದ, ನೂರು, ನೂರರಿಂದ ಸಾವಿರ, ಸಾವಿರದಿಂದ ಲಕ್ಷ, ಲಕ್ಷದಿಂದ ಕೋಟಿ!!"

'ಮತ್ತೆ, ಎಲ್ಲಾ ಕಡೆಗಳಲ್ಲೂ ಸರಕಿನ ಅಂಗಡಿಗಳನ್ನು ಇಡುವೆನು! ಆಗ, ರಾಜರುಗಳೆಲ್ಲರೂ ನನ್ನ ಸಾಲಗಾರರಾಗಿ ಹೋಗುತ್ತಾರೆ!!"

ಈ ಮೊದಲಾಗಿ ದೊಡ್ಡ ದೊಡ್ಡ ಮಂಡಿಗೆಗಳನ್ನು ಮನಸ್ಸಿನಲ್ಲಿ ಮುರಿಯತೊಡಗಿದನು.

(ಬಡಾಯಿಖಾನನ ಗಾಳಿಗೋಪುರ)

ಈ ಕಡೆ ಬಡಾಯಿಖಾನ್ ಯೋಚಿಸತೊಡಗಿದನು—

"ನಾಲ್ಕು ಆಣೆಯ ಹತ್ತಿಯನ್ನು ಕೊಂಡು, ನೂಲನ್ನು ನೇಯ್ದು, ಮಾರುವೆನು. ಎಂಟಾಣೆ ಸಿಗುವುದು! ಮತ್ತೆ, ಎಂಟಾಣೆಯಿಂದ ಒಂದು ರೂಪಾಯಿ ಆಗಿಬಿಡುವುದು! ಮತ್ತೆ, ಹಾಗೆಯೇ ಒಂದರಿಂದ ಎರಡು ರೂಪಾಯಿ ಆಗುವುದು!

'ಅದರಿಂದ ಒಂದು ಮೇಕೆಯನ್ನು ಕೊಂಡುಕೊಳ್ಳುವೆನು! ಯಾವಾಗ ಅದಕ್ಕೆ ಮಕ್ಕಳು-ಮರಿಗಳಾಗುವುವೋ, ಆಗ ಅವುಗಳನ್ನು ಮಾರಿ, ಒಂದು ಹಸುವನ್ನು ಕೊಳ್ಳುವೆನು! ಅದರ ಮಕ್ಕಳು-ಮರಿಗಳನ್ನು ಮಾರಿ, ಒಂದು ಎಮ್ಮೆಯನ್ನು ಕೊಳ್ಳುವೆನು! ಅದರ ಮಕ್ಕಳು-ಮರಿಗಳನ್ನು ಮಾರಿ, ಒಂನು ಹೆಣ್ಣು ಕುದುರೆಯನ್ನು ಕೊಳ್ಳುವೆನು! ಅದರ ಮಕ್ಕಳು-ಮರಿಗಳನ್ನು ಮಾರಿ, ಒಂದು ಹೆಣ್ಣಾನೆಯನ್ನು ಕೊಳ್ಳುವೆನು!

'ಮತ್ತು ಅದರ ಮಕ್ಕಳು-ಮರಿಗಳನ್ನು ಮಾರಿ, ಇಬ್ಬರು ಹುಡುಗಿಯರನ್ನು ಮದುವೆ ಮಾಡಿಕೊಳ್ಳುವೆನು!

'ಒಬ್ಬಳ ಹೆಸರನ್ನು **'ಪ್ಯಾರೀ'**, ಎಂದೂ, ಮತ್ತು ಇನ್ನೊಬ್ಬಳ ಹೆಸರನ್ನು **'ಬೇಪ್ಯಾರೀ'**, ಎಂದೂ ಇಡುವೆನು!

'ಯಾವಾಗ ಪ್ಯಾರಿಯ ಮಕ್ಕಳು ತೊಡೆಯ ಮೇಲೆ ಕುಳಿತುಕೊಳ್ಳುವುದಕ್ಕಾಗಿ ಬರುವರೋ, ಆಗ — 'ಮಕ್ಕಳೇ! ಬನ್ನಿ, ಕುಳಿತುಕೊಳ್ಳಿರಿ', ಎಂದು ಹೇಳುವೆನು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

"ಯಾವಾಗ ಬೇಪ್ಯಾರಿಯ ಮಕ್ಕಳು ಬಂದು — 'ನಾವೂ ಕುಳಿತುಕೊಳ್ಳೋಣವೇ?', ಎಂದು ಕೇಳಿದಾಗ, — 'ಇಲ್ಲ! ಇಲ್ಲ!!', ಎಂದು ಹೇಳಿ ಬಿಡುವೆನು!"

पुस्तकालय गुरुकुल कांगड़ी विश्वविद्यालय

(ಗಾಳಿಗೋಪುರ ಉರುಳಿತು!)

ಹೀಗೆ, ಹೇಳಿ, ತಲೆಯನ್ನು ಅಲ್ಲಾಡಿಸಿಬಿಟ್ಟನು. ಗಡಿಗೆ ಬಿದ್ದು ಒಡೆದು ಹೋಯಿತು! ಮತ್ತು ತುಪ್ಪವು ನೆಲದ ಮೇಲೆ ಹರಡಿ, ಧೂಳಿನಲ್ಲಿ ಸೇರಿಕೊಂಡಿತು!

ವರ್ತಕನು ಅಳತೊಡಗಿದನು! ಮತ್ತು ಬಡಾಯಿಖಾನನೂ ಕೂಡ, ಅಳತೊಡಗಿದನು!

ವರ್ತಕನು ಬಡಾಯಿಖಾನನಿಗೆ—'ತುಪ್ಪವನ್ನು ಏಕೆ ಬೀಳಿಸಿಬಿಟ್ಟೆ? ಮತ್ತೇಕೆ ಅಳುತ್ತಿದ್ದೀಯೆ? ನಿನ್ನ ಹಾನಿಯೇನಾಯಿತು?', ಎಂದು ಗದರಿಸಿದನು.

ಬಡಾಯಿಖಾನ್— ನಿನ್ನದೇನು ಕೆಟ್ಟಿತು! ನೀನೇಕೆ ಅಳುತ್ತಿದ್ದೀಯೆ?

ವರ್ತಕ — ನಾನು ಹತ್ತು ರೂಪಾಯಿ ಸಾಲ ಮಾಡಿ, ಮೊದಲೇ ತುಪ್ಪವನ್ನು ಕೊಂಡುಕೊಂಡಿದ್ದೆ. ಅದರ ಮೇಲೆ ದೊಡ್ಡ ದೊಡ್ಡ ಲಾಭಗಳ ವಿಚಾರ ಮಾಡಿದ್ದೆ. ನನ್ನದು ಅದೆಲ್ಲವೂ ಕೆಟ್ಟು ಹೋಯಿತಲ್ಲ? [ಮತ್ತೆ] ನಾನೇಕೆ ಅಳಬಾರದು?

ಬಡಾಯಿಖಾನ್—ನಿನ್ನದಂತೂ ಹತ್ತು ರೂಪಾಯಿ ಮೊದಲಾದುದಷ್ಟೇ ಹಾನಿಯಾಗಿದೆ. [ಆದರೆ], ನನ್ನದಂತೂ ಮಾಡಿ-ಮಾಡಿಸಿಟ್ಟ ಮನೆಯೇ ಹಾಳಾಯಿತಲ್ಲ? [ಮತ್ತೆ] ನಾನೇಕೆ ಅಳಬಾರದೂ?

ವರ್ತಕ— ನಿನ್ನ ಅಳುವಿನಿಂದ ನನ್ನ ತುಪ್ಪ ಬಂದು ಬಿಡುತ್ತದೇನು?

ಬಡಾಯಿಖಾನ್— ಹಾಗಾದರೆ, ನಿನ್ನ ಅಳುವಿನಿಂದ ನನ್ನ ಮನೆ ತಯಾರಾಗುತ್ತದೇನು! ನೀನು ದೊಡ್ಡ ಮೂರ್ಖನಾಗಿದ್ದೀಯೆ!

ವರ್ತಕ— ನೀನು ಮೂರ್ಖ! ನಿನ್ನ ಅಪ್ಪ [ಮೂರ್ಖ!!]

ಇಬ್ಬರೂ ಪರಸ್ಪರ ಒಬ್ಬರನ್ನೊಬ್ಬರು ಹೊಡೆಯ ತೊಡಗಿದರು!

ಹೊಡೆದು-ಬಡೆದು, ಬಡಾಯಿಖಾನನು ತನ್ನ ಮನೆಯ ಕಡೆಗೆ ಓಡಿಹೋದನು.

ಮತ್ತು ವರ್ತಕನು ಧೂಳಿನಲ್ಲಿ ಬೆರೆತಿದ್ದ ತುಪ್ಪವನ್ನು ಗಡಿಯ ಚೂರಿನಿಂದ ಎತ್ತಿಕೊಂಡು, ತನ್ನ ಮನೆಯ ದಾರಿ ಹಿಡಿದನು.

(ನೀತಿ)

ಈ ರೀತಿಯಾಗಿ ಸ್ವಸಾಮರ್ಥ್ಯವಿಲ್ಲದೇ, ಅಶಕ್ಯ ಮನೋರಥಗಳನ್ನು ಮಾಡುತ್ತಿರುವುದು ಮೂರ್ಖರ ಕೆಲಸವಾಗಿರುತ್ತದೆ.

ಮತ್ತು ಯಾವನು ಪರಿಶ್ರಮ ಮಾಡದೇ, ಪದಾರ್ಥಗಳನ್ನು ಪಡೆಯುವುದರಲ್ಲಿ ಉತ್ಸಾಹಿಯಾಗಿರುತ್ತಾನೋ, ಆ ಮನುಷ್ಯನನ್ನೇ ವಿದ್ವಾಂಸರು **'ಮೂರ್ಖ'**, ಎಂದು ಕರೆಯುತ್ತಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಮೂರ್ಖರ ಸಂಗ ಸದಾ ತ್ಯಾಜ್ಯ!)

ಅನಾಹೂತಃ ಪ್ರವಿಶತಿ ಅಪೃಷ್ಟೋ ಬಹು ಭಾಷತೇ ।
ಅವಿಶ್ವಸ್ತೇ ವಿಶ್ವಸಿತಿ ಮೂಢಚೇತಾ ನರಾಧಮಃ ॥ 2 ॥

[ಮಹಾಭಾರತ, ಉದ್ಯೋಗ, ವಿದುರ, 33. 36]

[ಅರ್ಥ][2]:— ಯಾವನು ಕರೆಯಲ್ಪಡದೇನೇ, ಅಲ್ಲಿ-ಇಲ್ಲಿ ಸಭೆ ಮೊದಲಾದ ಸ್ಥಾನಗಳಲ್ಲಿ ಪ್ರವೇಶಿಸಿ, ಸತ್ಕಾರವನ್ನೂ ಮತ್ತು ಉಚ್ಚಾಸನವನ್ನೂ ಇಚ್ಛಿಸುತ್ತಾನೋ, ಅಥವಾ ಎಲ್ಲಾ ಸತ್ಪುರುಷರಿಗೂ ಅವನ ಆಚರಣೆಯು ಅಪ್ರಿಯವಾಗುವಂತಹ ರೀತಿಯಲ್ಲಿ ಕುಳಿತುಕೊಳ್ಳುತ್ತಾನೋ, ಪ್ರಶ್ನಿಸಲ್ಪಡದೇನೇ, ಬಹಳವಾಗಿ ಯದ್ವಾ ತದ್ವಾ ಒದರುತ್ತಾನೋ, ವಿಶ್ವಾಸ ಇಡಲು ಅಯೋಗ್ಯರಾದವರಲ್ಲಿ ವಿಶ್ವಾಸವನ್ನಿಟ್ಟು ಸುಖಗಳ ಹಾನಿ ಮಾಡಿಕೊಂಡು ಬಿಡುತ್ತಾನೋ, ಆ ಮನುಷ್ಯನೇ '**ಮೂಢಬುದ್ಧಿ**', ಎಂದೂ ಮತ್ತು ಮನುಷ್ಯರಲ್ಲಿ '**ನೀಚ**', ಎಂದೂ ಕರೆಯಲ್ಪಡುತ್ತಾನೆ. [2]

ಎಲ್ಲಿ ಇಂತಿಂತಹ ಮೂಢ ಮನುಷ್ಯರು ಪಠನ-ಪಾಠನ ಮೊದಲಾದ ವ್ಯವಹಾರಗಳನ್ನು ಮಾಡುವವರಾಗಿರುತ್ತಾರೋ, ಅಲ್ಲಿ ಸುಖಗಳ ದರ್ಶನವೆಲ್ಲಿ ಬಂತು; ಆದರೆ, ದುಃಖಗಳ ಆಧಿಕ್ಯತೆಯಂತೂ ಉಂಟಾಗೇ ಆಗುತ್ತದೆ!

ಆದುದರಿಂದ, ಬುದ್ಧಿವಂತ ಜನರು ಇಂತಿಂತಹ ಮೂಢರ ಪ್ರಸಂಗವನ್ನು ಅಥವಾ ಇವರ ಜೊತೆ ಪಠನ-ಪಾಠನಕ್ರಿಯೆಯನ್ನು ವ್ಯರ್ಥವೆಂದು ತಿಳಿದುಕೊಂಡು, ಮೊದಲು ಹೇಳಿದ ಧಾರ್ಮಿಕ ವಿದ್ವಾಂಸರ ಸಂಪರ್ಕವನ್ನು ಮಾಡಿ, ಮತ್ತು ಅವರಿಂದಲೇ ವಿದ್ಯೆಯ ಅಭ್ಯಾಸವನ್ನು, ಪಡೆದುಕೊಂಡು, ಸುಶೀಲರೂ, ಬುದ್ಧಿವಂತರೂ ಆದ ವಿದ್ಯಾರ್ಥಿಗಳಿಗೇನೇ ಓದಿಸಬೇಕು.

ವಿದ್ವಾಂಸರ ಮತ್ತು ಮೂರ್ಖರ ಲಕ್ಷಣಗಳ ವಿಧಾನ ಮಾಡಿರುವ ಈ ಶ್ಲೋಕಗಳು '**ವಿದುರಪ್ರಜಾಗರ**'ದ ಮೂವತ್ತ ಮೂರನೆಯ ಅಧ್ಯಾಯದಲ್ಲಿ ಒಂದೇ ಎಡೆ ಬರೆಯಲ್ಪಟ್ಟಿವೆ.

(ವಿದ್ಯಾರ್ಥಿಗಳ ದೋಷಗಳು)

ಯಾರು ವಿದ್ಯೆಯನ್ನು ಓದುತ್ತಾರೋ, ಮತ್ತು ಓದಿಸುತ್ತಾರೋ, ಅವರು ಈ ಕೆಳಗೆ ಬರೆದಿರುವ ದೋಷಗಳಿಂದ ಕೂಡಿರಬಾರದು—

---

2. **ಅರ್ಥ**:— **(ಮೂಢಚೇತಾಃ)** ಮೂರ್ಖಚಿತ್ತವುಳ್ಳ **(ನರಾಧಮಃ)** ನರಾಧಮನು **(ಅನಾಹೂತಃ)** ಕರೆಯಲ್ಪಡದೇನೇ **(ಪ್ರವಿಶತಿ)** [ಸಭೆಯಲ್ಲಿ] ಪ್ರವೇಶ ಮಾಡುತ್ತಾನೆ. **(ಅಪೃಷ್ಟಃ)** ಪ್ರಶ್ನಿಸಲ್ಪಡದೇನೇ **(ಬಹು)** ಬಹಳ **(ಭಾಷತೇ)** ಮಾತನಾಡುತ್ತಾನೆ. **(ಅವಿಶ್ವಸ್ತೇ)** ವಿಶ್ವಾಸಕ್ಕೆ ಅಯೋಗ್ಯರಲ್ಲಿ **(ವಿಶ್ವಸಿತಿ)** ವಿಶ್ವಾಸ ಇಡುತ್ತಾನೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

[1]ಆಲಸ್ಯಂ ಮದಮೋಹೌ ಚ ಚಾಪಲ್ಯಂ ಗೋಷ್ಠಿರೇವ ಚ ।
ಸ್ತಬ್ಧತಾ ಚಾಭಿಮಾನಿತ್ವಂ ತಥಾಽತ್ಯಾಗಿತ್ವಮೇವ ಚ ॥
ಏತೇ ವೈ ಸಪ್ತ ದೋಷಾಃ ಸ್ಯುಃ ಸದಾ ವಿದ್ಯಾರ್ಥಿನಾಂ ಮತಾಃ ॥ 1 ॥

[2]ಸುಖಾರ್ಥಿನಃ ಕುತೋ ವಿದ್ಯಾ ನಾಸ್ತಿ ವಿದ್ಯಾರ್ಥಿನಃ ಸುಖಮ್।
ಸುಖಾರ್ಥೀ ವಾ ತ್ಯಜೇದ್ ವಿದ್ಯಾಂ ವಿದ್ಯಾರ್ಥೀ ವಾ ತ್ಯಜೇತ್ ಸುಖಮ್ ॥ 2 ॥

[ಮಹಾಭಾರತ, ಉದ್ಯೋಗ, ವಿದುರ, 40/5-6]*

[ಅರ್ಥ] :— ಆಲಸ್ಯ, ಅಭಿಮಾನ, ನಶೆ ಮಾಡುವುದು, ಅಥವಾ ಮೂಢತ್ವ, ಚಪಲತೆ, ವ್ಯರ್ಥವಾಗಿ ಈ ಕಡೆಯ-ಆ ಕಡೆಯ ಯದ್ವಾ ತದ್ವಾ ಮಾತುಗಳನ್ನಾಡುವುದು, ಜಡತ್ವ, [ಎಂದರೆ] ಯಾವಾಗಲೋ ಓದುವುದು, ಯಾವಾಗಲೋ ಓದದಿರುವುದು, ಅಭಿಮಾನ ಮತ್ತು ಆಶೆ-ದುರಾಶೆ— ವಿದ್ಯಾರ್ಥಿಗಳಿಗೆ ಈ ಏಳು, ವಿದ್ಯೆಯ ವಿರೋಧವಾದ ದೋಷಗಳಾಗಿವೆ. [1]

ಏಕೆಂದರೆ, ಯಾವನಿಗೆ ಸುಖಾರಾಮ ಮಾಡುವ ಇಚ್ಛೆ ಇರುತ್ತದೋ, ಅವನಿಗೆ ವಿದ್ಯೆ ಎಲ್ಲಿ?

ಮತ್ತು ಯಾವನ ಚಿತ್ತವು ವಿದ್ಯೆಯ ಗ್ರಹಣ ಮಾಡುವುದರಲ್ಲಿ-ಮಾಡಿಸುವುದರಲ್ಲಿ ತೊಡಗಿರುತ್ತದೋ, ಅವನಿಗೆ ವಿಷಯ ಸಂಬಂಧದ ಸುಖಾರಾಮವೆಲ್ಲಿ?

ಆದುದರಿಂದ, ವಿಷಯಗಳ ಸುಖಾರ್ಥಿಯು ವಿದ್ಯೆಯನ್ನು ಬಿಡಬೇಕು; ಮತ್ತು ವಿದ್ಯಾರ್ಥಿಯು ವಿಷಯಸುಖದಿಂದ ಖಂಡಿತವಾಗಿ ದೂರವಿರಬೇಕು!

ಇಲ್ಲದಿದ್ದರೆ, ಪರಮಧರ್ಮರೂಪವಾದ ವಿದ್ಯೆಯ ಓದುವಿಕೆ-ಓದಿಸುವಿಕೆ ಎಂದಿಗೂ ಆಗಲಾರದು! [2]

ಈ [ಮೇಲಿನ] ಶ್ಲೋಕಗಳೂ ಕೂಡ, ಮಹಾಭಾರತದ **ವಿದುರಪ್ರಜಾಗರ** [ಪರ್ವ], ಅಧ್ಯಾಯ 40ರಲ್ಲಿ ಬರೆಯಲ್ಪಟ್ಟಿವೆ.

---

1. **ಅರ್ಥ:— (ಆಲಸ್ಯಮ್) ಆಲಸ್ಯ (ಚ) ಮತ್ತು (ಮದಮೋಹೌ) ನಶೆ, ಹಾಗೂ ಮೋಹ, (ಏವ) ಹಾಗೆಯೇ (ಚಾಪಲಮ್) ಚಂಚಲತ್ವ (ಚ) ಮತ್ತು (ಗೋಷ್ಠಿಃ) ವ್ಯರ್ಥ ಮಾತು-ಕತೆ, (ಚ) ಮತ್ತು (ಸ್ತಬ್ಧತಾ) ಜಡತ್ವ (ತಥಾ ಚ) ಮತ್ತು (ಅಭಿಮಾನಿತ್ವಮ್) ಅಭಿಮಾನ, (ಏವ) ಹಾಗೂ (ಅತ್ಯಾಗಿತ್ವಮ್) ಲೋಭ (ಏತೇ) ಈ (ಸಪ್ತ ದೋಷಾಃ ವೈ) ಏಳು ದೋಷಗಳೇ (ವಿದ್ಯಾರ್ಥಿನಾಮ್) ವಿದ್ಯಾರ್ಥಿಗಳಲ್ಲಿ (ಸ್ಯುಃ) ಇರುತ್ತವೆ, ಎಂದು (ಸದಾ) ಯಾವಾಗಲೂ (ಮತಾಃ) ತಿಳಿಯಲ್ಪಟ್ಟಿವೆ.**

2. **ಅರ್ಥ:— (ಸುಖಾರ್ಥಿನಃ) ಸುಖಾಭಿಲಾಷಿಗಳಿಗೆ (ವಿದ್ಯಾ) ವಿದ್ಯೆಯು (ಕುತಃ) ಎಲ್ಲಿಂದ[ಲಭಿಸುತ್ತದೆ?]. (ವಿದ್ಯಾರ್ಥಿನಃ) ವಿದ್ಯಾರ್ಥಿಗಳಿಗೆ (ಸುಖಮ್) ಸುಖವು (ನ) ಇರುವುದಿಲ್ಲ. (ವಾ) ಬೇಕಾದರೆ, (ಸುಖಾರ್ಥೀ) ಸುಖಾಭಿಲಾಷಿಯು (ವಿದ್ಯಾಮ್) ವಿದ್ಯೆಯನ್ನು (ತ್ಯಜೇತ್) ಬಿಟ್ಟು ಬಿಡಲಿ! (ವಾ) ಇಲ್ಲದಿದ್ದರೆ, (ವಿದ್ಯಾರ್ಥೀ) ವಿದ್ಯಾರ್ಥಿಯು (ಸುಖಮ್) ಸುಖವನ್ನು (ತ್ಯಜೇತ್) ಬಿಟ್ಟು ಬಿಡಲಿ!**

* **'ಸತ್ಯಾರ್ಥ ಪ್ರಕಾಶ', ಚತುರ್ಥ ಸಮುಲ್ಲಾಸ, ಪುಟ 193.**

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಬ್ರಹ್ಮಚರ್ಯದ ಗುಣಗಳು)

ಪ್ರಶ್ನೆ: ಎತೆಂತಹ ಮನುಷ್ಯರು ಎಲ್ಲಾ ವಿದ್ಯೆಗಳ ಪ್ರಾಪ್ತಿಯನ್ನು ಮಾಡಿಕೊಳ್ಳುತ್ತಾರೆ ಮತ್ತು ಮಾಡಿಸಿಕೊಡುತ್ತಾರೆ?

ಉತ್ತರ:

[1]ಬ್ರಹ್ಮಚರ್ಯಸ್ಯ ಚ ಗುಣಂ ಶೃಣು ತ್ವಂ ವಸುಧಾಧಿಪ ।
ಆಜನ್ಮಮರಣಾದ್ಯಸ್ತು ಬ್ರಹ್ಮಚಾರೀ ಭವೇದಿಹ ॥ 1 ॥

[2]ನ ತಸ್ಯ ಕಿಂಚಿದಪ್ರಾಪ್ಯಮಿತಿ ವಿದ್ಧಿ ನರಾಧಿಪ।
ಬಹ್ವ್ಯಃ ಕೋಟ್ಯಸ್ತ್ವೃಷೀಣಾಂ ಚ ಬ್ರಹ್ಮಲೋಕೇ ವಸಂತ್ಯುತ ॥ 2 ॥

[3]ಸತ್ಯೇ ರತಾನಾಂ ಸತತಂ ದಾಂತಾನಾಮೂರ್ಧ್ವರೇತಸಾಮ್ ।
ಬ್ರಹ್ಮಚರ್ಯಂ ದಹೇದ್ ರಾಜನ್ ಸರ್ವಪಾಪಾನ್ಯುಪಾಸಿತಮ್ ॥ 3 ॥+

[ಮಹಾಭಾರತ, ಅನುಶಾಸನಪರ್ವ*]

ಭೀಷ್ಮರು ಯುಧಿಷ್ಠಿರನಿಗೆ ಹೇಳುತ್ತಾರೇನೆಂದರೆ —

'ಹೇ ರಾಜನ್! ನೀನು ಬ್ರಹ್ಮಚರ್ಯದ ಗುಣಗಳನ್ನು ಆಲಿಸು! ಯಾವ ಮನುಷ್ಯನು ಈ ಜಗತ್ತಿನಲ್ಲಿ ಜನ್ಮದಿಂದ ಹಿಡಿದು ಮರಣದ ತನಕ ಬ್ರಹ್ಮಚಾರಿಯಾಗಿರುತ್ತಾನೋ! [1]

---

1. ಅರ್ಥ:— (ವಸುಧಾಧಿಪ) ಎಲ್ಲೆ ಪೃಥಿವೀಪತಿಯೇ! (ತ್ವಮ್) ನೀನು (ಬ್ರಹ್ಮಚರ್ಯಸ್ಯ) ಬ್ರಹ್ಮಚರ್ಯದ (ಗುಣಮ್) ಗುಣವನ್ನು (ಶೃಣು) ಆಲಿಸು. (ಯಃ ತು) ಯಾವನಾದರೂ (ಇಹ) ಈ ಜಗತ್ತಿನಲ್ಲೇ (ಆಜನ್ಮಮರಣಾತ್) ಜನ್ಮದಿಂದ ಹಿಡಿದು ಮರಣ ಪರ್ಯಂತ (ಬ್ರಹ್ಮಚಾರೀ) ಬ್ರಹ್ಮಚಾರಿಯು (ಭವೇತ್) ಆಗಿರುವುದಾದರೆ —

2. ಅರ್ಥ:— (ತಸ್ಯ) ಆವನಿಗೆ (ಕಿಂಚಿತ್) ಯಾವುದೂ (ಅಪ್ರಾಪ್ಯಮ್) ಪ್ರಾಪ್ತವಾಗದೇ (ನ) ಇರುವುದಿಲ್ಲ, (ಇತಿ) ಎಂದು (ವಿದ್ಧಿ) ತಿಳಿದುಕೋ, (ಚ) ಮತ್ತು (ನರಾಧಿಪ) ಹೇ ಜನರಾಜನ್! (ಬ್ರಹ್ವ್ಯಃ) ಬಹಳ (ಕೋಟ್ಯಃ ತು) ಕೋಟ್ಯಂತರ [ಮಂದಿ]ಯಂತೂ (ಬ್ರಹ್ಮಲೋಕೇ) ಬ್ರಹ್ಮಲೋಕದಲ್ಲಿ (ವಸಂತಿ) ವಾಸಿಸುತ್ತಿದ್ದಾರೆ. (ಉತ) ಮತ್ತು (ಋಷೀಣಾಮ್) ಋಷಿಗಳ, [ಎಂದರೆ]—

3. ಅರ್ಥ:— (ಸತತಮ್) ನಿರಂತರವಾಗಿ (ಸತ್ಯೇ) ಸತ್ಯದಲ್ಲಿ (ರತಾನಾಮ್) ನಿರತರಾಗಿರುವವರ, (ದಾಂತಾನಾಮ್) ಜಿತೇಂದ್ರಿಯರ [ಹಾಗೂ], (ಊರ್ಧ್ವರೇತಸಾಮ್) ಊರ್ಧ್ವರೇತಸ್ಸುಳ್ಳವರಿಂದ** (ಉಪಾಸಿತಮ್) ಉಪಾಸಿಸಲ್ಪಟ್ಟ (ಬ್ರಹ್ಮಚರ್ಯಮ್) ಬ್ರಹ್ಮಚರ್ಯವು (ರಾಜನ್) ಹೇ ರಾಜನೇ! (ಸರ್ವಪಾಪಾನಿ) ಎಲ್ಲಾ ಪಾಪಗಳನ್ನೂ (ದಹೇತ್) ಸುಟ್ಟುಬಿಡುತ್ತದೆ!

** ಕಾಯಾ-ವಾಚಾ-ಮನಸಾ ಸ್ತ್ರೀ-ಪ್ರಾಣಿಯ ಸಂಪರ್ಕವಿಲ್ಲದೇ, ವೇದಾಧ್ಯಯನದಲ್ಲೂ, ಪರಮಾತ್ಮನ ಉಪಾಸನೆಯಲ್ಲೂ ನಿರತವಾಗಿರುವುದಕ್ಕೆ 'ಬ್ರಹ್ಮಚರ್ಯ', ಎಂದು ಹೆಸರು. ಅಂತಹ ಬ್ರಹ್ಮಚಾರಿಯ ವೀರ್ಯವು ಶರೀರದ ಅಂಗಾಂಗಗಳಲ್ಲಿಯೂ, ಇಂದ್ರಿಯಗಳಲ್ಲಿಯೂ, ಬುದ್ಧಿಯಲ್ಲಿಯೂ, ಲೀನವಾಗಿ ಮೇಧಾಶಕ್ತಿಯನ್ನು ಉಂಟುಮಾಡುತ್ತದೆ. ಅಂತಹವರಿಗೆ 'ಊರ್ಧ್ವರೇತಸ್ಕರು', ಎಂದು ಹೆಸರು.

+ 'ಸತ್ಯಾರ್ಥಪ್ರಕಾಶ' ಚತುರ್ಥ ಸಮುಲ್ಲಾಸ, ಪುಟ 193.

* ಮಹಾಭಾರತ, ಅನುಶಾಸನಪರ್ವ, ಅಧ್ಯಾಯ 75, ಶ್ಲೋಕ 34ರ ಉತ್ತರಾರ್ಧದಿಂದ 37ರ ಪೂರ್ವಾರ್ಧದ ತನಕ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅವನಿಗೆ ಯಾವ ಶುಭಗುಣವೂ ಪ್ರಾಪ್ತವಾಗದೇ ಇರುವುದಿಲ್ಲ. ಹೀಗೆಂದು ನೀನು ತಿಳಿ! ಎಂದರೆ, ಇದರ ಪ್ರತಾಪದಿಂದ ಕೋಟ್ಯಂತರ ಋಷಿಗಳು ಬ್ರಹ್ಮಲೋಕ, ಅಂದರೆ, ಸರ್ವಾನಂದಸ್ವರೂಪನಾದ ಪರಮಾತ್ಮನಲ್ಲಿ ವಾಸಮಾಡುತ್ತಾರೆ; ಮತ್ತು ಈ ಲೋಕದಲ್ಲಿಯೂ ಕೂಡ, ಅನೇಕ ಸುಖಗಳನ್ನು ಪಡೆಯುತ್ತಾರೆ. [2]

ಯಾರು ನಿರಂತರವಾಗಿ ಸತ್ಯದಲ್ಲಿ ರಮಣ ಮಾಡುತ್ತಾರೋ, ಜಿತೇಂದ್ರಿಯರೂ, ಶಾಂತಾತ್ಮರೂ, ಉತ್ಕೃಷ್ಟವಾದ ಶುಭಗುಣಸ್ವಭಾವಯುಕ್ತರೂ, ರೋಗರಹಿತರೂ, ಪರಾಕ್ರಮ ಸಹಿತವಾದ ಶರೀರವನ್ನುಳ್ಳವರೂ, 'ಬ್ರಹ್ಮಚರ್ಯ', ಎಂದರೆ ವೇದಾದಿ ಸತ್ಯಶಾಸ್ತ್ರಗಳ, ಹಾಗೂ ಪರಮಾತ್ಮನ ಉಪಾಸನೆಯ, ಅಭ್ಯಾಸ, [ಮತ್ತು] ಕರ್ಮ ಮೊದಲಾದುವನ್ನು ಮಾಡುತ್ತಾರೋ, ಅವರ ಆ ಎಲ್ಲಾ ಉತ್ತಮ ಗುಣಗಳು ಕೆಟ್ಟ ಕೆಲಸಗಳನ್ನು ಮತ್ತು ದುಃಖಗಳನ್ನು ನಾಶ ಮಾಡಿ, ಸರ್ವೋತ್ತಮ ಧರ್ಮಯುಕ್ತ ಕರ್ಮಗಳನ್ನೂ, ಹಾಗೂ ಎಲ್ಲಾ ಸುಖಗಳ ಪ್ರಾಪ್ತಿಯನ್ನೂ, ಮಾಡಿಸುವಂತಹವು ಆಗುತ್ತವೆ. [3]

ಮತ್ತು ಮನುಷ್ಯರು ಇವುಗಳ ಸೇವನೆಯಿಂದಲೇ, ಉತ್ತಮ ಅಧ್ಯಾಪಕರೂ, ಹಾಗೂ ಉತ್ತಮ ವಿದ್ಯಾರ್ಥಿಗಳೂ ಆಗಬಲ್ಲರು.

(ಶೂರ–ವೀರರ ಪ್ರಕಾರಗಳು)

ಪ್ರಶ್ನೆ : 'ಶೂರ-ವೀರ', ಎಂದು ಯಾರಿಗೆ ಹೇಳುತ್ತಾರೆ?

ಉತ್ತರ:

[1]ವೇದಾಧ್ಯಯನಶೂರಾಶ್ಚ ಶೂರಾಶ್ಚಾಧ್ಯಯನೇ ರತಾಃ ।
ಗುರುಶುಶ್ರೂಷಯಾ ಶೂರಾಃ ಪಿತೃಶುಶ್ರೂಷಯಾಽಪರೇ ॥ 1 ॥

[2]ಮಾತೃಶುಶ್ರೂಷಯಾ ಶೂರಾ ಭೈಕ್ಷ್ಯಶೂರಾಸ್ತಥಾಽಪರೇ ।
ಅರಣ್ಯಗೃಹವಾಸೇ ಚ ಶೂರಾಶ್ಚಾತಿಥಿಪೂಜನೇ ॥ 2 ॥

[ಮಹಾಭಾರತ, ಅನುಶಾಸನಪರ್ವ*]

[ಅರ್ಥ]:— ಯಾವ ಮನುಷ್ಯರು ವೇದಾದಿಶಾಸ್ತ್ರಗಳನ್ನು ಓದುವುದರಲ್ಲಿಯೂ-ಓದಿಸುವುದರಲ್ಲಿಯೂ ಶೂರ-ವೀರರೋ, ಯಾರು ದುಷ್ಟರ ದಮನದಲ್ಲೂ ಮತ್ತು ಶ್ರೇಷ್ಠರ

---

1. **ಅರ್ಥ:— ಯಾರು (ವೇದಾಧ್ಯಯನೇ ಶೂರಾಃ) ವೇದಗಳ ಅಧ್ಯಯನದಲ್ಲಿ ಶೂರರಾಗಿ [ಇರುತ್ತಾರೋ,] (ಚ) ಮತ್ತು (ಅಧ್ಯಯನೇ ರತಾಃ) [ಇತರ ವಿದ್ಯೆಗಳ ಅಧ್ಯಯನದಲ್ಲಿ ನಿರತರಾಗಿದ್ದು (ಶೂರಾಃ) ಶೂರರಾಗಿ [ಇರುತ್ತಾರೋ] (ಚ) ಮತ್ತು (ಗುರುಶುಶ್ರೂಷಯಾ) ಗುರುಗಳ ಸೇವೆಯ ಮೂಲಕ(ಶೂರಾಃ) ಶೂರರಾಗಿ [ಇರುತ್ತಾರೋ,] (ಅಪರೇ) ಬೇರೆಯವರು (ಪಿತೃಶುಶ್ರೂಷಯಾ) ತಂದೆಯ ಸೇವೆಯ ಮೂಲಕ [ಶೂರರಾಗಿ ಇರುತ್ತಾರೋ];**
2. **ಅರ್ಥ:— (ತಥಾ) ಮತ್ತು (ಮಾತೃಶುಶ್ರೂಷಯಾ) ತಾಯಿಯ ಸೇವೆಯ ಮೂಲಕ (ಶೂರಾಃ) ಶೂರರಾಗಿ [ಇರುತ್ತಾರೋ], (ಅಪರೇ) ಇತರರು (ಭೈಕ್ಷ್ಯಶೂರಾಃ) ಭಿಕ್ಷುರೂಪದಲ್ಲಿ ಶೂರರಾಗಿ [ಇರುತ್ತಾರೋ,] (ಚ) ಮತ್ತು (ಅರಣ್ಯಗೃಹವಾಸೇ) ಅರಣ್ಯವಾಸದಲ್ಲಿಯೂ, ಹಾಗೂ ಗೃಹವಾಸದಲ್ಲಿಯೂ [ಶೂರರಾಗಿ ಇರುತ್ತಾರೋ], (ಚ) ಮತ್ತು (ಅತಿಥಿಪೂಜನೇ) ಅತಿಥಿ ಸತ್ಕಾರದಲ್ಲಿ (ಶೂರಾಃ) ಶೂರರಾಗಿ [ಇರುತ್ತಾರೋ].**

* **ಅಧ್ಯಾಯ 75, ಶ್ಲೋಕ 25 ಉತ್ತರಾರ್ಧದಿಂದ ಶ್ಲೋಕ 27 ಪೂರ್ವಾರ್ಧದ ತನಕ.**

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪಾಲನದಲ್ಲೂ ಶೂರ-ವೀರರೋ, ಎಂದರೆ, ದೃಢೋತ್ಸಾಹಿಗಳೂ, ಉದ್ಯೋಗಿಗಳೂ ಆಗಿ, ನಿಷ್ಕಪಟಿಗಳೂ, ಪರೋಪಕಾರಿಗಳೂ ಆದ ಅಧ್ಯಾಪಕರ ಸೇವೆ ಮಾಡಿ, ಶೂರ-ವೀರರಾಗಿರುತ್ತಾರೋ, ಯಾರು ತಮ್ಮ ತಂದೆಯ ಸೇವೆ ಮಾಡಿ, ಶೂರ-ವೀರರಾಗಿರುತ್ತಾರೋ [1]

ಯಾರು ತಾಯಿಯ ಪರಿಚರ್ಯೆಯಲ್ಲಿ ಶೂರರೋ, ಯಾರು ಸಂನ್ಯಾಸಾಶ್ರಮದಿಂದ ಯುಕ್ತರಾಗಿ, ಅತಿಥಿರೂಪಿಗಳಾಗಿ ಸರ್ವತ್ರ ಭ್ರಮಣ ಮಾಡುತ್ತಾ, ಪರೋಪಕಾರ ಮಾಡುವುದರಲ್ಲಿ ಶೂರರೋ, ಯಾರು ವಾನಪ್ರಸ್ಥಾಶ್ರಮದ ಕರ್ಮದಲ್ಲೂ, ಹಾಗೂ ಗೃಹಸ್ಥಾಶ್ರಮದ ವ್ಯವಹಾರಗಳಲ್ಲೂ ಶೂರರಾಗಿರುತ್ತಾರೋ; [2]

ಅವರೇ ಎಲ್ಲಾ ಸುಖಗಳ ಲಾಭ ಪಡೆಯುವುದರಲ್ಲೂ-ಪಡೆಯಿಸುವುದರಲ್ಲೂ ಅತ್ಯುತ್ತಮರಾಗಿ ಧನ್ಯವಾದಕ್ಕೆ ಪಾತ್ರರಾಗಿರುತ್ತಾರೆ, ಎಂದರೆ ತಮ್ಮ ತನು-ಮನ-ಧನ, ವಿದ್ಯೆ ಮತ್ತು ಧರ್ಮ ಮೊದಲಾದ ಶುಭಗುಣಗಳ ಗ್ರಹಣ ಮಾಡುವುದರಲ್ಲಿ ಯಾವಾಗಲೂ ಉಪಯುಕ್ತರಾಗಿರುತ್ತಾರೆ.

('ಶಿಕ್ಷಣ', ಎಂದರೇನು?)

ಪ್ರಶ್ನೆ: '**ಶಿಕ್ಷಣ**', ಎಂದು ಯಾವುದಕ್ಕೆ ಹೇಳುತ್ತಾರೆ?

ಉತ್ತರ: ಯಾವುದರಿಂದ ಮನುಷ್ಯರು ವಿದ್ಯೆ ಮೊದಲಾದ ಶುಭಗುಣಗಳನ್ನು ಪ್ರಾಪ್ತ ಮಾಡಿಕೊಂಡು, ಮತ್ತು ಅವಿದ್ಯೆ ಮೊದಲಾದ ದೋಷಗಳನ್ನು ತ್ಯಜಿಸಿ, ಯಾವಾಗಲೂ ಆನಂದಿತರಾಗಿರಬಲ್ಲರೋ, ಅದು '**ಶಿಕ್ಷಣ**', ಎನಿಸುತ್ತದೆ.

(ವಿದ್ಯೆ–ಅವಿದ್ಯೆ)

ಪ್ರಶ್ನೆ: '**ವಿದ್ಯೆ**' ಮತ್ತು '**ಅವಿದ್ಯೆ**', ಎಂದು ಯಾವುದಕ್ಕೆ ಹೇಳುತ್ತಾರೆ?

ಉತ್ತರ: ಯಾವುದರಿಂದ ಪದಾರ್ಥದ ಸ್ವರೂಪವನ್ನು ಯಥಾವತ್ತಾಗಿ ತಿಳಿದುಕೊಂಡು, ಅದರಿಂದ ಉಪಕಾರ ತೆಗೆದುಕೊಳ್ಳಲಾಗುವುದೋ, ಮತ್ತು ತನಗಾಗಿ, ಹಾಗೂ ಇತರರಿಗಾಗಿ ಎಲ್ಲಾ ಸುಖಗಳ ಸಿದ್ಧಿ ಮಾಡಲಾಗುತ್ತದೋ, ಅದು '**ವಿದ್ಯೆ**', [ಎನಿಸುತ್ತದೆ].

ಮತ್ತು ಯಾವುದರಿಂದ ಪದಾರ್ಥಗಳ ಸ್ವರೂಪವನ್ನು ವಿಪರೀತವಾಗಿ ತಿಳಿದುಕೊಂಡು, ತನ್ನ ಮತ್ತು ಇತರರ ಅಪಕಾರ ಮಾಡಿಕೊಳ್ಳಲಾಗುತ್ತದೋ, ಅದು '**ಅವಿದ್ಯೆ**', ಎನಿಸುತ್ತದೆ.

ಪ್ರಶ್ನೆ: ಮನುಷ್ಯರು ವಿದ್ಯೆಯ ಪ್ರಾಪ್ತಿಗಾಗಿಯೂ, ಹಾಗೂ ಅವಿದ್ಯೆಯ ನಾಶಕ್ಕಾಗಿಯೂ ಏನೇನನ್ನು ಮಾಡಬೇಕು?

ಉತ್ತರ: ವರ್ಣೋಚ್ಚಾರಣದಿಂದ ಹಿಡಿದು, ವೇದಾರ್ಥಜ್ಞಾನಕ್ಕಾಗಿ ಬ್ರಹ್ಮಚರ್ಯ ಮೊದಲಾದ ಕರ್ಮಗಳನ್ನು ಮಾಡುವುದು ಯೋಗ್ಯವಾಗಿರುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಬ್ರಹ್ಮಚಾರೀ)

ಪ್ರಶ್ನೆ: 'ಬ್ರಹ್ಮಚಾರಿ', ಎಂದು ಯಾವನಿಗೆ ಹೇಳುತ್ತಾರೆ?

ಉತ್ತರ: ಯಾವನು ಜಿತೇಂದ್ರಿಯನಾಗಿ, 'ಬ್ರಹ್ಮ', ಎಂದರೆ ವೇದವಿದ್ಯೆಗಾಗಿಯೂ, ಮತ್ತು ಆಚಾರ್ಯಕುಲಕ್ಕೆ ಹೋಗಿ, ವಿದ್ಯಾಗ್ರಹಣಕ್ಕಾಗಿಯೂ, ಪ್ರಯತ್ನ ಮಾಡುತ್ತಾನೋ, ಅವನು 'ಬ್ರಹ್ಮಚಾರಿ', ಎಂದು ಕರೆಯಲ್ಪಡುತ್ತಾನೆ.

(ಆಚಾರ್ಯ)

ಪ್ರಶ್ನೆ: 'ಆಚಾರ್ಯ', ಎಂದು ಯಾವನಿಗೆ ಹೇಳುತ್ತಾರೆ?

ಉತ್ತರ: ಯಾವನು ವಿದ್ಯಾರ್ಥಿಗಳಿಗೆ ಅತ್ಯಂತ ಪ್ರೇಮದಿಂದ ಧರ್ಮಯುಕ್ತ ವ್ಯವಹಾರದ ಶಿಕ್ಷಣದಿಂದ ಕೂಡಿದ ವಿದ್ಯೆಯನ್ನು ಕಲಿಸುವುದಕ್ಕಾಗಿ ಶರೀರ, ಮನಸ್ಸು ಮತ್ತು ಧನದಿಂದ ಪ್ರಯತ್ನ-ಮಾಡುತ್ತಾನೋ, ಅವನಿಗೆ '**ಆಚಾರ್ಯ**', ಎಂದು ಹೇಳುತ್ತಾರೆ.

[ಬಾಲಕರ ಶಿಕ್ಷಣ ಹೇಗಾಗಬೇಕು?]

ಪ್ರಶ್ನೆ: ತಮ್ಮ ಸಂತಾನಗಳಿಗಾಗಿ ತಾಯಿ, ತಂದೆ ಮತ್ತು ಆಚಾರ್ಯರು ಯಾವ ಯಾವ ಶಿಕ್ಷಣವನ್ನು ಕೊಡಬೇಕು?

ಉತ್ತರ:

'ಮಾತೃಮಾನ್ ಪಿತೃಮಾನಾಚಾರ್ಯವಾನ್ ಪುರುಷೋ ವೇದ.'+*

[ಶತಪಥಬ್ರಾಹ್ಮಣ]

ಯಾವನ ಜನ್ಮವು ಧಾರ್ಮಿಕರೂ, ವಿದ್ವಾಂಸರೂ ಆದ ತಾಯಿ-ತಂದೆಗಳ, ಹಾಗೂ ಆಚಾರ್ಯನ ಸಂಬಂಧದಿಂದ++ ಆಗುತ್ತದೋ, ಆ ಮನುಷ್ಯನದು '**ಅಹೋಭಾಗ್ಯ**'ವಾಗಿರುತ್ತದೆ! ಏಕೆಂದರೆ, ಈ ಮೂವರ ಶಿಕ್ಷಣದಿಂದಲೇ ಮನುಷ್ಯನು ಉತ್ತಮನಾಗುತ್ತಾನೆ.

ಇವರು ತಮ್ಮ ಮಕ್ಕಳಿಗೂ, ಮತ್ತು ವಿದ್ಯಾರ್ಥಿಗಳಿಗೂ ಒಳ್ಳೆಯ ಮಾತನ್ನು ಹೇಳುವುದು, ತಿನ್ನುವುದು-ಕುಡಿಯುವುದು, ಕೂರುವುದು-ಏಳುವುದು, ಬಟ್ಟೆಯನ್ನು ಹಾಕಿಕೊಳ್ಳುವುದು, ತಾಯಿ-ತಂದೆ ಮೊದಲಾದವರಿಗೆ ಗೌರವ ಕೊಡುವುದು, ಅವರ ಎದುರಿಗೆ ಇಚ್ಛೆ ಬಂದಂತೆ ವರ್ತಿಸದಿರುವುದು, ವಿಪರೀತವಾದ ಚೇಷ್ಟೆ ಮಾಡದಿರುವುದು—ಮೊದಲಾದುವುಗಳಿಗಾಗಿ ಪ್ರತಿನಿತ್ಯವೂ ಪ್ರಯತ್ನ ಪೂರ್ವಕವಾಗಿ ಉಪದೇಶ ಮಾಡಬೇಕು.

ಮತ್ತು ಹೇಗೆ ಹೇಗೆ ಅವರ ಸಾಮರ್ಥ್ಯವು ಹೆಚ್ಚುತ್ತಾ ಹೋಗುತ್ತದೋ, ಅಂತಂತಹ ಒಳ್ಳೆಯ ಮಾತುಗಳನ್ನು ಕಲಿಸುತ್ತಾ ಹೋಗಬೇಕು.

\+ **ಅರ್ಥ :—ಮಾತೃಮಂತನೂ, ಪಿತೃಮಂತನೂ, ಆಚಾರ್ಯವಂತನೂ ಆಗಿರುವವನೇ 'ಪುರುಷ', ಎಂದು ತಿಳಿಯಿರಿ.**

* **'ಸತ್ಯಾರ್ಥಪ್ರಕಾಶ', ದ್ವಿತೀಯ ಸಮುಲ್ಲಾಸ, ಪುಟ 41.**

++ **ದ್ವಿಜನ್ಮಾ ; ವಿದ್ಯೆಗಾಗಿ ವಿದ್ಯಾರ್ಥಿಯಾಗುವುದು.**

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇದೇ ರೀತಿಯಲ್ಲಿ, ಬಾಲಕರಿಗೆ, ಹಾಗೂ ಬಾಲಿಕೆಯರಿಗೆ ಐದು ಅಥವಾ ಎಂಟು ವರ್ಷ ವಯಸ್ಸಿನ ತನಕ ತಮ್ಮ ತಾಯಿ-ತಂದೆಯರ, ಮತ್ತು ಅದರ ನಂತರ, ಆಚಾರ್ಯನ ಶಿಕ್ಷಣ ದೊರಕಬೇಕು.

(ಕುಶಿಕ್ಷಣದ ಉಪದೇಶ)

ಪ್ರಶ್ನೆ : ಹೇಗೆ ಬೇಕೋ, ಹಾಗೆ ಶಿಕ್ಷಣವನ್ನು ಕೊಡಬಹುದೇನು?

ಉತ್ತರ: ಇಲ್ಲ!

ದೃಷ್ಟಾಂತ–[2] **(ಹಿರಿಯರಿಂದ ಕುಶಿಕ್ಷಣ)**

ಯಾರು ತಮ್ಮ ಪುತ್ರ-ಪುತ್ರಿಯರಿಗೂ ಮತ್ತು ವಿದ್ಯಾರ್ಥಿಗಳಿಗೂ —

"ಕೇಳು ನನ್ನ ಮಗನೇ! ಮಗಳೇ! ವಿದ್ಯಾರ್ಥಿಯೇ!!! ಶೀಘ್ರವಾಗಿ ನಿನ್ನ ಮದುವೆಯನ್ನು ಮಾಡುವೆವು!

'ನೀನು ಇವನ ಗಡ್ಡ-ಮೀಸೆಯನ್ನು ಹಿಡಿದುಕೋ!

'ಇವಳ ಜಡೆಯನ್ನು ಜಗ್ಗಿ, ಮೇಲು ಸೆರಗನ್ನು ಎಸೆದುಬಿಡು!

'ಗುದ್ದು ಹಾಕು; ಬೈದು ಬಿಡು!

'ಇವನ ಬಟ್ಟೆಯನ್ನು ಕಿತ್ತು ಕೋ!

'ರುಮಾಲನ್ನೂ, ಮತ್ತು ಟೋಪಿಯನ್ನೂ ಎಸೆದು ಬಿಡು!

'ಆಡು! ಜಿಗಿ! ನಗು! ಅಳು!

'ನಿನ್ನ ಮದುವೆಯಲ್ಲಿ ಹೂವಿನ ಮಂಟಪ ಹಾಕುವೆವು!"

(ನೀತಿ)

ಈ ಮೊದಲಾದ ಕುಶಿಕ್ಷಣವನ್ನು ಕೊಡುತ್ತಾರೋ, ಅವರನ್ನು ತಾಯಿ-ತಂದೆ ಮತ್ತು ಆಚಾರ್ಯ, ಎಂದು ತಿಳಿಯಬಾರದು; ಬದಲಾಗಿ, ಮಕ್ಕಳ ಮತ್ತು ಶಿಷ್ಯರ ಸ್ಥಿರಶತ್ರುಗಳೆಂದೂ, ಮತ್ತು ದುಃಖದಾಯಕರೆಂದೂ [ತಿಳಿಯಬೇಕು].

(ಯಾರು ತಾಯಿ–ತಂದೆ, ಆಚಾರ್ಯರಾಗಲು ಅಯೋಗ್ಯರು?)

ಏಕೆಂದರೆ, ಯಾರು ಕುಚೇಷ್ಟೆಗಳನ್ನು ನೋಡಿಯೂ ಕೂಡ, ಮಕ್ಕಳನ್ನು ಗದರಿಸುವುದಿಲ್ಲವೋ, ಮತ್ತು ದಂಡ ಕೊಡುವುದಿಲ್ಲವೋ, ಅವರು ಹೇಗೆ ತಾಯಿ-ತಂದೆ ಮತ್ತು ಆಚಾರ್ಯ ಆಗಬಲ್ಲರು?

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಏಕೆಂದರೆ, ಯಾರು ತಮ್ಮ ಎದುರಿಗೇ ಯದ್ವಾತದ್ವಾ ಒದರುವುದು, ನಿರ್ಲಜ್ಜರಾಗಿರುವುದು, ವ್ಯರ್ಥವಾಗಿ ಚೇಷ್ಟೆಗಳನ್ನು ಮಾಡುವುದು ಮೊದಲಾದ ಕೆಟ್ಟ ಕೆಲಸಗಳಿಂದ [ಮಕ್ಕಳನ್ನು] ಬೇರ್ಪಡಿಸಿ, ವಿದ್ಯೆ ಮೊದಲಾದ ಶುಭಗುಣಗಳ [ಗ್ರಹಣ]ಕ್ಕಾಗಿ ಉಪದೇಶ ಮಾಡುವುದಿಲ್ಲವೋ, ಮತ್ತು ತನು-ಮನ-ಧನಗಳನ್ನು ವಿನಿಯೋಜಿಸಿ, ಉತ್ತಮ ವಿದ್ಯಾ–ವ್ಯವಹಾರಗಳ ಸೇವನೆ ಮಾಡಿಸಿ, ಯಾವಾಗಲೂ ಶ್ರೇಷ್ಠರನ್ನಾಗಿ ಮಾಡುವುದಿಲ್ಲವೋ, ಅವರು ತಾಯಿ-ತಂದೆ ಮತ್ತು ಆಚಾರ್ಯ ಎನಿಸಿಕೊಂಡು, ಧನ್ಯವಾದಕ್ಕೆ ಎಂದಿಗೂ ಪಾತ್ರರಾಗಲಾರರು!

(ಸುಶಿಕ್ಷಣದ ರೀತಿ)

ಮತ್ತು ಯಾರು ತಮ್ಮ ತಮ್ಮ ಮಕ್ಕಳಿಗೆ, ಹಾಗೂ ಶಿಷ್ಯರಿಗೆ ಈಶ್ವರನ ಉಪಾಸನೆ, ಧರ್ಮ-ಅಧರ್ಮ, ಪ್ರಮಾಣ-ಪ್ರಮೇಯ, ಸತ್ಯ, ಮಿಥ್ಯೆ, ಪಾಖಂಡ, ವೇದಶಾಸ್ತ್ರ ಮೊದಲಾದುವುಗಳ ಲಕ್ಷಣಗಳನ್ನೂ ಮತ್ತು ಅವುಗಳ ಸ್ವರೂಪದ ಯಥಾವತ್ ಜ್ಞಾನವನ್ನೂ ಮಾಡಿಸಿ, ಮತ್ತು ಸಾಮರ್ಥ್ಯಕ್ಕೆ ಅನುಕೂಲವಾಗಿ ಅವರಿಗೆ ವೇದ-ಶಾಸ್ತ್ರಗಳ ವಚನಗಳನ್ನೂ ಕೂಡ, ಕಂಠಸ್ಥ ಮಾಡಿಸಿ, ವಿದ್ಯೆಯನ್ನು ಓದುವ, ಹಾಗೂ ವಿದ್ಯಾಪ್ರಾಪ್ತಿ ಮೊದಲಾದ ಪ್ರಯೋಜನಗಳು ನಿರ್ವಿಘ್ನವಾಗಿ ಸಿದ್ಧಿಸಲೆಂದು, ಆಚಾರ್ಯನಿಗೆ ಅನುಕೂಲವಾಗಿಯೂ ಇರುವ ರೀತಿಯನ್ನು ಕೂಡ, ತಿಳಿಸಿ ಬಿಡುತ್ತಾರೋ, ಅವರೇ ತಾಯಿ-ತಂದೆ ಮತ್ತು ಆಚಾರ್ಯ, ಎಂದು ಕರೆಯಲ್ಪಡುತ್ತಾರೆ.

[ವಿದ್ಯಾಪ್ರಾಪ್ತಿಯ ನಾಲ್ಕು ಕಾಲಗಳು]

ಪ್ರಶ್ನೆ: ವಿದ್ಯೆಯು ಯಾವ ಯಾವ ರೀತಿಯಿಂದ ಮತ್ತು ಯಾವ ಕರ್ಮಗಳಿಂದ ಉಂಟಾಗುತ್ತದೆ?

ಉತ್ತರ:

'ಚತುರ್ಭಿಃ ಪ್ರಕಾರೈರ್ವಿದ್ಯೋಪಯುಕ್ತಾ ಭವತಿ—
(1) ಆಗಮಕಾಲೇನ (2) ಸ್ವಾಧ್ಯಾಯಕಾಲೇನ
(3) ಪ್ರವಚನಕಾಲೇನ (4) ವ್ಯವಹಾರಕಾಲೇನೇತಿ ॥ *'

[ಮಹಾಭಾಷ್ಯ ಅ. 1.1.1; ಆ. 1]

ವಿದ್ಯೆಯು ನಾಲ್ಕು ರೀತಿಯಿಂದ ಬರುತ್ತದೆ — ಆಗಮ, ಸ್ವಾಧ್ಯಾಯ, ಪ್ರವಚನ ಮತ್ತು ವ್ಯವಹಾರಕಾಲ[ಗಳಿಂದ!]

---

* **ಅರ್ಥ:— (ವಿದ್ಯಾ) ವಿದ್ಯೆಯು (ಚತುರ್ಭಿಃ) ನಾಲ್ಕೂ (ಪ್ರಕಾರೈಃ) ವಿಧಗಳಿಂದ (ಉಪಯುಕ್ತಾ) ಉಪಯೋಗಿಸಲ್ಪಡುವುದಾಗಿ (ಭವತಿ) ಇರುತ್ತದೆ — (ಆಗಮಕಾಲೇನ) ಪ್ರಾಪ್ತಿಕಾಲದ ಮೂಲಕವಾಗಿಯೂ, (ಸ್ವಾಧ್ಯಾಯಕಾಲೇನ) ಸ್ವತಃ ಅಧ್ಯಯನ ಮಾಡುವ ಮೂಲಕವಾಗಿಯೂ, (ಪ್ರವಚನಕಾಲೇನ) ಅಧ್ಯಾಪನ ಮಾಡುವ ಮೂಲಕವಾಗಿಯೂ, (ವ್ಯವಹಾರಕಾಲೇನ ಇತಿ) ವ್ಯವಹಾರ ಮಾಡುವ ಮೂಲಕವಾಗಿಯೂ, ಎಂದು.**

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

[1] **'ಆಗಮಕಾಲ'**, ಎಂದು ಯಾವುದಕ್ಕೆ ಹೇಳುತ್ತಾರೆಂದರೆ--

ಯಾವುದರಿಂದ ಮನುಷ್ಯನು ಓದಿಸುವವನ ಬಳಿಯಿಂದ, ಸಾವಧಾನನಾಗಿ, ಧ್ಯಾನ ಕೊಟ್ಟು, ವಿದ್ಯೆ ಮೊದಲಾದ ಪದಾರ್ಥವನ್ನು ಪ್ರಾಪ್ತಮಾಡಿಕೊಳ್ಳಬಲ್ಲನೋ, ಅದು!

[2] **'ಸ್ವಾಧ್ಯಾಯಕಾಲ'**, ಎಂದು ಯಾವುದಕ್ಕೆ ಹೇಳುತ್ತಾರೆಂದರೆ —

ಅಧ್ಯಯನ -ಸಮಯದಲ್ಲಿ ಆಚಾರ್ಯನ ಮುಖದಿಂದ ಯಾವ ಶಬ್ದ, ಅರ್ಥ ಮತ್ತು ಸಂಬಂಧಗಳ ವಿಷಯಗಳು ಪ್ರಕಟವಾಗುತ್ತವೋ, ಅವುಗಳನ್ನು ಏಕಾಂತದಲ್ಲಿ ಸ್ವಸ್ಥಚಿತ್ತನಾಗಿ, ಪೂರ್ವಾಪರ ವಿಚಾರದಿಂದ ಸರಿ ಸರಿಯಾಗಿ ಹೃದಯದಲ್ಲಿ ದೃಢ ಮಾಡಿಕೊಳ್ಳಲಾಗುತ್ತದೋ, ಅದು!

[3] **'ಪ್ರವಚನ ಕಾಲ'**, ಎಂದು ಯಾವುದಕ್ಕೆ ಹೇಳುತ್ತಾರೆಂದರೆ —

ಯಾವುದರಿಂದ ಇತರರಿಗೆ ಪ್ರೀತಿಯಿಂದ ವಿದ್ಯೆಗಳನ್ನು ಕಲಿಸಲು ಶಕ್ಯವಾಗುತ್ತದೋ, ಅದು!

[4] **'ವ್ಯವಹಾರ ಕಾಲ'**, ಎಂದು ಯಾವುದಕ್ಕೆ ಹೇಳುತ್ತಾರೆಂದರೆ —

ಯಾವಾಗ ತನ್ನ ಆತ್ಮನಲ್ಲಿ ಸತ್ಯವಿದ್ಯೆ ಇರುತ್ತದೋ, ಆಗ — 'ಇದನ್ನು ಮಾಡಬೇಕು; ಇದನ್ನು ಮಾಡಬಾರದು'; ಅದೇ ಸರಿ ಸರಿಯಾಗಿ ಸಿದ್ಧವಾಗಿ, ಹಾಗೆಯೇ ಆಚರಣೆ ಮಾಡಲು ಶಕ್ಯವಾಗುತ್ತದೋ, ಅದು!

[ಹೀಗೆ], ಈ ನಾಲ್ಕು ರೀತಿಗಳಿವೆ.

(ವಿದ್ಯಾಪ್ರಾಪ್ತಿಯ ನಾಲ್ಕು ಕರ್ಮಗಳು)

ಮತ್ತು ವಿದ್ಯಾಪ್ರಾಪ್ತಿಯ ನಾಲ್ಕು ಕರ್ಮಗಳು ಬೇರೆಯೂ ಇವೆ—

(1) ಶ್ರವಣ (2) ಮನನ (3) ನಿದಿಧ್ಯಾಸನ ಮತ್ತು (4) ಸಾಕ್ಷಾತ್ಕಾರ

[1] **'ಶ್ರವಣ'**, ಎಂದು ಯಾವುದಕ್ಕೆ ಹೇಳುತ್ತಾರೆಂದರೆ—

ಆತ್ಮನು ಮನಸ್ಸಿನೊಡನೆ, ಮತ್ತು ಮನಸ್ಸು ಶ್ರೋತ್ರೇಂದ್ರಿಯದೊಡನೆ, ಯಥಾವತ್ ಯುಕ್ತವಾಗಿ ಅಧ್ಯಾಪಕನ ಬಾಯಿಯಿಂದ ಅರ್ಥ ಮತ್ತು ಸಂಬಂಧವನ್ನು ಪ್ರಕಟಿಸುವ ಯಾವ ಯಾವ ಶಬ್ದಗಳು ಹೊರಬರುತ್ತವೋ, ಅವುಗಳನ್ನು ಶೋತ್ರದಿಂದ ಮನಸ್ಸಿನಲ್ಲೂ ಮತ್ತು ಮನಸ್ಸಿನಿಂದ ಆತ್ಮನಲ್ಲೂ ಕೂಡಿಹಾಕುತ್ತಾ ಹೋಗುವುದು.

[2] **'ಮನನ'**, ಎಂದು ಯಾವುದಕ್ಕೆ ಹೇಳುತ್ತಾರೆಂದರೆ—

ಯಾವ ಯಾವ ಶಬ್ದಗಳು, ಅರ್ಥ, ಹಾಗೂ ಸಂಬಂಧಗಳು ಆತ್ಮನಲ್ಲಿ ಏಕತ್ರವಾಗಿವೆಯೋ, ಅವುಗಳ ಬಗ್ಗೆ ಏಕಾಂತದಲ್ಲಿ ಸ್ವಸ್ಥಚಿತ್ತವಾಗಿ ವಿಚಾರ ಮಾಡುವುದು; ಎಂದರೆ, ಯಾವ ಶಬ್ದವು ಯಾವ ಅರ್ಥದೊಡನೆ, ಮತ್ತು ಯಾವ ಅರ್ಥವು ಯಾವ ಶಬ್ದದೊಡನೆ, ಮತ್ತು ಯಾವ ಸಂಬಂಧವು ಯಾವ ಯಾವ ಶಬ್ದ, ಹಾಗೂ ಅರ್ಥದೊಡನೆ **'ಸಂಬಂಧ'**,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಎಂದರೆ ಸಂಪರ್ಕವಿಟ್ಟಿರುತ್ತದೆ? ಮತ್ತು ಇವುಗಳ ಸಂಪರ್ಕದಿಂದ ಯಾವ ಪ್ರಯೋಜನದ ಸಿದ್ಧಿಯಾ ಗುತ್ತದೆ? ಮತ್ತು ವಿರುದ್ಧವಾಗುವುದರಿಂದ ಯಾವ ಯಾವ ಹಾನಿಯಾಗುತ್ತದೆ? ಇತ್ಯಾದಿ.

[3] 'ನಿದಿಧ್ಯಾಸನ', ಎಂದು ಯಾವುದಕ್ಕೆ ಹೇಳುತ್ತಾರೆಂದರೆ—

ಯಾವ ಯಾವ ಶಬ್ದ, ಅರ್ಥ ಮತ್ತು ಸಂಬಂಧಗಳು ಆಲಿಸಲ್ಪಟ್ಟಿವೆಯೋ-ವಿಚಾರ ಮಾಡಲ್ಪಟ್ಟಿವೆಯೋ, ಅವು ಸರಿ ಸರಿಯಾಗಿವೆಯೋ, ಅಥವಾ ಇಲ್ಲವೋ, — ಈ ಮಾತಿನ ವಿಶೇಷ ಪರೀಕ್ಷೆ ಮಾಡಿ, ದೃಢನಿಶ್ಚಯ ಮಾಡುವುದು.

[4] ಮತ್ತು 'ಸಾಕ್ಷಾತ್ಕಾರ', ಎಂದು ಯಾವುದಕ್ಕೆ ಹೇಳುತ್ತಾರೆಂದರೆ—

ಯಾವ ಅರ್ಥಗಳನ್ನುಳ್ಳ ಶಬ್ದಗಳು ಮತ್ತು ಸಂಬಂಧಗಳು ಆಲಿಸಲ್ಪಟ್ಟು-ವಿಚಾರಿಸಲ್ಪಟ್ಟು, ಮತ್ತು ನಿಶ್ಚಯಿಸಲ್ಪಟ್ಟಿವೆಯೋ, ಅವುಗಳನ್ನು ಯಥಾವತ್ತಾಗಿ ಜ್ಞಾನ ಮತ್ತು ಕ್ರಿಯೆಯಿಂದ ಪ್ರತ್ಯಕ್ಷ ಮಾಡಿಕೊಂಡು, ವ್ಯವಹಾರಗಳ ಸಿದ್ಧಿಯಿಂದ ತನ್ನ ಮತ್ತು ಇತರರ ಉಪಕಾರ ಮಾಡಿಕೊಳ್ಳುವುದು.

ಈ ಮೊದಲಾದುವು ವಿದ್ಯೆಯ ಪ್ರಾಪ್ತಿಯ ಸಾಧನಗಳಾಗಿವೆ.

(ಆಚಾರ್ಯರ ಜೊತೆ ವಿದ್ಯಾರ್ಥಿಗಳ ವರ್ತನೆ)

ಪ್ರಶ್ನೆ: ಆಚಾರ್ಯನ ಜೊತೆಗೆ ವಿದ್ಯಾರ್ಥಿಯು ಹೇಗೆ ಹೇಗೆ ವರ್ತಿಸಬೇಕು ಮತ್ತು ಹೇಗೆ ಹೇಗೆ ವರ್ತಿಸಬಾರದು?

ಉತ್ತರ :

(1) ಸುಳ್ಳನ್ನು ತ್ಯಜಿಸಿ, ಸತ್ಯವನ್ನು ಹೇಳಬೇಕು.

(2) ಸರಳವಾಗಿರಬೇಕು.

(3) ಅಭಿಮಾನ ಮಾಡಬಾರದು.

(4) ಆಜ್ಞೆಯ ಪಾಲನೆ ಮಾಡಬೇಕು.

(5) ಸ್ತುತಿ ಮಾಡಬೇಕು; ನಿಂದೆ ಮಾಡಬಾರದು.

(6) ಕೆಳಗಿನ ಆಸನದ ಮೇಲೆ ಕೂಡಬೇಕು; ಮೇಲಿನ ಆಸನದ ಮೇಲ ಕೂಡಬಾರದು.

(7) ಶಾಂತರಾಗಿರಬೇಕು; ಚಪಲತೆ ಇರಬಾರದು.

(8) ಆಚಾರ್ಯನ ತಾಡನೆಯಿಂದ ಪ್ರಸನ್ನರಾಗಿರಬೇಕು.

(9) ಕ್ರೋಧವನ್ನು ಎಂದಿಗೂ ಮಾಡಬಾರದು.

(10) ಯಾವಾಗ ಅವರು ಏನನ್ನಾದರೂ ಕೇಳಿದರೆ, ಕೈ ಜೋಡಿಸಿಕೊಂಡು, ನಮ್ರರಾಗಿ, ಉತ್ತರ ಕೊಡಬೇಕು; ಗರ್ವದಿಂದ ಉತ್ತರ ಕೊಡಬಾರದು.

(11) ಯಾವಾಗ ಅವರು ಶಿಕ್ಷಣ ಕೊಡುತ್ತಾರೋ, [ಆಗ] ಧ್ಯಾನಕೊಟ್ಟು ಆಲಿಸಬೇಕು; ಗೇಲಿ ಮಾಡಿ, ಹಾರಿಸಬಾರದು.

(12) ಶರೀರವನ್ನೂ ಮತ್ತು ಬಟ್ಟೆಗಳನ್ನೂ ಶುಭ್ರವಾಗಿಟ್ಟುಕೊಳ್ಳಬೇಕು, ಕೊಳೆಯಾಗಿ ಎಂದಿಗೂ ಇಟ್ಟುಕೊಳ್ಳಬಾರದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(13) ಏನನ್ನಾದರೂ ಪ್ರತಿಜ್ಞೆ ಮಾಡಿದರೆ, ಅದನ್ನು ಪೂರೈಸಬೇಕು.

(14) ಜಿತೇಂದ್ರಿಯರಾಗಿರಬೇಕು.

(15) ಲಂಪಟತೆಯನ್ನೂ, ವ್ಯಭಿಚಾರವನ್ನೂ ಎಂದಿಗೂ ಮಾಡಬಾರದು.

(16) ಉತ್ತಮ ಪುರುಷರ ಗೌರವವನ್ನು ಯಾವಾಗಲೂ ಮಾಡಬೇಕು; ಅಪಮಾನವನ್ನೆಂದಿಗೂ ಮಾಡಬಾರದು.

(17) ಉಪಕಾರವನ್ನು ಒಪ್ಪಿ, ಕೃತಜ್ಞರಾಗಿರಬೇಕು.

(18) ಯಾರಿಗೂ ಅನುಪಕಾರಿಯಾಗಿ ಕೃತಘ್ನರಾಗಿರಬಾರದು.

(19) ಪುರುಷಾರ್ಥಿಗಳಾಗಿರಬೇಕು; ಎಂದಿಗೂ ಸೋಮಾರಿಗಳಾಗಿರಬಾರದು.

(20) ಯಾವ ಯಾವ ಕರ್ಮದಿಂದ ವಿದ್ಯಾಪ್ರಾಪ್ತಿಯಾಗುತ್ತದೋ, ಅದದನ್ನು ಮಾಡುತ್ತಾ ಹೋಗಬೇಕು.

(21) ಯಾವ ಯಾವುವು ಕೆಟ್ಟ ಕೆಲಸಗಳೋ; ಕಾಮ, ಕ್ರೋಧ, ಲೋಭ, ಮೋಹ, ಭಯ, ಶೋಕ ಮೊದಲಾದ ವಿದ್ಯಾವಿರೋಧಿಗಳೋ, ಅವುಗಳನ್ನು ತ್ಯಜಿಸಿ, ಯಾವಾಗಲೂ ಉತ್ತಮಗುಣಗಳ ಕಾಮನೆ ಮಾಡಬೇಕು.

(22) ಕೆಟ್ಟ ಕೆಲಸಗಳ ಮೇಲೆ ಕ್ರೋಧವನ್ನೂ, ವಿದ್ಯಾಗ್ರಹಣದಲ್ಲಿ ಲೋಭವನ್ನೂ, ಸಜ್ಜನರಲ್ಲಿ ಮೋಹವನ್ನೂ, ಕೆಟ್ಟ ಕೆಲಸಗಳಿಂದ ಭಯವನ್ನೂ, ಒಳ್ಳೆಯ ಕೆಲಸಗಳಾಗದಿದ್ದರೆ ಶೋಕವನ್ನೂ, ಮಾಡಿ; ವಿದ್ಯೆ ಮೊದಲಾದ ಶುಭಗುಣಗಳಿಂದ ಆತ್ಮದ ಬಲವನ್ನೂ, ಮತ್ತು ವೀರ್ಯ ಮೊದಲಾದ ಧಾತುಗಳ ರಕ್ಷಣೆಯಿಂದ, ಜಿತೇಂದ್ರಿಯರಾಗಿ, ಶರೀರದ ಬಲವನ್ನೂ ಯಾವಾಗಲೂ ಹೆಚ್ಚಿಸಿಕೊಳ್ಳುತ್ತಿರಬೇಕು.

(ವಿದ್ಯಾರ್ಥಿಗಳ ಜೊತೆ ಆಚಾರ್ಯರ ವರ್ತನೆ)

ಪ್ರಶ್ನೆ: ಆಚಾರ್ಯರು ವಿದ್ಯಾರ್ಥಿಗಳ ಜೊತೆ ಹೇಗೆ ವರ್ತಿಸಬೇಕು?

ಉತ್ತರ:

(1) ಯಾವ ರೀತಿಯಿಂದ ವಿದ್ಯಾರ್ಥಿಗಳು ವಿದ್ವಾಂಸರೂ, ಸುಶೀಲರೂ ನಿರಭಿಮಾನಿಗಳೂ, ಸತ್ಯವಾದಿಗಳೂ, ಧರ್ಮಾತ್ಮರೂ, ಆಸ್ತಿಕರೂ, ಆಲಸ್ಯರಹಿತರೂ ಉದ್ಯೋಗಿಗಳೂ, ಪರೋಪಕಾರಿಗಳೂ, ವೀರರೂ, ಧೀರರೂ, ಗಂಭೀರರೂ ಪವಿತ್ರಾಚರಣಯುಕ್ತರೂ, ಶಾಂತಿಯುಕ್ತರೂ, ದಮನಶೀಲರೂ, ಜಿತೇಂದ್ರಿಯರೂ ಸರಳ[ಸ್ವಭಾವ]ದವರೂ, ಪ್ರಸನ್ನವದನರೂ ಆಗಿ; ತಾಯಿ-ತಂದೆ, ಆಚಾರ್ಯ, ಅತಿಥಿ ಬಂಧು, ಮಿತ್ರ, ರಾಜಾ-ಪ್ರಜಾ ಮೊದಲಾದವರಿಗೆ ಪ್ರಿಯಕಾರಿಗಳಾಗಬಹುದೋ [ಹಾಗೆ ವರ್ತಿಸಬೇಕು.]

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

[2] ಯಾವಾಗಲಾದರೂ ಯಾವನೊಡನಾದರೂ ಮಾತುಕತೆಯನ್ನಾಡಬೇಕಾದರೆ, ಆಗ ಅವನ ಬಾಯಿಯಿಂದ ಯಾವ ಯಾವ ಅಕ್ಷರ, ಪದ, ವಾಕ್ಯ ಹೊರಬರುತ್ತವೋ, ಅವನ್ನು ಶಾಂತರಾಗಿ ಆಲಿಸಿ, ಪ್ರತ್ಯುತ್ತರ ಕೊಡಬೇಕು.

(3) [ವಿದ್ಯಾರ್ಥಿಗಳು] ಯಾವಾಗಲಾದರೂ ಯಾವುದಾದರೂ ಕೆಟ್ಟ ಚೇಷ್ಟೆ, ಮಲಿನತೆ, ಕೊಳೆ ಬಟ್ಟೆಯನ್ನು ಹಾಕಿಕೊಂಡಿರುವುದು, ಕೂಡುವುದರಲ್ಲಿ-ಏಳುವುದರಲ್ಲಿ ವಿರುದ್ಧಾಚರಣೆಯನ್ನು ಮಾಡುವುದು, ನಿಂದೆ, ಈರ್ಷ್ಯೆ, ದ್ರೋಹ, ವಿವಾದ, ಜಗಳ-ಕಲಹ, ಚಾಡಿ; ಯಾವನ ಮೇಲೋ ಮಿಥ್ಯಾದೋಷ ಹಾಕುವುದು, ಕಳ್ಳತನ-ಜಾರತನ, ಓದದಿರುವುದು, ಆಲಸ್ಯ, ಅತಿನಿದ್ರೆ, ಅತಿಭೋಜನ, ಅತಿಜಾಗರಣ, ವ್ಯರ್ಥವಾದ ಆಟ, ಈ ಕಡೆ – ಆ ಕಡೆ, ಅಲೆದಾಡುವುದು, ವಿಷಯಸೇವನೆ, ಕೆಟ್ಟ ಕೆಲಸಗಳ ಕಥೆ ಹೇಳುವುದು, ಅಥವಾ ಆಲಿಸುವುದು, ದುಷ್ಟ ಸಂಗತಿಯಲ್ಲಿ ಕುಳಿತುಕೊಳ್ಳುವುದು ಮೊದಲಾದ ದುಷ್ಟ ವ್ಯವಹಾರಗಳನ್ನು ಮಾಡಿದರೆ, ಅವರಿಗೆ ಅಪರಾಧಕ್ಕನುಸಾರವಾಗಿ ಕಠಿಣ ದಂಡವನ್ನು ಕೊಡಬೇಕು!

ಇದಕ್ಕೆ ಪ್ರಮಾಣವೇನೆಂದರೆ—

+ಸಾಮೃತೈಃ ಪಾಣಿಭಿರ್ಘ್ನಂತಿ ಗುರವೋ ನ ವಿಷೋಕ್ಷಿತೈಃ ।
ಲಾಲನಾಶ್ರಯಿಣೋ ದೋಷಾಸ್ತಾಡನಾಶ್ರಯಿಣೋ ಗುಣಾಃ ॥*

[ಮಹಾಭಾಷ್ಯ. ಅ. 8, ಪಾ. 1, ಸೂತ್ರ 8]

ಆಚಾರ್ಯಜನರು ತಮ್ಮ ವಿದ್ಯಾರ್ಥಿಗಳನ್ನು ವಿದ್ಯೆ ಮತ್ತು ಸುಶಿಕ್ಷಣ ಹೇಳಿ ಕೊಡುವುದಕ್ಕಾಗಿ ತಮ್ಮ ಕೈಗಳಿಂದ ತಾಡನ ಮಾಡುತ್ತಾರೆ.

ಏಕೆಂದರೆ, ಮಕ್ಕಳನ್ನೂ, ಹಾಗೂ ವಿದ್ಯಾರ್ಥಿಗಳನ್ನೂ ಎಷ್ಟು ಮುದ್ದಿಸುತ್ತಾರೋ, ಅಷ್ಟೇ ಅವರಿಗೆ ಕೆಡುಕುಂಟಾಗುತ್ತದೆ. ಮತ್ತು ಎಷ್ಟು ತಾಡನ ಮಾಡುತ್ತಾರೋ, ಅಷ್ಟೇ ಅವರಿಗೆ ಸುಧಾರಣೆಯಾಗುತ್ತದೆ.

ಆದರೆ, ಅಂಗಭಂಗವಾಗುವಂತಹ ತಾಡನ ಮಾಡಬಾರದು! ಅಥವಾ [ಒಂದು ವೇಳೆ], ಮರ್ಮ[ಸ್ಥಾನ]ದಲ್ಲಿ ತಗುಲಿದರೆ, ವಿದ್ಯಾರ್ಥಿಗಳಿಗೆ ಅಥವಾ ಬಾಲಕ-ಬಾಲಿಕೆಯರಿಗೆ ವ್ಯಥೆ ಉಂಟಾದೀತು!

+ **ಅರ್ಥ:— (ಗುರವಃ) ಗುರುಗಳು (ಸಾಮೃತೈಃ) ಅಮೃತದಿಂದ ಕೂಡಿದ (ಪಾಣಿಭಿಃ) ಕೈಗಳಿಂದ (ಘ್ನಂತಿ) ಹೊಡೆಯುತ್ತಾರೆ; (ವಿಷೋಕ್ಷಿತೈಃ ನ) ವಿಷದಿಂದ ಸಿಂಚಿತವಾದುವುಗಳಿಂದಲ್ಲ. (ಲಾಲನಾಶ್ರಯಿಣಃ) ಲಾಲನೆಯ ಆಶ್ರಯ ಮಾಡುವವರದು (ದೋಷಾಃ) ದೋಷಗಳು [ಆಗಿರುತ್ತವೆ]. (ತಾಡನಾಶ್ರಯಿಣಃ) ತಾಡನೆಯ ಆಶ್ರಯ ಮಾಡುವವರದು (ಗುಣಾಃ) ಗುಣಗಳು [ಆಗಿರುತ್ತವೆ.]**

* **'ಸತ್ಯಾರ್ಥಪ್ರಕಾಶ' ದ್ವಿತೀಯ ಸಮುಲ್ಲಾಸ, ಪುಟ 52.**

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದೃಷ್ಟಾಂತ-[3]

[ಗದ್ದಲೆ ತಿಮ್ಮನ ಮತ್ತು ಸಜ್ಜನನ ಸಂವಾದ]

ಪ್ರಶ್ನೆ: ಗದ್ದಲೆ ತಿಮ್ಮ ಉವಾಚ —

+ಪಠಿತವ್ಯಂ ತದಪಿ ಮರ್ತ್ತವ್ಯಂ, ನ ಪಠಿತವ್ಯಂ
ತದಪಿ ಮರ್ತ್ತವ್ಯಂ ದಂತಕಟಾಕಟೇತಿ ಕಿಂ ಕರ್ತವ್ಯಮ್ ?*

ಎಂದರೆ, ಗದ್ದಲೆ ತಿಮ್ಮನು ಹೇಳುತ್ತಾನೇನೆಂದರೆ—

"ಯಾವನು ಓದುತ್ತಾನೋ, ಅವನೂ ಸಾಯುತ್ತಾನೆ! ಮತ್ತು ಯಾವನು ಓದುವುದಿಲ್ಲವೋ, ಅವನೂ ಕೂಡ, ಸಾಯುತ್ತಾನೆ! ಮತ್ತೆ, ಓದುವುದು-ಓದಿಸುವುದರಲ್ಲಿ ಹಲ್ಲನ್ನು '**ಕಟಾಕಟ**' ಏಕೆ ಮಾಡಬೇಕು?"

ಉತ್ತರ:

ಸಜ್ಜನ ಉವಾಚ —

****ನ ವಿದ್ಯಯಾ ವಿನಾ ಸೌಖ್ಯಂ ನರಾಣಾಂ ಜಾಯತೇ ಧ್ರುವಮ್ ।**
ಅತೋ ಧರ್ಮಾರ್ಥಮೋಕ್ಷೇಭ್ಯೋ ವಿದ್ಯಾಭ್ಯಾಸಂ ಸಮಾಚರೇತ್ ॥

ಸಜ್ಜನನು ಹೇಳುತ್ತಾನೇನೆಂದರೆ—

"ಕೇಳು ತಮ್ಮ, ಗದ್ದಲೇ ತಿಮ್ಮ! ನೀನು ತಿಳಿದಿರುವಂತೆ ವಿದ್ಯೆಯ ಫಲ ಹೀಗಿಲ್ಲ!

'ಎಂದರೆ, ವಿದ್ಯೆ ಓದುವುದರಿಂದ ಜನ್ಮ-ಮರಣವಾಗುವುದು, ಕಣ್ಣಿನಿಂದ ನೋಡುವುದು, ಕಿವಿಯಿಂದ ಕೇಳುವುದು ಮೊದಲಾದ ಈ ಈಶ್ವರೀಯ ನಿಯಮಗಳು ವಿಪರೀತವಾಗುವುದಿಲ್ಲವಯ್ಯಾ!

'ಆದರೆ, ವಿದ್ಯೆಯಿಂದ ಯಥಾರ್ಥಜ್ಞಾನವುಂಟಾಗಿ, ಯಥಾಯೋಗ್ಯವಾಗಿ ವ್ಯವಹಾರಗಳನ್ನು ಮಾಡುವುದರಿಂದ-ಮಾಡಿಸುವುದರಿಂದ, ತನ್ನನ್ನು ಮತ್ತು ಇತರರನ್ನು ಆನಂದಯುಕ್ತರನ್ನಾಗಿ ಮಾಡುವುದು ವಿದ್ಯೆಯ ಫಲವಾಗಿದೆ.

\+ ಅರ್ಥ:— (ಪಠಿತವ್ಯಮ್) ಓದಬೇಕಾಗಿಯತ್ತದೆ (ತದಪಿ) ಆದರೂ ಕೂಡ, (ಮರ್ತ್ತವ್ಯಮ್) ಸಾಯಬೇಕಾಗುತ್ತದೆ. (ನ ಪಠಿತವ್ಯಮ್) ಓದಬೇಕಾಗಿರುವುದಿಲ್ಲ (ತದಪಿ) ಆದರೂ ಕೂಡ, (ಮರ್ತ್ತವ್ಯಮ್) ಸಾಯಬೇಕಾಗುತ್ತದೆ. (ದಂತಕಟಾಕಟಾ) ಹಲ್ಲನ್ನು ಕಟಕಟಾ (ಇತಿ) ಎಂದು (ಕಿಮ್) ಏಕೆ (ಕರ್ತವ್ಯಮ್) ಮಾಡಬೇಕು?

* 'ಸತ್ಯಾರ್ಥ ಪ್ರಕಾಶ', ಏಕಾದಶ ಸಮುಲ್ಲಾಸ, ಪುಟ 763.

** ಅರ್ಥ:— (ನರಾಣಾಮ್) ಮನುಷ್ಯರಿಗೆ (ವಿದ್ಯಯಾ) ವಿದ್ಯೆಯಿಂದ (ವಿನಾ) ಹೊರತಾಗಿ (ಧ್ರುವಂ ಸೌಖ್ಯಮ್) ಸ್ಥಿರವಾದ ಸುಖವು (ನ ಜಾಯತೇ) ಉಂಟಾಗುವುದಿಲ್ಲ. (ಅತಃ) ಆದುದರಿಂದ, (ಧರ್ಮಾರ್ಥಮೋಕ್ಷೇಭ್ಯಃ) ಧರ್ಮ-ಅರ್ಥ-ಮೋಕ್ಷಗಳಿಗಾಗಿ (ವಿದ್ಯಾಭ್ಯಾಸಮ್) ವಿದ್ಯಾಭ್ಯಾಸವನ್ನು (ಸಮಾಚರೇತ್) ಚೆನ್ನಾಗಿ ಮಾಡಬೇಕು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

'ಏಕೆಂದರೆ, ವಿದ್ಯೆ ಇಲ್ಲದೇ ಯಾವ ಮನುಷ್ಯನಿಗೂ ನಿಶ್ಚಲವಾದ ಸುಖ ಉಂಟಾಗಲಾರದು.

'ಯಾವನಿಗಾದರೂ ಕ್ಷಣಮಾತ್ರ ಸುಖ ಉಂಟಾಯಿತೆಂದರೆ, ಆಯಿತು.

'ಅದು ಆಗಿಯೂ ಇಲ್ಲದಂತೆಯೇ!!

'ಅವಿದ್ವಾಂಸನಾಗಿದ್ದುಕೊಂಡು; ಧರ್ಮ, ಅರ್ಥ, ಕಾಮ ಮತ್ತು ಮೋಕ್ಷದ ಸ್ವರೂಪವನ್ನು ಸರಿ ಸರಿಯಾಗಿ ತಿಳಿದುಕೊಂಡು, [ಅವುಗಳನ್ನು] ಸಂಪಾದಿಸಿಕೊಳ್ಳುವ ಸಾಮರ್ಥ್ಯ ಯಾವನಿಗೂ ಇಲ್ಲ.

7750

'ಆದುದರಿಂದ, ಎಲ್ಲರಿಗೂ ಯೋಗ್ಯವಾದುದೇನೆಂದರೆ, ಇವುಗಳ ಸಂಪಾದನೆಗಾಗಿ ವಿದ್ಯೆಯ ಅಭ್ಯಾಸವನ್ನು, ತನು-ಮನ-ಧನಗಳಿಂದ ಮಾಡುತ್ತಿರಬೇಕು-ಮಾಡಿಸುತ್ತಿರಬೇಕು.'

ಗದ್ದಲೆ ತಿಮ್ಮ— ಬಹಳ ಮಂದಿ ವಿದ್ಯೆ ಓದಿದ ಮನುಷ್ಯರು ದರಿದ್ರರಾಗಿ, ಭಿಕ್ಷೆ ಬೇಡುತ್ತಿರುವುದನ್ನೂ ಮತ್ತು ಓದದೇ ಇರುವವರು ರಾಜ್ಯದ, ಧನದ ಆನಂದವನ್ನೂ ಭೋಗಿಸುತ್ತಿದ್ದಾರೆ, ಎಂಬುದನ್ನು ನಾವು ನೋಡುತ್ತಿದ್ದೇವಲ್ಲಾ?

ಸಜ್ಜನ — ಕೇಳಯ್ಯಾ ಪ್ರಿಯನೇ! ಸುಖ-ದುಃಖದ ಯೋಗವು ಆತ್ಮನಲ್ಲಿ ಉಂಟಾಗುತ್ತದೆ.

ಎಲ್ಲಿ ವಿದ್ಯಾರೂಪ ಸೂರ್ಯನ ಅಭಾವವೂ, ಮತ್ತು ಅವಿದ್ಯಾಂಧಕಾರದ ಭಾವವೂ ಇರುತ್ತದೋ, ಅಲ್ಲಿ ದುಃಖಗಳೇ ತುಂಬಿ ತುಳುಕುತ್ತಿರುತ್ತವೆ; ಮತ್ತೆ, ಸುಖದ ಕಥೆಯನ್ನು ಏನು ಹೇಳೋಣ!

ಮತ್ತು ಎಲ್ಲಿ ವಿದ್ಯಾರವಿಯು ಪ್ರಕಾಶಿತನಾಗಿ ಅವಿದ್ಯಾಂಧಕಾರದ ನಾಶ ಮಾಡಿಬಿಡುತ್ತಾನೋ, ಆ ಆತ್ಮನಲ್ಲಿ ಸದಾ ಆನಂದದ ಭೋಗವಿರುತ್ತದೆ. ಮತ್ತು ದುಃಖಕ್ಕೆ ನೆಲೆಯೇ ಸಿಗುವುದಿಲ್ಲ!

ಗದ್ದಲೆ ತಿಮ್ಮನು ತಲೆ ತುರಿಸಿಕೊಳ್ಳುತ್ತಾ ಸುಮ್ಮನಾಗಿ ಬಿಟ್ಟನು!

(ಆಚಾರ್ಯರಿಂದ ಶಿಕ್ಷಣ)

ಪ್ರಶ್ನೆ: ಆಚಾರ್ಯರು ಯಾವ ರೀತಿಯಿಂದ ವಿದ್ಯೆಯ ಮತ್ತು ಸುಶಿಕ್ಷಣದ ಗ್ರಹಣ ಮಾಡಿಸಬೇಕು? ಮತ್ತು ವಿದ್ಯಾರ್ಥಿಗಳು ಮಾಡಬೇಕು?

ಉತ್ತರ: ಆಚಾರ್ಯರು ಏಕಾಗ್ರಚಿತ್ತರಾಗಿ ಯಾವ ರೀತಿಯಿಂದ ವಿದ್ಯೆಯನ್ನೂ ಮತ್ತು ಸುಶಿಕ್ಷಣವನ್ನೂ ಕೊಡಬೇಕೆಂದರೆ—

(1) ಅದರಿಂದ ಅವರ* ಆತ್ಮಗಳಲ್ಲಿ ಸುನಿಶ್ಚಿತವಾದ ಅರ್ಥ ಉಂಟಾಗಿ, ಉತ್ಸಾಹವು ಹೆಚ್ಚುತ್ತಲೇ ಹೋಗಬೇಕು.

* ವಿದ್ಯಾರ್ಥಿಗಳ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(2) ಯಾವುದನ್ನು ನೋಡಿ, ಅಥವಾ ಮಾಡಿ, ವಿದ್ಯಾರ್ಥಿಗಳು ಅಧರ್ಮಯುಕ್ತರಾಗಿ ಹೋಗುವರೋ, ಅಂತಹ ಚೇಷ್ಟೆ ಅಥವಾ ಕೆಲಸವನ್ನು ಎಂದಿಗೂ ಮಾಡಬಾರದು!

(3) ದೃಷ್ಟಾಂತ ಕೊಡುವುದು, ಕೈಯಿಂದ ಮಾಡಿ ತೋರಿಸುವುದು; ಯಂತ್ರ, ಕಲಾ-ಕೌಶಲ್ಯ ವಿಚಾರ, ಮೊದಲಾದುವುಗಳ ಮೂಲಕ ವಿದ್ಯಾರ್ಥಿಗಳ ಆತ್ಮಗಳಲ್ಲಿ ಪದಾರ್ಥಗಳ ಸಾಕ್ಷಾತ್ಕಾರವನ್ನು ಯಾವ ರೀತಿಯಿಂದ ಮಾಡಿಸಬೇಕೆಂದರೆ, ಒಂದನ್ನು ತಿಳಿಯುವುದರಿಂದ ಸಾವಿರಾರು ಪದಾರ್ಥಗಳನ್ನು ಸರಿ ಸರಿಯಾಗಿ ತಿಳಿಯುತ್ತಾ ಹೋಗಬೇಕು.

(4) ತಮ್ಮ ಆತ್ಮಗಳಲ್ಲಿ ಯಾವ ಮಾತಿನ ಧ್ಯಾನವಿಡಬೇಕೆಂದರೆ —

"ಯಾವುದೇ ರೀತಿಯಿಂದಲಾದರೂ ಜಗತ್ತಿನಲ್ಲಿ ವಿದ್ಯೆಯ, ಹಾಗೂ ಧರ್ಮದ ಆಚರಣೆ ಹೆಚ್ಚುತ್ತಾ ಹೋಗಬೇಕು.

'ಮತ್ತು ನನ್ನಿಂದ ಓದಿಸಲ್ಪಟ್ಟ ಮನುಷ್ಯರು ಅವಿದ್ವಾಂಸರೂ, ಮತ್ತು ಕುಶಿಕ್ಷಿತರೂ ಆಗಿ, ನಾನೇ ವಿದ್ಯೆಯನ್ನು ನಿಲ್ಲಿಸುವುದಕ್ಕೂ, ಹಾಗೂ ಅವಿದ್ಯೆಯ ವೃದ್ಧಿಗೂ ನಿಮಿತ್ತನಾದೆನಲ್ಲಾ?, ಎಂಬ ನಿಂದೆಗೆ ನಾನು ಕಾರಣನಾಗಬಾರದು.

'ಸರ್ವಾತ್ಮನಾದ ಪರಮೇಶ್ವರನ ಗುಣ-ಕರ್ಮ-ಸ್ವಭಾವಗಳಿಗೆ ನನ್ನ ಗುಣ-ಕರ್ಮ-ಸ್ವಭಾವಗಳು ವಿರುದ್ಧವಾಗಿ ನನಗೆ ಮಹಾದುಃಖವನ್ನು ಭೋಗಿಸುವಂತಹ [ಪರಿಸ್ಥಿತಿಯೂ] ಉಂಟಾಗಬಾರದು.

'ಯಾರು ತಮ್ಮ ಆತ್ಮನಿಗೆ ಸಮಾನವಾಗಿ ಇತರ ಮನುಷ್ಯರ ಸುಖದಲ್ಲಿ [ತಮ್ಮ] ಸುಖವನ್ನೂ ಮತ್ತು ದುಃಖದಲ್ಲಿ [ತಮ್ಮ] ದುಃಖವನ್ನೂ ತಿಳಿದುಕೊಂಡು, ಧಾರ್ಮಿಕತೆಯನ್ನು ಎಂದಿಗೂ ಬಿಡುವುದಿಲ್ಲವೋ, ಆ ಮನುಷ್ಯರೇ ಧನ್ಯರು!"

ಈ ಮೊದಲಾದ ಉತ್ತಮ ವ್ಯವಹಾರಗಳನ್ನು ಆಚಾರ್ಯಜನರು ನಿತ್ಯವೂ ಆಚರಿಸುತ್ತಾ ಹೋಗಬೇಕು!

(ವಿದ್ಯಾರ್ಥಿಗಳಿಂದ ಶಿಕ್ಷಾಗ್ರಹಣ)

ವಿದ್ಯಾರ್ಥಿಗಳೂ ಕೂಡ—

(1) ಯಾವ ಕೆಲಸಗಳಿಂದ ಆಚಾರ್ಯನಿಗೆ ಪ್ರಸನ್ನತೆ ಉಂಟಾಗುತ್ತಾ ಹೋಗುತ್ತದೋ, ಅಂತಹ ಕೆಲಸಗಳನ್ನು ಮಾಡಬೇಕು.

ಇದರಿಂದ ಅವನ* ಆತ್ಮವು ಸಂತುಷ್ಟವಾಗಿ— 'ಈ ಜನರು ವಿದ್ಯೆಯಿಂದ ಯುಕ್ತರಾಗಿ ಯಾವಾಗಲೂ ಪ್ರಸನ್ನರಾಗಿರಲಿ', ಎಂದು [ಆಚಾರ್ಯನು] ಇಚ್ಛಿಸಬೇಕು.

* ಆಚಾರ್ಯನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(2) ಹಗಲು-ರಾತ್ರಿ ವಿದ್ಯೆಯ ವಿಚಾರದಲ್ಲೇ ತೊಡಗಿದ್ದುಕೊಂಡು, ಒಬ್ಬರೊಡನೊಬ್ಬರು ಪ್ರೇಮದಿಂದ ಪರಸ್ಪರ ವಿದ್ಯೆಯನ್ನು ಕಲಿಯುತ್ತಾ-ಕಲಿಸುತ್ತಾ ಹೋಗಬೇಕು.

(3) ಎಲ್ಲಿ 'ವಿಷಯ'ಗಳ ಅಥವಾ ಅಧರ್ಮದ ಚರ್ಚೆ ಕೂಡ, ಆಗುತ್ತಿರುತ್ತದೋ, ಅಲ್ಲಿ ಎಂದಿಗೂ ನಿಲ್ಲಲೂ ಬಾರದು!

(4) ಎಲ್ಲೆಲ್ಲಿ ವಿದ್ಯೆ ಮೊದಲಾದ ವ್ಯವಹಾರಗಳೂ, ಮತ್ತು ಧರ್ಮದ ವ್ಯಾಖ್ಯಾನವೂ ಆಗುತ್ತಿರುತ್ತದೋ, ಅಲ್ಲಿಂದ ದೂರವಾಗಿ ಎಂದಿಗೂ ಇರಬಾರದು!

(5) ಭೋಜನ-ವಸ್ತ್ರ ಯಾವ ರೀತಿಯಿಂದ ಮಾಡಬೇಕೆಂದರೆ, ಅದರಿಂದ ಎಂದಿಗೂ ರೋಗ, ವೀರ್ಯಹಾನಿ [ಆಗಬಾರದು]; ಅಥವಾ ಪ್ರಮಾದ ಹೆಚ್ಚಾಗಬಾರದು!

(6) ಯಾವ ಯಾವುವಾದರೂ ಬುದ್ಧಿಯನ್ನು ನಾಶ ಮಾಡುವಂತಹ ನಶೆಯ ಪದಾರ್ಥಗಳಿದ್ದರೆ, ಅವುಗಳ ಗ್ರಹಣವನ್ನು ಎಂದಿಗೂ ಮಾಡಬಾರದು!

(7) ಆದರೆ, ಯಾವ ಯಾವುವಾದರೂ ಜ್ಞಾನವನ್ನು ಹೆಚ್ಚಿಸುವ, ಮತ್ತು ರೋಗಗಳನ್ನು ನಾಶ ಮಾಡುವ ಪದಾರ್ಥಗಳಿದ್ದರೆ, ಅವುಗಳ ಸೇವನೆಯನ್ನೇ ಯಾವಾಗಲೂ ಮಾಡಬೇಕು.

(8) ಪ್ರತಿನಿತ್ಯವೂ ಪರಮೇಶ್ವರನ ಧ್ಯಾನವನ್ನೂ, ಯೋಗಾಭ್ಯಾಸವನ್ನೂ, ಬುದ್ಧಿಯ ವರ್ಧನೆಯನ್ನೂ, [ಹಾಗೂ] ಸತ್ಯಧರ್ಮದಲ್ಲಿ ನಿಷ್ಠೆಯನ್ನೂ ಮಾಡುತ್ತಿರಬೇಕು!

(9) ಮತ್ತು ಅಧರ್ಮದ ತ್ಯಾಗವನ್ನು ಎಲ್ಲಾ ರೀತಿಯಿಂದಲೂ ಮಾಡುತ್ತಿರಬೇಕು.

(10) ಓದುವುದರಲ್ಲಿ ಯಾವ ಯಾವುವು ವಿಘ್ನರೂಪ ಕರ್ಮಗಳೋ, ಅವನ್ನು ತ್ಯಜಿಸಿ, ಪೂರ್ಣವಿದ್ಯೆಯನ್ನು ಸಂಪಾದಿಸಬೇಕು!

ಈ ಮೊದಲಾಗಿ ಇಬ್ಬರದೂ* ಗುಣ-ಕರ್ಮಗಳಿವೆ.

(ಸತ್ಯ ಮತ್ತು ಅಸತ್ಯದ ಐದು ವಿಧದ ಪರೀಕ್ಷೆ)

ಪ್ರಶ್ನೆ : ಸತ್ಯ ಮತ್ತು ಅಸತ್ಯದ ನಿಶ್ಚಯವು ಯಾವ ರೀತಿಯಿಂದಾಗುತ್ತದೆ?

ಏಕೆಂದರೆ, ಯಾವುದನ್ನು ಒಬ್ಬನು ಸತ್ಯ, ಎಂದು ಹೇಳುತ್ತಾನೋ, ಅದನ್ನೇ ಇನ್ನೊಬ್ಬನು ಮಿಥ್ಯೆ, ಎಂದು ಹೇಳುತ್ತಾನೆ. ಅದರ ನಿರ್ಣಯ ಮಾಡುವುದಕ್ಕಾಗಿ ನಿಶ್ಚಿತವಾದ ಸಾಧನಗಳು ಯಾವ ಯಾವುವು?

ಉತ್ತರ: ಐದು ಇವೆ!+

---

* **ಆಚಾರ್ಯರ, ಮತ್ತು ವಿದ್ಯಾರ್ಥಿಗಳ.**

\+ **'ಸತ್ಯಾರ್ಥ ಪ್ರಕಾಶ್', ತೃತೀಯ ಸಮುಲ್ಲಾಸ, ಪುಟ** 88-89

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅವುಗಳಲ್ಲಿ **ಮೊದಲನೆಯದು**— ಈಶ್ವರ, ಅವನ ಗುಣ-ಕರ್ಮ-ಸ್ವಭಾವ ಮತ್ತು ವೇದವಿದ್ಯೆ.

ಎರಡನೆಯದು— ಸೃಷ್ಟಿಕ್ರಮ.

ಮೂರನೆಯದು— ಪ್ರತ್ಯಕ್ಷವೇ ಮೊದಲಾದ ಎಂಟು ಪ್ರಮಾಣಗಳು.

ನಾಲ್ಕನೆಯದು— ಆಪ್ತಜನರ ವಿಚಾರ, ಉಪದೇಶ, ಗ್ರಂಥ ಮತ್ತು ಸಿದ್ಧಾಂತ.

ಮತ್ತು **ಐದನೆಯದು**— ತನ್ನ ಆತ್ಮನ ಸಾಕ್ಷಿ, ಅನುಕೂಲತೆ, ಜಿಜ್ಞಾಸುತ್ವ, ಪವಿತ್ರತೆ ಮತ್ತು ವಿಜ್ಞಾನ!

(ಈಶ್ವರ)

[1] ಈಶ್ವರ ಮೊದಲಾದುದರಿಂದ ಪರೀಕ್ಷೆ ಮಾಡುವುದನ್ನು ಯಾವುದಕ್ಕೆ ಹೇಳುತ್ತಾರೆಂದರೆ —

ಯಾವ ಯಾವುದು ಈಶ್ವರನ ನ್ಯಾಯ ಮೊದಲಾದ ಗುಣಗಳು;

ಪಕ್ಷಪಾತರಹಿತವಾಗಿ ಸೃಷ್ಟಿಯನ್ನು ನಿರ್ಮಿಸುವ ಕರ್ಮ;

ಮತ್ತು ಸತ್ಯ, ನ್ಯಾಯ, ದಯಾಳುತ್ವ, ಪರೋಪಕಾರತ್ವ ಮೊದಲಾದ ಸ್ವಭಾವಗಳು;

ಮತ್ತು ವೇದೋಪದೇಶದಿಂದ ಯಾವುದು ಸತ್ಯ, ಹಾಗೂ ಧರ್ಮ, ಎಂದು ನಿಶ್ಚಿತವಾಗುತ್ತದೋ, ಅದೇ ಸತ್ಯ ಹಾಗೂ ಧರ್ಮ;

ಮತ್ತು ಯಾವ ಯಾವುದು ಅಸತ್ಯ, ಹಾಗೂ ಅಧರ್ಮ, ಎಂದು ನಿಶ್ಚಿತವಾಗುವುದೋ, ಅದೇ ಅಸತ್ಯ ಹಾಗೂ ಅಧರ್ಮ; ಆಗಿರುತ್ತವೆ.

ಉದಾಹರಣೆಗಾಗಿ — 'ಕಾರಣ ಮತ್ತು ಕರ್ತನಿಲ್ಲದೇ ಕಾರ್ಯವಾಗುತ್ತದೆ', ಎಂದು ಯಾವನಾದರೂ ಹೇಳಿದರೆ, ಅದನ್ನು ಸರ್ವಥಾ ಮಿಥ್ಯೆ, ಎಂದು ತಿಳಿಯಬೇಕು.

ಇದರಿಂದ ಸಿದ್ಧವಾಗುವುದೇನೆಂದರೆ, ಯಾವುದು ಸೃಷ್ಟಿಯನ್ನು ನಿರ್ಮಿಸುವ ಪದಾರ್ಥವಾಗಿರುತ್ತದೋ, ಅದೇ ಈಶ್ವರನಾಗಿರುತ್ತದೆ.

ಮತ್ತು ಅವನ ಗುಣ, ಕರ್ಮ, ಸ್ವಭಾವಗಳು ವೇದ ಮತ್ತು ಸೃಷ್ಟಿಕ್ರಮದಿಂದಲೇ ನಿಶ್ಚಿತವಾಗಿ ತಿಳಿಯಲ್ಪಡುತ್ತವೆ.

(ಸೃಷ್ಟಿಕ್ರಮ)

[2] ಎರಡನೆಯದಾಗಿ, **ಸೃಷ್ಟಿಕ್ರಮ**ವನ್ನು ಯಾವುದಕ್ಕೆ ಹೇಳುತ್ತಾರೆಂದರೆ—

ಯಾವ ಯಾವುದು **'ಸೃಷ್ಟಿಕ್ರಮ'**ಕ್ಕೆ, ಎಂದರೆ ಸೃಷ್ಟಿಯ ಗುಣ, ಕರ್ಮ ಮತ್ತು ಸ್ವಭಾವಗಳಿಗೆ ವಿರುದ್ಧವಾಗಿರುತ್ತದೋ, ಅದು **'ಮಿಥ್ಯೆ'** ಎನಿಸುತ್ತದೆ; ಮತ್ತು ಯಾವುದು ಅನುಕೂಲವೋ, ಅದು **'ಸತ್ಯ'** ಎನಿಸುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉದಾಹರಣೆಗಾಗಿ — 'ತಾಯಿ-ತಂದೆ ಇಲ್ಲದೇ ಮಕ್ಕಳು [ಹುಟ್ಟುತ್ತಾರೆ], ಕಿವಿಯಿಂದ ನೋಡುವುದು, ಕಣ್ಣಿನಿಂದ ಮಾತನಾಡುವುದು, ಮೊದಲಾದುವು ಆಗುತ್ತವೆ, ಅಥವಾ ಆದುವು', ಎಂದು ಯಾವನಾದರೂ ಹೇಳಿದರೆ, ಅಂತಂತಹ ಮಾತುಗಳು ಸೃಷ್ಟಿಕ್ರಮಕ್ಕೆ ವಿರುದ್ಧವಾದುದರಿಂದ, ಮಿಥ್ಯೆಯಾಗಿರುತ್ತವೆ.

ಮತ್ತು ತಾಯಿ-ತಂದೆಯಿಂದ ಮಕ್ಕಳು [ಹುಟ್ಟುವುದು], ಕಿವಿಯಿಂದ ಕೇಳುವುದು, ಮತ್ತು ಕಣ್ಣಿನಿಂದ ನೋಡುವುದು ಮೊದಲಾದುವು ಸೃಷ್ಟಿಕ್ರಮಕ್ಕೆ ಅನುಕೂಲವಾಗಿರುವುದರಿಂದ, ಸತ್ಯವೇ ಆಗಿರುತ್ತವೆ.

(ಪ್ರತ್ಯಕ್ಷಾದಿ ಪ್ರಮಾಣಗಳು)

[3] ಮೂರನೆಯದಾದ **ಪ್ರತ್ಯಕ್ಷ** ಮೊದಲಾದ ಎಂಟು ಪ್ರಮಾಣಗಳಿಂದ ಪರೀಕ್ಷೆ ಮಾಡುವುದನ್ನು ಯಾವುದಕ್ಕೆ ಹೇಳುತ್ತಾರೆಂದರೆ—

ಯಾವ ಯಾವುದು ಪ್ರತ್ಯಕ್ಷಾದಿ ಪ್ರಮಾಣಗಳಿಂದ ಸರಿ ಸರಿಯಾಗಿ ನಿರ್ಧರಿಸಲ್ಪಡುತ್ತದೋ, ಅದು **'ಸತ್ಯ'**, ಎಂದೂ, ಮತ್ತು ಯಾವ ಯಾವುದು ವಿರುದ್ಧ, ಎಂದು ನಿರ್ಧರಿಸಲ್ಪಡುತ್ತದೋ, ಅದು **'ಮಿಥ್ಯೆ'**, ಎಂದೂ ತಿಳಿಯಬೇಕು.

ಉದಾಹರಣೆಗಾಗಿ— ಯಾವನೋ ಯಾವನೊಂದಿಗೋ— 'ಇದು ಏನು?', ಎಂದು ಕೇಳಿದನು.

ಅವನು— 'ಇದು ಪೃಥಿವೀ!, [ಎಂದು ಹೇಳಿದನು]. ಇದು **'ಪ್ರತ್ಯಕ್ಷ'**!

ಇದನ್ನು ನೋಡಿ, ಇದರ ಕಾರಣದ ನಿಶ್ಚಯ ಮಾಡುವುದು; ಇದು **'ಅನುಮಾನ!'**

ಹೇಗೆ ನಿರ್ಮಿಸುವವನಿಲ್ಲದೇ ಮನೆ ಆಗಲಾರದೋ, ಹಾಗೆಯೇ ಸೃಷ್ಟಿಯ ನಿರ್ಮಾಣ ಮಾಡುವಂತಹ ಈಶ್ವರನೂ ಕೂಡ, ದೊಡ್ಡ ಶಿಲ್ಪಿಯಾಗಿರುತ್ತಾನೆ. ಈ ದೃಷ್ಟಾಂತವು **'ಉಪಮಾನ'**!

ಮತ್ತು ಸತ್ಯವನ್ನು ಉಪದೇಶಿಸುವವರ ಉಪದೇಶ; ಇದು **'ಶಬ್ದ!'**

ಭೂತಕಾಲದಲ್ಲಿದ್ದ ಮನುಷ್ಯರ ಕ್ರಿಯೆ, ದೃಷ್ಟಿ ಮೊದಲಾದ ಪದಾರ್ಥಗಳ [ಬಗ್ಗೆ] ಕಥನ, ಮೊದಲಾದುವನ್ನು **'ಐತಿಹ್ಯ'**, [ಎನ್ನುತ್ತಾರೆ.]

ಒಂದು ಮಾತನ್ನು ಆಲಿಸಿಕೊಂಡು, ಕೇಳದೇ-ಹೇಳದೇ, ಪ್ರಸಂಗದಿಂದ ಇನ್ನೊಂದು ಮಾತನ್ನು ತಿಳಿದುಕೊಂಡುಬಿಡುವುದು; ಇದು **'ಅರ್ಥಾಪತ್ತಿ!'**

ಕಾರಣದಿಂದ ಕಾರ್ಯ ಆಗುವುದು ಮೊದಲಾದುದನ್ನು **'ಸಂಭವ'**, [ಎನ್ನುತ್ತಾರೆ.]

ಮತ್ತು ಎಂಟನೆಯದಾದ **'ಅಭಾವ'**!, ಎಂದರೆ ಯಾವನೋ ಯಾವನಿಗೋ— 'ನೀನು ನೀರನ್ನು ತೆಗೆದುಕೊಂಡು ಬಾ', ಎಂದು ಹೇಳಿದನು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅವನು ಅಲ್ಲಿ ನೀರಿನ ಅಭಾವವನ್ನು ತಿಳಿದುಕೊಂಡು — 'ಎಲ್ಲಿ ನೀರು ಇರುತ್ತದೋ, ಅಲ್ಲಿಂದ ತಂದು ಕೊಡಬೇಕು, ಎಂದು ತರ್ಕದಿಂದ ತಿಳಿದುಕೊಂಡನು. ಇದು '**ಅಭಾವ**'ದ ಪ್ರಮಾಣ ಎನಿಸುತ್ತದೆ.

ಈ ಎಂಟು ಪ್ರಮಾಣಗಳಿಗೆ ಯಾವ ಯಾವುದು ವಿರುದ್ಧವಾಗಿಲ್ಲವೋ, ಅದದು '**ಸತ್ಯ**'ವಾಗಿಯೂ, ಮತ್ತು ಯಾವ ಯಾವುದು ವಿಪರೀತವಾಗಿರುತ್ತದೋ, ಅದದು '**ಮಿಥ್ಯೆ**'ಯಾಗಿಯೂ ಇರುತ್ತದೆ.

(ಆಪ್ತರ ಆಚರಣೆ)

[4] ಆಪ್ತಜನರ ಆಚರಣೆ ಮತ್ತು ಸಿದ್ಧಾಂತಗಳಿಂದ ಪರೀಕ್ಷೆ ಮಾಡುವುದನ್ನು ಯಾವುದಕ್ಕೆ ಹೇಳುತ್ತಾರೆಂದರೆ—

ಯಾರು ಯಾರು ಸತ್ಯವಾದಿಗಳೂ, ಸತ್ಯಕರ್ಮಿಗಳೂ, ಸತ್ಯಮಾನಿಗಳೂ ಪಕ್ಷಪಾತರಹಿತರೂ, ಎಲ್ಲರ ಹಿತೈಷಿಗಳೂ ಆದ ವಿದ್ವಾಂಸರು ಎಲ್ಲರ ಸುಖಕ್ಕಾಗಿ, ಪ್ರಯತ್ನ ಮಾಡುತ್ತಾರೋ, ಆ ಧಾರ್ಮಿಕ ಜನರು '**ಆಪ್ತರು**', ಎಂದು ಕರೆಯಲ್ಪಡುತ್ತಾರೆ.

ಅವರ ಉಪದೇಶ, ಆಚರಣೆ, ಗ್ರಂಥ ಮತ್ತು ಸಿದ್ಧಾಂತಗಳಿಗೆ ಯಾವುದು ಯುಕ್ತವಾಗಿರುತ್ತದೋ, ಅದು '**ಸತ್ಯ**' ಆಗಿರುತ್ತದೆ, ಮತ್ತು ಯಾವುದು ವಿಪರೀತವಾಗಿರುತ್ತದೋ, ಅದು '**ಮಿಥ್ಯೆ**' ಆಗಿರುತ್ತದೆ.

(ಆತ್ಮಪರೀಕ್ಷೆ)

[5] ಆತ್ಮನಿಂದ ಪರೀಕ್ಷೆ ಯಾವುದಕ್ಕೆ ಹೇಳುತ್ತಾರೆಂದರೆ—

ತನ್ನ ಆತ್ಮವು ತನಗಾಗಿ ಯಾವ ಯಾವುದನ್ನು ಇಚ್ಛಿಸುತ್ತದೋ, ಅದು-ಅದೆಲ್ಲವನ್ನೂ ಎಲ್ಲರಿಗಾಗಿಯೂ ಇಚ್ಛಿಸುವುದು! ಮತ್ತು ಯಾವ ಯಾವುದನ್ನು ಇಚ್ಛಿಸುವುದಿಲ್ಲವೋ, ಅದು-ಅದೆಲ್ಲವನ್ನೂ ಯಾರಿಗಾಗಿಯೂ ಇಚ್ಛಿಸದಿರುವುದು!

ಹೇಗೆ ಆತ್ಮನಲ್ಲಿರುತ್ತದೋ, ಹಾಗೆ ಮನಸ್ಸಿನಲ್ಲಿ; ಹೇಗೆ ಮನಸ್ಸಿನಲ್ಲಿರುತ್ತದೋ, ಹಾಗೆ ಕ್ರಿಯೆಯಲ್ಲಿ ಉಂಟಾಗುವುದನ್ನು ತಿಳಿಯುವ-ತಿಳಿಸುವ ಇಚ್ಛೆ!

ಶುದ್ಧ ಭಾವನೆ ಮತ್ತು ವಿದ್ಯೆಯ ನೇತ್ರದಿಂದ ನೋಡಿ, ಸತ್ಯ ಮತ್ತು ಅಸತ್ಯದ ನಿಶ್ಚಯವನ್ನು ಮಾಡಬೇಕು!

ಈ ಐದು ಪ್ರಕಾರದ ಪರೀಕ್ಷೆಗಳ ಮೂಲಕ ಓದುವವರು ಮತ್ತು ಓದಿಸುವವರು, ಮತ್ತು ಮನುಷ್ಯರೆಲ್ಲರೂ ಸತ್ಯಾಸತ್ಯದ ನಿರ್ಣಯ ಮಾಡಿ, ಧರ್ಮದ ಗ್ರಹಣವನ್ನೂ, ಹಾಗೂ ಅಧರ್ಮದ ಪರಿತ್ಯಾಗವನ್ನೂ ಮಾಡಬೇಕು; ಮತ್ತು ಮಾಡಿಸಬೇಕು!

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಧರ್ಮ ಮತ್ತು ಅಧರ್ಮ)

ಪ್ರಶ್ನೆ: '**ಧರ್ಮ**' ಮತ್ತು '**ಅಧರ್ಮ**', ಎಂದು ಯಾವುದಕ್ಕೆ ಹೇಳುತ್ತಾರೆ?

ಉತ್ತರ: ಯಾವುದು ಪಕ್ಷಪಾತರಹಿತವಾದ ನ್ಯಾಯವೂ, ಸತ್ಯದ ಅಂಗೀಕಾರವೂ, ಅಸತ್ಯದ ಪರಿತ್ಯಾಗವೂ, ಐದೂ ಪರೀಕ್ಷೆಗಳಿಗೆ ಅನುಕೂಲವಾಗಿ ಆಚರಣೆಯೂ, ಈಶ್ವರಾಜ್ಞೆಯ ಪಾಲನೆಯೂ, ಮತ್ತು ಪರೋಪಕಾರ ಮಾಡುವುದೂ ಆಗಿರುತ್ತದೋ, ಅದು '**ಧರ್ಮ**', ಎನಿಸುತ್ತದೆ.

ಮತ್ತು ಯಾವುದು ಇದಕ್ಕೆ ವಿಪರೀತವಾಗಿರುತ್ತದೋ, ಅದು '**ಅಧರ್ಮ**', ಎನಿಸುತ್ತದೆ.

ಏಕೆಂದರೆ, ಯಾವುದು [ಇವೆಲ್ಲಕ್ಕೂ] ಅವಿರುದ್ಧವಾಗಿದೆಯೋ, ಅದು '**ಧರ್ಮ**' ಎಂದೂ, ಮತ್ತು ಯಾವುದು [ಇವಕ್ಕೆ] ಪರಸ್ಪರ ವಿರುದ್ಧಾಚರಣೆಯಾಗಿದೆಯೋ, ಅದು '**ಅಧರ್ಮ**', ಎಂದೂ ಏತಕ್ಕಾಗಿ ಕರೆಯಲಾಗದು?

ದೃಷ್ಟಾಂತ–[4] (ಧರ್ಮಾಧರ್ಮದ ಬಗ್ಗೆ ಸಂವಾದ)

ನೋಡಿರಿ! ಯಾವನೋ ಯಾವನಿಗೋ— 'ಸತ್ಯ ಯಾವುದು?', ಎಂದು ಕೇಳಿದನು.

ಅವನು ಇವನಿಗೆ— 'ಯಾವುದನ್ನು ನಾನು ಅಂಗೀಕರಿಸುತ್ತೇನೋ, ಅದು!', ಎಂದು ಉತ್ತರ ಕೊಟ್ಟನು.

ಮತ್ತೆ ಇವನು — 'ಹಾಗಾದರೆ, ಯಾವುದನ್ನು ನೀನು ಅಂಗೀಕರಿಸುತ್ತೀಯೋ, ಅಥವಾ ಯಾವುದನ್ನು ನಾನು ಅಂಗೀಕರಿಸುತ್ತೇನೋ, ಅದು ಯಾವುದು?', ಎಂದು ಕೇಳಿದನು.

ಅವನು — 'ಅದು ಅಧರ್ಮ!', ಎಂದು ಹೇಳಿದನು.

ಎಂದರೆ, ಪಕ್ಷಪಾತದಿಂದ ಮಿಥ್ಯೆಯ [ಆಚರಣೆ], ಹಾಗೂ ವಿರುದ್ಧಾಚಾರ ಮಾಡುವುದೇ '**ಅಧರ್ಮ**'ವಾಗಿರುತ್ತದೆ.

ಆಗ, ಮೂರನೆಯವನು ಇವರಿಬ್ಬರನ್ನೂ— 'ಸತ್ಯವನ್ನು ಹೇಳುವುದು ಧರ್ಮವೋ, ಅಥವಾ ಅಸತ್ಯವನ್ನು [ಹೇಳುವುದೋ]?', ಎಂದು ಕೇಳಿದನು.

ಆಗ ಇಬ್ಬರೂ— 'ಸತ್ಯವನ್ನು ಹೇಳುವುದು '**ಧರ್ಮ**' ಮತ್ತು ಅಸತ್ಯವನ್ನು ಹೇಳುವುದು '**ಅಧರ್ಮ**' ', ಎಂದು ಉತ್ತರ ಕೊಟ್ಟರು.

ಇದನ್ನೇ '**ಧರ್ಮ**', ಎಂದು ತಿಳಿಯಿರಿ!

(ನೀತಿ)

ಆದರೆ, ಈ ವಿಷಯದಲ್ಲಿ ಐದು [ತರಹದ] ಪರೀಕ್ಷೆಗಳ [ಮೂಲಕ] ಯುಕ್ತಿಯಿಂದ ಸತ್ಯದ, ಹಾಗೂ ಅಸತ್ಯದ ನಿಶ್ಚಯ ಮಾಡುವುದು ಯೋಗ್ಯವಾಗಿರುತ್ತದೆ!

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಸಭೆಯಲ್ಲಿ ಸಭ್ಯತೆಯ ವ್ಯವಹಾರ)

ಪ್ರಶ್ನೆ: ಯಾವಾಗ ಯಾವಾಗ ಸಭೆ ಮೊದಲಾದುವುಗಳಿಗೆ ಹೋಗುತ್ತೇವೋ, ಆಗ ಹೇಗೆ ಹೇಗೆ ವರ್ತಿಸಬೇಕು?

ಉತ್ತರ: ಯಾವಾಗ ಸಭೆಯೊಳಗೆ ಹೋಗುತ್ತೇವೋ, ಆಗ—

(1) **'ನಾನು ಸತ್ಯವನ್ನು ಗೆಲ್ಲಿಸುವೆನು ಮತ್ತು ಅಸತ್ಯವನ್ನು ಸೋಲಿಸುವೆನು'**, ಎಂಬ ದೃಢ ನಿಶ್ಚಯವನ್ನು ಮಾಡಿಕೊಂಡು ಬಿಡಬೇಕು!

(2) **ಅಭಿಮಾನವನ್ನಿಡಬಾರದು; ತನ್ನನ್ನು [ಇತರರಿಗಿಂತ] ದೊಡ್ಡವನು, ಎಂದು ತಿಳಿಯಬಾರದು!**

(3) **ತನ್ನ ಮಾತನ್ನು ಯಾವನಾದರೂ ಖಂಡಿಸಿದರೆ, ಅವನ ಮೇಲೆ ಕೋಪ ಮಾಡಿಕೊಳ್ಳ ಬಾರದು, ಅಥವಾ ಅಪ್ರಸನ್ನನಾಗಬಾರದು!**

(4) ಯಾವನಾದರೂ ಏನನ್ನಾದರೂ ಹೇಳಿದರೆ, ಅವನ ಮಾತನ್ನು ಧ್ಯಾನ ಕೊಟ್ಟು ಆಲಿಸಿ, ಅದರಲ್ಲಿ ಯಾವುದಾದರೂ ಸ್ವಲ್ಪ ಅಸತ್ಯ ಇರುವುದು ತೋರಿಬಂದರೆ, ಅಷ್ಟು ಅಂಶದ ಖಂಡನೆಯನ್ನು ಅವಶ್ಯವಾಗಿ ಮಾಡಬೇಕು.

(5) **ಮತ್ತು ಯಾವುದು ಸತ್ಯವೋ, ಅದನ್ನು ಪ್ರಸನ್ನತಾಪೂರ್ವಕವಾಗಿ ಅಂಗೀಕರಿಸಬೇಕು; ದೊಡ್ಡಸ್ತಿಕೆ-ಚಿಕ್ಕಸ್ತಿಕೆಯ ಗಣನೆ ತರಬಾರದು!**

(6) ವ್ಯರ್ಥವಾಗಿ ಒದರಾಡಬಾರದು!

(7) ಎಂದಿಗೂ ಮಿಥ್ಯೆಯ ಪಕ್ಷವನ್ನು ಹಿಡಿಯಬಾರದು, ಮತ್ತು ಸತ್ಯವನ್ನು ಎಂದಿಗೂ ಬಿಡಬಾರದು!

(8) ಎಂತಹ ರೀತಿಯಿಂದ ಕೂಡಬೇಕು ಏಳಬೇಕು, ಎಂದರೆ, ಅದರಿಂದ ಯಾರಿಗೂ ಕೆಟ್ಟದು ಎನಿಸಕೂಡದು!

(9) ಎಲ್ಲರ ಹಿತದ ಮೇಲೂ ದೃಷ್ಟಿ ಇಟ್ಟಿರಬೇಕು!

(10) ಯಾವುದರಿಂದ ಸತ್ಯದ ಉನ್ನತಿಯೂ, ಹಾಗೂ ಅಸತ್ಯದ ನಾಶವೂ ಆಗುತ್ತದೋ, ಅದನ್ನು ಮಾಡಬೇಕು!

(11) ಸಜ್ಜನರ ಸಂಗ ಮಾಡಬೇಕು; ಮತ್ತು ದುಷ್ಟರಿಂದ ದೂರ ಇರಬೇಕು!

(12) ಯಾವ ಯಾವ ಪ್ರತಿಜ್ಞೆಯು ಮಾಡಲ್ಪಡುತ್ತದೋ, ಅದು ಅದು ಸತ್ಯಕ್ಕೆ ವಿರುದ್ಧ ವಾಗಿರಬಾರದು; ಮತ್ತು ಅದನ್ನು ಯಾವಾಗಲೂ ಸರಿಯಾಗಿ ಪೂರೈಸಬೇಕು!

ಈ ಮೊದಲಾದ ಕೆಲಸಗಳನ್ನು ಎಲ್ಲಾ ಸಭೆ ಮೊದಲಾದ ವ್ಯವಹಾರಗಳಲ್ಲಿ ಮಾಡಬೇಕು!

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಜಡಬುದ್ಧಿ ಮತ್ತು ತೀವ್ರಬುದ್ಧಿ)

ಪ್ರಶ್ನೆ: 'ಜಡಬುದ್ಧಿ' ಮತ್ತು 'ತೀವ್ರಬುದ್ಧಿ', ಎಂದು ಯಾವನಿಗೆ ಹೇಳುತ್ತಾರೆ?

ಉತ್ತರ: ಯಾವನು ತಾನಂತೂ ತಿಳಿಯಲೇ ಲಾರನೋ, ಮತ್ತು ಇತರರಿಂದ ತಿಳಿಸಲ್ಪಟ್ಟರೂ ಕೂಡ, ತಿಳಿಯನೋ, ಅವನು '**ಜಡಬುದ್ಧಿ**'!

ಆದರೆ, [ಯಾವನು] ತಿಳಿಸಿದಾಗ, ತಟ್ಟನೇ ತಿಳಿದುಕೊಳ್ಳುತ್ತಾನೋ, ಮತ್ತು ಸ್ವಲ್ಪವನ್ನೇ ತಿಳಿಸಿದಾಗ ಬಹಳ ತಿಳಿದುಕೊಳ್ಳುತ್ತಾನೋ, ಅವನು '**ತೀವ್ರಬುದ್ಧಿ**', ಎಂದು ಕರೆಯಲ್ಪಡುತ್ತಾನೆ.

ದೃಷ್ಟಾಂತ*-[5]

ಈಗ, ಮಹಾಮಂದಮತಿ ಮತ್ತು ವಿದ್ವಾಂಸನ ದೃಷ್ಟಾಂತವನ್ನು ಆಲಿಸಿರಿ!

(ಬೈರಾಗಿ ರಾಮದಾಸನ 'ಪಾಂಡಿತ್ಯ'!)

ಎಲ್ಲೋ ರಾಮದಾಸ, ಎಂಬ ಬೈರಾಗಿಯೊಬ್ಬನ ಶಿಷ್ಯನಾದ ಗೋಪಾಲದಾಸ, ಎಂಬುವನು ಪಾಠವನ್ನು '**ಉರು**' ಹೊಡೆಯುತ್ತಾ ಹೊಡೆಯುತ್ತಾ, ನೀರನ್ನು ತರಲು ಬಾವಿಯ ಬಳಿಗೆ ಹೋದನು.

ಅಲ್ಲಿ ಒಬ್ಬ ಪಂಡಿತನು ಕುಳಿತಿದ್ದನು.

ಅವನು ಅಶುದ್ಧ ಪಾಠವನ್ನು ಕೇಳಿ— '**ನೀನು ಸ್ರೀ ಗನೇಸಾಯ ನಮ**', ಎಂದು ಉರು ಹೊಡೆಯುತ್ತಿದ್ದೀಯೆ! ಇದು ಶುದ್ಧವಾಗಿಲ್ಲ. ಆದುದರಿಂದ, '**ಶ್ರೀ ಗಣೇಶಾಯ ನಮಃ**', ಎಂಬ ಶುದ್ಧಪಾಠವನ್ನು ಮಾಡು', ಎಂದು ಹೇಳಿದನು.

ಆಗ ಅವನು+ — ''ನಮ್ಮ ಮಹಂತರು ದೊಡ್ಡ ಪಂಡಿತರಾಗಿದ್ದಾರೆ. ಅವರು ನನಗೆ ಹೇಗೆ ಹೇಳಿಕೊಟ್ಟಿದ್ದಾರೋ, ಹಾಗೆಯೇ ನಾನು '**ಉರು**' ಹೊಡೆಯುತ್ತೇನೆ', ಎಂದು ಹೇಳಿದನು.

ಅವನು+ ನೀರನ್ನು ತುಂಬಿಕೊಂಡು, ತನ್ನ ಗುರುವಿನ ಬಳಿಗೆ ಹೋಗಿ— 'ಮಹಾರಾಜ್ ಜೀ! ಒಬ್ಬ ಬಮ್ಮನ್$ ನನ್ನ ಬಾಯಿಪಾಠವನ್ನು '**ಅಸುದ್ಧ**'** ಎಂದು ಹೇಳುತ್ತಾನೆ', ಎಂದು ತಿಳಿಸಿದನು.

ಆಗ ಖಾಖೀಜೀ* ತನ್ನ ಶಿಷ್ಯರಿಗೆ — 'ಆ ಬಮ್ಮನ್‌ನನ್ನು ಇಲ್ಲಿಗೆ ಕರೆದುಕೊಂಡು ಬನ್ನಿರಿ! ಆ ಗುರುವಿನ 'ಝಾಡಮಾಲೀ ನನ್ನ ಶಿಷ್ಯರನ್ನು ಏತಕ್ಕಾಗಿ ದಾರಿ ತಪ್ಪಿಸುತ್ತಿದ್ದಾನೆ? ಮತ್ತು ಶುದ್ಧವನ್ನು ಅಶುದ್ಧ, ಎಂದು ಏಕೆ ತೋರಿಸುತ್ತಿದ್ದಾನೆ?', ಎಂದು ಹೇಳಿದನು.

---

* '**ಸತ್ಯಾರ್ಥ ಪ್ರಕಾಶ**', ಏಕಾದಶ ಸಮುಲ್ಲಾಸ, ಪುಟ 764-765ನ್ನೂ ನೋಡಿರಿ.

\+ ಶಿಷ್ಯನು $ ಬ್ರಾಹ್ಮಣ

** '**ಅಶುದ್ಧ**', ಎಂಬುದರ ಅಪಪ್ರಯೋಗ.

* ಉತ್ತರಭಾರತದಲ್ಲಿ ಅಶಿಕ್ಷಿತ ಸಂನ್ಯಾಸಿಗಳ ತಂಡದಲ್ಲಿ ಒಂದು ಸಂಪ್ರದಾಯ '**ಖಾಖೀ**', ಎಂಬುದಾಗಿದೆ.

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ಶಿಷ್ಯನು ಹೋದನು! ಪಂಡಿತಜೀಯನ್ನು ಕರೆದುಕೊಂಡು ಬಂದನು!

ಮಹಂತರು ಪಂಡಿತನಿಗೆ— 'ನೀನು ಇದರ ಎಷ್ಟು ಪ್ರಕಾರದ ಪಾಠಗಳನ್ನು ತಿಳಿದಿದ್ದೀಯಾ?', ಎಂದು ಕೇಳಿದನು.

ಪಂಡಿತನು — 'ಒಂದು ಪ್ರಕಾರದ!', ಎಂದು ಹೇಳಿದನು.

ಮಹಂತರು — 'ನೀನು ಏನನ್ನೂ ತಿಳಿದಿಲ್ಲ! ನೋಡು! ನಾನು ಮೂರು ಪ್ರಕಾರದ ಪಾಠಗಳನ್ನು ತಿಳಿದಿದ್ದೇನೆ!'

ಒಂದು — '**ಸ್ರೀ ಗನೇಸಾಜನಮ!**

ಎರಡನೇದು — '**ಸ್ರೀ ಗನೇಸಾಪನಮ!!**

ಮೂರನೇದು — '**ಸ್ರೀ ಗನೇಸಾಯನಮ!!!**

ಪಂಡಿತ— ಮಹಂತಜೀ ! 'ನಿಮ್ಮ ಪಾಠದಲ್ಲಿ ಐದು ದೋಷಗಳಿವೆ.

ಮೊದಲನೆಯದು — '**ಶ**' ಸ್ಥಾನದಲ್ಲಿ '**ಸ**'!

ಎರಡನೆಯದು — '**ಣ**' ಸ್ಥಾನದಲ್ಲಿ '**ನ**'!

ಮೂರನೆಯದು — '**ಶಾ**' ಸ್ಥಾನದಲ್ಲಿ '**ಸಾ**'!

ನಾಲ್ಕನೆಯದು — '**ಯ**' ಸ್ಥಾನದಲ್ಲಿ '**ಜ**' ಮತ್ತು '**ಪ**', ಎಂದು ಹೇಳುವುದು!

ಮತ್ತು ಐದನೆಯದು — ವಿಸರ್ಜನೀಯವನ್ನು ಉಚ್ಚರಿಸದಿರುವುದು!

[ಹೀಗೆ], ಈ ಐದು ಅಶುದ್ಧಗಳಿವೆ.

ಮಹಂತರು— 'ಹೋಗೋ ಲೋ! ಗುರುವಿನ ಮನೆಯಲ್ಲಿ ಎಲ್ಲವೂ ಸುದ್ಧ[*]ವಾಗಿರುತ್ತವೆ!', ಎಂದು ಹೇಳಿದರು.

ಪಂಡಿತರು ಸುಮ್ಮನಾಗಿ ಹೊರಟು ಬಂದರು. ಏಕೆಂದರೆ—

"ಸರ್ವಸ್ಯೌಷಧಮಸ್ತಿ ಶಾಸ್ತ್ರಕಥಿತಂ ಮೂರ್ಖಸ್ಯ ನಹಿ ಕುತ್ರಚಿತ್"=

[**ನೀತಿಶತಕ, ಶ್ಲೋಕ** 11]

ಎಲ್ಲಕ್ಕೂ ಔಷಧವನ್ನು [ಶಾಸ್ತ್ರಗಳಲ್ಲಿ] ಹೇಳಲಾಗಿದೆ. ಆದರೆ, ಶಠ ಮನುಷ್ಯರಿಗೆ ಔಷಧ ಯಾವುದೂ ಇಲ್ಲ!

---

* **'ಶುದ್ಧ', ಎಂಬುದರ ಅಪಪ್ರಯೋಗ.**

= **ಅರ್ಥ :— (ಶಾಸ್ತ್ರಕಥಿತಮ್) [ಆಯುರ್ವೇದ] ಶಾಸ್ತ್ರಗಳಲ್ಲಿ ಹೇಳಿದ (ಔಷಧಮ್) ಔಷಧವು (ಸರ್ವಸ್ಯ) ಎಲ್ಲರಿಗಾಗಿಯೂ (ಅಸ್ತಿ) ಇದೆ. [ಆದರೆ], (ಮೂರ್ಖಸ್ಯ) ಮೂರ್ಖನಿಗಾಗಿ (ಕುತ್ರಚಿತ್ ನಹಿ) ಎಲ್ಲಿಯೂ [ಹೇಳಲಾಗಿ] ಇಲ್ಲ.**

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ನೀತಿ)

ಇಂತಹ ಹಠಮಾರಿ ಮನುಷ್ಯರಿಂದ ದೂರ ಇರಬೇಕು!

ಒಂದು ವೇಳೆ, ಅವರು ತಿದ್ದುಕೊಳ್ಳಲ್ಪಡಲು ಇಚ್ಛಿಸಿದರೆ, ವಿದ್ವಾಂಸರು ಉಪದೇಶ ಮಾಡಿ, ಅವರನ್ನು ಅವಶ್ಯವಾಗಿ ತಿದ್ದಬೇಕು!

[ಎಂತಹ ಆಜ್ಞೆಯನ್ನು ಪಾಲಿಸಬಾರದು?]

ಪ್ರಶ್ನೆ: ತಾಯಿ-ತಂದೆ, ಆಚಾರ್ಯ ಮತ್ತು ಅತಿಥಿ ಅಧರ್ಮವನ್ನು ಮಾಡುತ್ತಾರೆಯಾದರೆ, ಮತ್ತು ಮಾಡಿಸಲು+ ಉಪದೇಶ ಮಾಡಿದರೆ, ಅದನ್ನು ಒಪ್ಪಬೇಕೋ, ಅಥವಾ ಇಲ್ಲವೋ?

ಉತ್ತರ: ಎಂದಿಗೂ ಕೂಡದು!

ದೃಷ್ಟಾಂತ-[6]

(ಕುಮಾತಾ-ಪಿತೃಗಳ ಉಪದೇಶ; ಮಕ್ಕಳಿಂದ ಪ್ರತ್ಯುತ್ತರ)

ಕುಮಾತೆ ಮತ್ತು ಕುಪಿತಾ ಮಕ್ಕಳಿಗೆ ಕೆಟ್ಟ ಉಪದೇಶವನ್ನು ಹೇಗೆ ಮಾಡುತ್ತಾರೆಂದರೆ—

"ಮಗನೇ! ಮಗಳೇ! ನಿನ್ನ ಮದುವೆಯನ್ನು ಬೇಗ ಮಾಡಿಬಿಡುತ್ತೇವೆ!

'ಯಾರದಾದರೂ ವಸ್ತು ಸಿಕ್ಕಿದರೆ, ಎತ್ತಿ ಕೊಂಡು ಬಂದು ಬಿಡು!

'ಯಾವನಾದರೂ ಒಂದು ಬೈದರೆ, ಅವನಿಗೆ ಐವತ್ತು ಬೈಗಳನ್ನು ಕೊಡು!

'ಕಾದಾಟ-ಜಗಳ, ಆಟ, ಕಳ್ಳತನ-ಹಾದರ, ಸುಳ್ಳು ಮಾತು (ಮತ್ತು) ಭಂಗಿ ಸೊಪ್ಪು, ಹೆಂಡ, ಗಾಂಜಾ, ಚರಸ್, ಅಫೀಮು—[ಇವನ್ನು] ತಿನ್ನುವುದು-ಕುಡಿಯುವುದು ಮೊದಲಾದ ಕೆಲಸ ಮಾಡುವುದರಲ್ಲಿ ದೋಷವೇನಿಲ್ಲ! ಏಕೆಂದರೆ, [ಇದಂತೂ] ನಮ್ಮ ಕುಲಪರಂಪರೆಯಾಗಿದೆ!

'ಪ್ರಮಾಣವನ್ನು ಕೇಳಿರಿ—

'ಕುಲಧರ್ಮಃ ಸನಾತನಃ'*

[ಎಂದರೆ,] ಯಾವ ಧರ್ಮವು ಕುಲದಲ್ಲಿ ಮೊದಲಿನಿಂದ ನಡೆದು ಬಂದಿದೆಯೋ, ಅದನ್ನು ಮಾಡುವುದರಲ್ಲಿ ಏನೂ ದೋಷವಿಲ್ಲ!"

\+ **ಮಾಡಲು, ಎಂದು ಅರ್ಥ.**

* **ಅರ್ಥ:–ಕುಲಧರ್ಮವು ಶಾಶ್ವತ.**

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಒಳ್ಳೆಯ ಮಕ್ಕಳಿಂದ ಕೆಟ್ಟ ತಾಯಿ-ತಂದೆಗಳಿಗೆ ಪ್ರತ್ಯುತ್ತರ)

ಸುಸಂತಾನ ಉವಾಚ— 'ನೀವು ಬೇಗ ಮದುವೆ ಮಾಡುವುದು, ಯಾರಾದರವರ ವಸ್ತುವನ್ನು ಎತ್ತಿಕೊಂಡು ಬಂದು ಬಿಡುವುದು ಮೊದಲಾದ ಯಾವ ಕೆಲಸಗಳನ್ನು ಹೇಳಿದ್ದೀರೋ, ಅವು ದುಷ್ಟ ಮನುಷ್ಯರ ಕೆಲಸಗಳಾಗಿವೆ; ಶ್ರೇಷ್ಠರದಲ್ಲ!

'ಏಕೆಂದರೆ, ಬ್ರಹ್ಮಚರ್ಯದಿಂದ ಪೂರ್ಣವಿದ್ಯೆಯನ್ನು ಓದಿ, **'ಸ್ವಯಂವರ'**, ಎಂದರೆ, ಪೂರ್ಣಯುವಾವಸ್ಥೆಯಲ್ಲಿ ಇಬ್ಬರೂ ಪರಸ್ಪರ ವಿವಾಹ ಮಾಡಿಕೊಳ್ಳುವುದೇ ಶ್ರೇಷ್ಠ [ಕರ್ಮ] ಆಗಿರುತ್ತದೆ.

'ಯಾವನದಾದರೂ ಕೋಟ್ಯಂತರ [ಮೂಲ್ಯದ] ವಸ್ತುವು ಕಾಡಿನಲ್ಲಿ ಬಿದ್ದಿರುವುದನ್ನು ನೋಡಿಯೂ ಕೂಡ, [ಅದನ್ನು] ಎತ್ತಿಕೊಳ್ಳುವ ಇಚ್ಛೆಯನ್ನು ಮನಸ್ಸಿನಿಂದಲೂ ಕೂಡ, ಮಾಡುವುದಿಲ್ಲ!

'ಈ ಮೊದಲಾದ ಕೆಲಸಗಳನ್ನು ನಾವು ಮಾಡುತ್ತೇವೆ'.

'ನಿಮ್ಮ ಯಾವ ಯಾವ ಉತ್ತಮ ಕರ್ಮ, ಹಾಗೂ ಉಪದೇಶಗಳಿವೆಯೋ, ಅವವುಗಳನ್ನೇ ನಾವು ಸ್ವೀಕರಿಸುತ್ತೇವೆ; ಬೇರೆಯವನ್ನಲ್ಲ!

'ಆದರೆ, ನೀವು ಹೇಗಾದರೂ ಇರಿ! ತನು-ಮನ-ಧನಗಳಿಂದ ನಿಮ್ಮ ಸೇವೆ ಮಾಡುವುದು ನಮಗೆ ಪರಮಧರ್ಮವಾಗಿರುತ್ತದೆ.

'ಏಕೆಂದರೆ, ಹೇಗೆ ನೀವು ಬಾಲ್ಯಾವಸ್ಥೆಯಲ್ಲಿ ನಮ್ಮ ಸೇವೆಯನ್ನು ಮಾಡಿದಿರೋ, ಹಾಗೆಯೇ ನಿಮ್ಮ ಸೇವೆಯನ್ನು ನಾವೇಕೆ ಮಾಡಬಾರದು?'

(ಕೆಟ್ಟ ಮಕ್ಕಳಿಂದ ಒಳ್ಳೆಯ ತಾಯಿ-ತಂದೆಗಳಿಗೆ ಪ್ರತ್ಯುತ್ತರ)

ಕುಸಂತಾನ ಉವಾಚ— ಎಂದರೆ, ಶ್ರೇಷ್ಠರಾದ ತಾಯಿ-ತಂದೆ, ಆಚಾರ್ಯ [ಮತ್ತು] ಅತಿಥಿಗಳೊಂದಿಗೆ ಭಾಗ್ಯಹೀನ ಮಕ್ಕಳು ಹೇಳುತ್ತಾರೇನೆಂದರೆ—

'ನಮಗೆ ಚೆನ್ನಾಗಿ ತಿನ್ನಿಸಿರಿ, ಕುಡಿಸಿರಿ!

'ಆಟ ಆಡಗೊಡಿರಿ!

'ನಮಗಾಗಿ ಸಂಪಾದಿಸಿರಿ!

'ಯಾವಾಗ ನೀವು ಸತ್ತುಹೋಗುತ್ತೀರೋ, ಆಗ ಎಲ್ಲಾ ಕೆಲಸಗಳನ್ನೂ ನಾವೇ ಮಾಡಬೇಕಾಗುತ್ತದಲ್ಲ!

'ಬೇಗನೇ ಮದುವೆ ಮಾಡಿಬಿಡಿರಿ! ಇಲ್ಲದಿದ್ದರೆ, ನಾವಂತೂ ಇಲ್ಲಿ-ಅಲ್ಲಿ **'ಲೀಲೆ'** ಮಾಡೇ ತೀರುತ್ತೇವೆ!

'ಉದ್ಯಾನಕ್ಕೆ ಹೋಗಿ ಕುಣಿತ-ತಮಾಷೆ ಮಾಡುತ್ತೇವೆ.'

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

'ಇಲ್ಲದಿದ್ದರೆ, ಬೈರಾಗಿಗಳಾಗಿ ಬಿಡುತ್ತೇವೆ!'

'ಓದುವುದರಲ್ಲಿ ಬಹಳ ಕಷ್ಟವಿರುತ್ತದೆ. ಓದಿ, ನಾವೇನು ಮಾಡಬೇಕಾಗಿದೆ!'

'ಏಕೆಂದರೆ, ನಮ್ಮ ಸೇವೆ ಮಾಡುವುದಕ್ಕಾಗಿ ನೀವು ಇದ್ದೇ ಇದ್ದೀರಲ್ಲಾ!

'ನಮಗೆ ತಿರುಗಾಟ-ಅಲೆದಾಟ, ಗಾಡಿ, ಬೇಟೆ, ಕುಣಿತ, ತಿನ್ನುವುದು-ಕುಡಿಯುವುದು, ಹೊದೆಯುವುದು-ಉಡುವುದು — [ಇವಕ್ಕಾಗಿ] ತುಂಬಾ [ದುಡ್ಡು] ಕೊಡುತ್ತಿರಿ! ಇಲ್ಲದಿದ್ದರೆ, ಯಾವಾಗ ನಾವು ಯುವಕರಾಗುವೆವೋ, ಆಗ ನಿಮ್ಮನ್ನು **'ನೋಡಿ'** ಕೊಳ್ಳುವೆವು!''

ದಂಡಾದಂಡಿ-ನಖಾನಖಿ-ಕೇಶಾಕೇಶಿ-ಮುಷ್ಟಾಮುಷ್ಟಿ
ಯುದ್ಧಮೇವ ಭವಿಷ್ಯತಿ. ಅನ್ಯತ್ ಕಿಮ್?*

ಇಂತಿಂತಿಹ ಮಕ್ಕಳು ದುಷ್ಟರು, ಎನ್ನಿಸುತ್ತಾರೆ.

(ಒಳ್ಳೆಯ ತಾಯಿ-ತಂದೆಯರಿಂದ ಮಕ್ಕಳಿಗೆ ಉಪದೇಶ)

ಉತ್ತಮ ತಾಯಿ-ತಂದೆ ಮೊದಲಾದವರು ಅವರಿಗೆ ಹೇಳುತ್ತಾರೇನೆಂದರೆ—

(1) 'ಕೇಳಿರಿ ಮಕ್ಕಳೇ! ಈಗಂತೂ ನಿಮಗೆ ಓದುವ-ವಿಚಾರಿಸುವ, ಸತ್ಸಂಗ ಮಾಡುವ, ಒಳ್ಳೆ ಒಳ್ಳೆಯ ಮಾತುಗಳನ್ನು ಕಲಿಯುವ, ವೀರ್ಯನಿಗ್ರಹ [ಮಾಡುವ], ಆಚಾರ್ಯರೇ ಮೊದಲಾದವರ ಸೇವೆ ಮಾಡಿ ವಿದ್ವಾಂಸರಾಗುವ, ಶರೀರ, ಹಾಗೂ ಆತ್ಮವನ್ನು ಪೂರ್ಣಯುವಾಸ್ಥೆಗೆ ತರುವ, ಮೊದಲಾದ ಉತ್ತಮ ಕರ್ಮಗಳನ್ನು ಮಾಡುವ ವಯಸ್ಸಾಗಿದೆ.

ಇದನ್ನು ತಪ್ಪಿದರೆ, ಮತ್ತೆ ಪಶ್ಚಾತ್ತಾಪ ಪಡುವಿರಿ!

ಪುನಃ ಇಂತಹ ಸಮಯವು ಸಿಗುವುದು ಬಹಳ ಕಠಿಣವಾಗಿರುತ್ತದೆ.

(2) ಏಕೆಂದರೆ, ಎಲ್ಲಿನ ತನಕ ನಾವು ಮನೆಯ, ಮತ್ತು ನಿಮ್ಮ ತಿನ್ನುವುದು-ಕುಡಿಯುವುದು ಮೊದಲಾದುದರ ವ್ಯವಸ್ಥೆಯನ್ನು ಮಾಡುತ್ತೇವೋ, ಅಲ್ಲಿನ ತನಕ ನೀವು ಉತ್ತಮ ಶಿಕ್ಷಣವನ್ನು ಸ್ವೀಕರಿಸುವುದರ ಮೂಲಕ ಸರ್ವೋತ್ಕೃಷ್ಟವಾದ ವಿದ್ಯಾರೂಪದ ಧನವನ್ನು ಕೂಡಿಹಾಕುತ್ತಾ ಹೋಗಿರಿ!

(3) ಕಳ್ಳರೇ ಮೊದಲಾದವರು ತೆಗೆದುಕೊಂಡು ಹೋಗಲಾಗದ ಅಕ್ಷಯಧನ ಇದೇ ಆಗಿದೆ!

ಇದರ ಭಾರವೂ ಇಲ್ಲ!

---

* **ಅರ್ಥ:- ಕೋಲಿನೊಡನೆ ಕೋಲಿನ, ಉಗುರಿನೊಡನೆ ಉಗುರಿನ, ಕೂದಲಿನೊಡನೆ ಕೂದಲಿನ, ಮುಷ್ಟಿಯೊಡನೆ ಮುಷ್ಟಿಯ ಯುದ್ಧವೇ ಆಗುವುದು; ಬೇರೆ ಇನ್ನೇನಾದೀತು?**

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

(4) ಮತ್ತು ಎಷ್ಟು ದಾನ ಮಾಡುತ್ತೀರೋ, ಅಷ್ಟೇ ಹೆಚ್ಚು ಹೆಚ್ಚಾಗಿ ಬೆಳೆಯುತ್ತಾ ಹೋಗುತ್ತದೆ.

(5) ಇದು ಇರುವುದರಿಂದ, ಎಲ್ಲಿರುತ್ತೀರೋ, ಅಲ್ಲಿ ಸುಖಿಗಳಾಗಿರುತ್ತೀರಿ; ಮತ್ತು ಪ್ರತಿಷ್ಠೆಯನ್ನು ಸಂಪಾದಿಸುವಿರಿ!

(6) ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳಿಗೆ ಸಂಬಂಧಪಟ್ಟ ಕರ್ಮಗಳನ್ನು ತಿಳಿದುಕೊಂಡು, [ಅವುಗಳನ್ನು] ಸಾಧಿಸಿಕೊಳ್ಳ ಬಲ್ಲಿರಿ!

(7) ಯಾವಾಗ ನಾವು ನಿಮ್ಮನ್ನು ವಿದ್ಯಾರೂಪದ ಶ್ರೇಷ್ಠಗುಣಗಳಿಂದ ಅಲಂಕೃತರನ್ನಾಗಿ ನೋಡುವೆವೋ, ಆಗ ನಮಗೆ ಬಹಳ ಸಂತೋಷವಾಗುವುದು.

(8) ಮತ್ತು ನೀವು ಯಾವುದಾದರೂ ಕೆಟ್ಟ ದುಷ್ಟ ಕೆಲಸವನ್ನು ಮಾಡುವಿರಾದರೆ ನಾವು—'ನಮ್ಮದೂ ಕೂಡ, ಅಭಾಗ್ಯವಾಯಿತಲ್ಲಾ?'

'ಏಕೆಂದರೆ, ನಮ್ಮ ಯಾವ ಪಾಪಗಳ ಫಲದಿಂದ ನಮಗೆ [ಈ] ದುಷ್ಟ ಸಂತಾನ ಹುಟ್ಟಿತಲ್ಲಾ?', [ಎಂದು ಶೋಕಿಸುವೆವು][\$].

(9) ಮನುಷ್ಯರಿಗೆ ರಾಜ್ಯವೂ, ಧನವೂ ಲಭ್ಯವಾಗಿಯೂ ಇವೆ, ಆದರೆ, ವಿದ್ಯೆ ಮತ್ತು ಉತ್ತಮ ಶಿಕ್ಷಣವಿಲ್ಲದೇ ನಷ್ಟ-ಭ್ರಷ್ಟರಾಗಿ ಹೋಗುತ್ತಿದ್ದಾರೆ', ಎಂಬುದನ್ನು ನೀವು ನೋಡುತ್ತಿಲ್ಲವೇನು?

(10) ಮತ್ತು ಪಶ್ರೇಷ್ಠ ವಿದ್ಯೆ, [ಹಾಗೂ] ಉತ್ತಮ ಶಿಕ್ಷಣದಿಂದ ಕೂಡಿದ ದರಿದ್ರರೂ ಕೂಡ ರಾಜ್ಯವನ್ನೂ ಮತ್ತು ಐಶ್ವರ್ಯವನ್ನು ಪಡೆದುಕೊಳ್ಳುತ್ತಿದ್ದಾರೆ!

(11) ನೀವು, ಏನು ಮಾಡಬೇಕೆಂದರೆ—

'ಯಾನ್ಯಸ್ಮಾಕಗ್ಂ ಸುಚರಿತಾನಿ ತಾನಿ ತ್ವಯೋಪಾಸ್ಯಾನಿ, ನೋ ಇತರಾಣಿ'[*]

[ತೈತ್ತಿರೀಯಾರಣ್ಯಕ : ಪ್ರಪಾಠಕ 7, ಅನುವಾಕ 11]

[ಎಂದರೆ] ಯಾವ ಯಾವುದು ನಮ್ಮ ಉತ್ತಮ ಆಚರಣೆಗಳಾಗಿವೆಯೋ, ಅವ ಅವನ್ನು ಆಚರಿಸಿರಿ!

ಮತ್ತು ಯಾವಾಗಲಾದರೂ, ನಾವೂ ಕೂಡ, ಕೆಟ್ಟ ಕೆಲಸಗಳನ್ನು ಮಾಡಿದರೆ ಅವುಗಳನ್ನು ಎಂದಿಗೂ ಮಾಡಬೇಡಿರಿ!''

* **ಅರ್ಥ :– ನಮ್ಮ ಯಾವ ಉತ್ತಮ ಕರ್ಮಗಳೋ, ಅವು ನಿನ್ನಿಂದ ಆಚರಿಸಲ್ಪಡಬೇಕು; ಬೇರೆಯವಲ್ಲ**

\+ **'ಸತ್ಯಾರ್ಥ ಪ್ರಕಾಶ', ದ್ವಿತೀಯ ಸಮುಲ್ಲಾಸ, ಪುಟ 54,- ತೃತೀಯ ಸಮುಲ್ಲಾಸ, ಪುಟ 83-84.**

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ನೀತಿ)

ಈ ಮೊದಲಾದ ಉತ್ತಮ ಉಪದೇಶಗಳನ್ನು [ನೋಡುವ] ಮತ್ತು ಉತ್ತಮ ಕರ್ಮಗಳನ್ನು ಮಾಡುವ, ಹಾಗೂ ಮಾಡಿಸುವಂತಹ ತಾಯಿ-ತಂದೆ, ಮತ್ತು ಆಚಾರ್ಯ ಮೊದಲಾದವರು 'ಶ್ರೇಷ್ಠರು', ಎಂದು ಕರೆಯಲ್ಪಡುತ್ತಾರೆ.

[ರಾಜಾ–ಪ್ರಜೆ ಮತ್ತು ಇಷ್ಟ ಮಿತ್ರರೊಡನೆ ವ್ಯವಹಾರ]

ಪ್ರಶ್ನೆ: ರಾಜನೊಡನೆ, ಪ್ರಜೆಗಳೊಡನೆ, ಹಾಗೂ ಇಷ್ಟ-ಮಿತ್ರರೇ ಮೊದಲಾದವರ ಜೊತೆ ಹೇಗೆ ಹೇಗೆ ವ್ಯವಹಾರ ಮಾಡಬೇಕು?

ಉತ್ತರ:

(1) ರಾಜ್ಯದ ಅಧಿಕಾರಿಗಳು ಪ್ರಜೆಗಳ ಬಗ್ಗೆ [ತಾವು] ಸುಮಾತೆ ಮತ್ತು ಸುಪಿತನ ಸಮಾನರಾಗಿಯೂ, ಮತ್ತು ಪ್ರಜಾಜನರು ರಾಜನ ಸಂಬಂಧದಲ್ಲಿ [ತಾವು] ಸುಸಂತಾನಕ್ಕೆ ಸಮಾನವಾಗಿಯೂ ವರ್ತಿಸಿ, ಪರಸ್ಪರವಾಗಿ ಆನಂದವನ್ನು ವರ್ಧಿಸಬೇಕು.

(2) ಮಿತ್ರರು ಮಿತ್ರರೊಡನೆ ಸತ್ಯವ್ಯವಹಾರಕ್ಕಾಗಿ ಆತ್ಮನಿಗೆ ಸಮಾನವಾಗಿ ಪ್ರೀತಿಯಿಂದ ವರ್ತಿಸಬೇಕು. ಆದರೆ, ಅಧರ್ಮಕ್ಕಾಗಿ ಅಲ್ಲ!

(3) ನೆರೆಹೊರೆಯವರ ಜೊತೆ ಹೇಗೆ ವರ್ತಿಸಬೇಕೆಂದರೆ, ಹೇಗೆ ತಮ್ಮ ಶರೀರದ ಜೊತೆ ವರ್ತಿಸುತ್ತೇವೋ, [ಹಾಗೆ]!

(4) ಈ ರೀತಿಯಾಗಿಯೇ, ಮಿತ್ರರು ಮೊದಲಾದವರೊಡನೆಯೂ ವ್ಯಹರಿಸುತ್ತಿರಬೇಕು.

(5) ಸ್ವಾಮಿಯು ಸೇವಕನ ಜೊತೆ ಹೇಗೆ ವ್ಯವಹರಿಸಬೇಕೆಂದರೆ, ಹೇಗೆ ತನ್ನ ಕೈ-ಕಾಲು ಮೊದಲಾದ ಅಂಗಗಳ ರಕ್ಷಣೆಗಾಗಿ ವರ್ತಿಸುತ್ತಾನೋ, ಹಾಗೆ!

(6) ಸೇವಕರು ಒಡೆಯರೊಡನೆ ಹೇಗೆ ವರ್ತಿಸಬೇಕೆಂದರೆ, ಹೇಗೆ ಅನ್ನ-ನೀರು, ವಸ್ತ್ರ ಮತ್ತು ಮನೆ ಮೊದಲಾದುವು ಶರೀರದ ರಕ್ಷಣೆಗಾಗಿ ಇರುತ್ತವೋ, ಹಾಗೆ!

[ಕನ್ಯೆಯರ ವಿದ್ಯಾಧ್ಯಯನ ಮತ್ತು ಬ್ರಹ್ಮಚರ್ಯದ ವಿಧಾನ]

ಪ್ರಶ್ನೆ: ಬ್ರಹ್ಮಚರ್ಯದ ನಿಯಮಗಳು ಯಾವ ಯಾವುವು?

ಉತ್ತರ: ಕನಿಷ್ಠಪಕ್ಷ 25 ವರ್ಷ ಪರ್ಯಂತ [ವಯಸ್ಸಿನ] ಪುರುಷನೂ, ಹಾಗೂ 16 ವರ್ಷ ಪರ್ಯಂತ[ವಯಸ್ಸಿನ] ಕನ್ಯೆಯೂ ಬ್ರಹ್ಮಚರ್ಯದ ಸೇವನೆಯನ್ನು ಮಾಡಬೇಕು.

ಮತ್ತು ನಲವತ್ತೆಂಟನೆಯ ವರ್ಷ (ವಯಸ್ಸಿಗಿಂತ) ಹೆಚ್ಚಾಗಿ ಪುರುಷನೂ ಮತ್ತು ಇಪ್ಪತ್ತನಾಲ್ಕನೆಯ ವರ್ಷ [ವಯಸ್ಸಿಗಿಂತ] ಹೆಚ್ಚಾಗಿ ಕನ್ಯೆಯೂ ಬ್ರಹ್ಮಚರ್ಯದ ಸೇವನೆ ಮಾಡಬಾರದು.

ಏಕೆಂದರೆ, ಇದರ ನಂತರ, ಗೃಹಾಶ್ರಮದ ಸಮಯವಾಗಿರುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದೃಷ್ಟಾಂತ-[7] (ಪ್ರಮಾದೀ, ಹಾಗೂ ಸಜ್ಜನನ ಸಂವಾದ)

ಪ್ರಶ್ನೆ: ಪ್ರಮಾದೀ ಬ್ರೂತೇ—

ಅಂದರೆ, ಹುಚ್ಚು ಮನುಷ್ಯನು ಹೇಳುತ್ತಾನೇನೆಂದರೆ—

'ಕೇಳಿ, ಸ್ವಾಮಿ! ಕನ್ಯೆಯರ ಅಧ್ಯಯನ ಶಾಸ್ತ್ರೋಕ್ತವಲ್ಲ! ಏಕೆಂದರೆ, ಯಾವಾಗ ಅವರು ಓದಿ ಬಿಡುತ್ತಾರೋ, ಆಗ ಮೂರ್ಖಪತಿಯ ಅಪಮಾನ ಮಾಡಿ, ಈ ಕಡೆಗೆ – ಆ ಕಡೆಗೆ ಕಾಗದಗಳನ್ನು ಕಳಿಸಿ, ಬೇರೆ ಗಂಡಸರೊಡನೆ ಪ್ರೀತಿಯನ್ನು ಕುದುರಿಸಿಕೊಂಡು, ವ್ಯಭಿಚಾರ ಮಾಡುತ್ತಾ ಹೋಗುವವರಲ್ಲಾ!'

ಉತ್ತರ: ಸಜ್ಜನಃ ಸಮಾಧತ್ತೇ —

ಅಂದರೆ, ಶ್ರೇಷ್ಠ ಮನುಷ್ಯನು ಅವನಿಗೆ ಉತ್ತರ ಕೊಡುತ್ತಾನೇನೆಂದರೆ—

'ಕೇಳಿ ಸ್ವಾಮಿ! ನಿಮ್ಮ ಹೇಳಿಕೆಯಂತೆ ತಿಳಿದು ಬಂದಿತೇನೆಂದರೆ, ಯಾವ ಗಂಡಸೂ ಕೂಡ, ಓದಬಾರದು, ಎಂದು. ಏಕೆಂದರೆ, ಅವನೂ ಕೂಡ, ಓದಿ, ಮೂರ್ಖಪತ್ನಿಯ ಅಪಮಾನ ಮಾಡಿ, 'ಅಂಚೆಗಾಡಿ'ಯನ್ನು ನಡೆಯಿಸಿ, ಈ ಕಡೆ-ಆ ಕಡೆ ಬೇರೆಯ ಹೆಂಗಸರೊಂದಿಗೆ ವಿಹಾರ-ವ್ಯವಹಾರ ಮಾಡಬಹುದಲ್ಲಾ!'

ಪ್ರಶ್ನೆ:

ಪ್ರಮಾದೀ— 'ಹೌದು! ಗಂಡಸರೂ ಕೂಡ, ಓದದೇ ಇದ್ದರೆ, ಒಳ್ಳೆಯ ಮಾತೇ ಆಯಿತು! ಏಕೆಂದರೆ, ಓದಿದ ಮನುಷ್ಯರು ಚಾತುರ್ಯದಿಂದ ಇತರರಿಗೆ ಮೋಸ ಮಾಡಿ, ಅಪಮಾನ ಮಾಡಿ, ತಮ್ಮ ಸ್ವಾರ್ಥವನ್ನು ಸಿದ್ಧಿಸಿಕೊಂಡು ಬಿಡುತ್ತಾರೆ!

ಉತ್ತರ:

ಸಜ್ಜನ — ಕೇಳಿ ಸ್ವಾಮಿ! ಇದು ವಿದ್ಯೆಯನ್ನು ಓದುವುದರ ದೋಷವಲ್ಲ, ಆದರೆ, ತಮ್ಮಂತಹ ಮನುಷ್ಯರ ಸಂಗದ ದೋಷವಾಗಿರುತ್ತದೆ!

ಮತ್ತು ಯಾವ ಓದುವುದು-ಓದಿಸುವುದು, ಧರ್ಮಕ್ಕೆ, ಹಾಗೂ ಈಶ್ವರನ ವಿದ್ಯೆಗೆ ವಿರುದ್ಧವಾಗಿದೆಯೋ, ಅದಂತೂ ಕೆಟ್ಟ ಕೆಲಸಗಳ ಕಾರಣದಿಂದ, ಎಂದು ಕಾಣಬರುತ್ತದೆ.

ಮತ್ತು ಯಾವ ಓದುವುದು-ಓದಿಸುವುದು ಮೇಲೆ ಹೇಳಿದ ವಿದ್ಯೆಯಿಂದ ಕೂಡಿರುತ್ತದೋ, ಅದಂತೂ ಎಲ್ಲರ ಸುಖ ಮತ್ತು ಉಪಕಾರಕ್ಕಾಗಿಯೇ ಇರುತ್ತದೆ.

ಪ್ರಶ್ನೆ: ಕನ್ಯೆಯರ ಓದುವಿಕೆಯ ಬಗ್ಗೆ ವೈದಿಕ ಪ್ರಮಾಣ ಎಲ್ಲಿದೆ?

ಉತ್ತರ: ಪ್ರಮಾಣವನ್ನು ಆಲಿಸಿರಿ—

'ಬ್ರಹ್ಮಚರ್ಯೇ'ಣ ಕನ್ಯಾ3 ಯುವಾನಂ ವಿಂದತೇ ಪತಿಮ್॥'*

[ಅಥರ್ವವೇದ, ಕಾಂಡ 11, ಸೂಕ್ತ 5, ಮಂತ್ರ 18]

* ಅರ್ಥ :– ಬ್ರಹ್ಮಚರ್ಯದ ಮೂಲಕ ಕನ್ಯೆಯು ಯುವಪತಿಯನ್ನು ಪಡೆಯುತ್ತಾಳೆ. 'ಸತ್ಯಾರ್ಥಪ್ರಕಾಶ' ತೃತೀಯ ಸಮುಲ್ಲಾಸ, ಪುಟ 128ನ್ನೂ ನೋಡಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

[ಅರ್ಥ] :— ಹೇಗೆ ಹುಡುಗರು ಬ್ರಹ್ಮಚರ್ಯವನ್ನು ಆಚರಿಸುತ್ತಾರೋ, ಹಾಗೆಯೇ ಕನ್ಯೆಯರೂ [ಕೂಡ,] ಬ್ರಹ್ಮಚರ್ಯವನ್ನು ಆಚರಿಸಿ, ವರ್ಣೋಚ್ಚಾರಣದಿಂದ ಹಿಡಿದು, ವೇದಗಳ ತನಕ ಶಾಸ್ತ್ರಗಳನ್ನು ಓದಿ, ಸಂತುಷ್ಟಪಡಿಸಿ, ಸ್ವೇಚ್ಛೆಯಿಂದ ಪೂರ್ಣ ಯುವಾವಸ್ಥೆಯುಳ್ಳವನಾದ ವಿದ್ವಾನ್ ಪತಿಯನ್ನು ವೇದೋಕ್ತರೀತಿಯಿಂದ ಸ್ವೀಕರಿಸಬೇಕು.

(ನೀತಿ)

ಯಾವ ಪುರುಷನನ್ನಾದರೂ ಅಥವಾ ಸ್ತ್ರೀಯನ್ನಾದರೂ ವಿದ್ಯೆಯ ಅಧ್ಯಯನದಿಂದ ತಡೆದು, ಮೂರ್ಖರನ್ನಾಗಿ ಇಡುವಂತೆ ಇಚ್ಛಿಸುವ ಮನುಷ್ಯನು ಅಧರ್ಮಿಗಿಂತ ಬೇರಾದ ಇನ್ನಾವನಾಗಲು ಸಾಧ್ಯ?

ಮತ್ತು ವೇದೋಕ್ತ ಪ್ರಮಾಣದ ಅಪಮಾನ ಮಾಡಿ, ತನ್ನ ಕಲ್ಯಾಣವನ್ನು ಇಚ್ಛಿಸುವವನು ಇನ್ನಾವನು?

[ವಿದ್ಯಾಪ್ರಾಪ್ತಿಯ ಕ್ರಮ]

ಪ್ರಶ್ನೆ: ವಿದ್ಯೆಯನ್ನು ಯಾವ ಯಾವ ಕ್ರಮದಿಂದ ಪಡೆಯಬಲ್ಲೆವು?

ಉತ್ತರ:

(1) ಶುದ್ಧ ವರ್ಣೋಚ್ಚಾರಣೆ,

(2) ವ್ಯವಹಾರದ ಶುದ್ಧಿ,

(3) ಪುರುಷಾರ್ಥ

(4) ಧಾರ್ಮಿಕ ವಿದ್ವಾಂಸರ ಸಂಗ

(5) ವಿಷಯಕಥಾಪ್ರಸಂಗದ ತ್ಯಾಗ

(6) ಸುವಿಚಾರದಿಂದ— ವ್ಯಾಕರಣ ಮೊದಲಾದುವುಗಳ ಮೂಲಕ ಶಬ್ದ, ಅರ್ಥ, ಮತ್ತು ಸಂಬಂಧಗಳನ್ನು ಸರಿ ಸರಿಯಾಗಿ ತಿಳಿದುಕೊಂಡು,

(7) ಉತ್ತಮ ಕ್ರಿಯೆಯನ್ನು ಮಾಡಿ,

(8) ಎಲ್ಲ ರೀತಿಯಿಂದಲೂ ಸಾಕ್ಷಾತ್ಕಾರ ಮಾಡಿಕೊಳ್ಳುತ್ತಾ ಹೋಗಬೇಕು.

(9) ಯಾವ ಯಾವ ವಿದ್ಯೆಗಾಗಿ ಯಾವ ಯಾವ ಸಾಧನರೂಪದ ಸತ್ಯಗ್ರಂಥಗಳಿವೆಯೋ, ಅವವುಗಳನ್ನು ಓದಿ—

(10) ವೇದಗಳೇ ಮೊದಲಾದುವನ್ನು ಓದುವುದಕ್ಕೆ ಯೋಗ್ಯವಾದ ಗ್ರಂಥಗಳ ಅರ್ಥಗಳನ್ನು ತಿಳಿಯಬೇಕು.

ಈ ಮೊದಲಾದ ಕರ್ಮಗಳು ಶೀಘ್ರವಾಗಿ ವಿದ್ವಾಂಸನಾಗುವುದಕ್ಕೆ ಸಾಧನಗಳಾಗಿರುತ್ತವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

[ಓದದೇ ಇರುವ ಮನುಷ್ಯರ ಎರಡು ರೀತಿಯ ಗತಿ]

ಪ್ರಶ್ನೆ: ಓದದೇ ಇರುವ ಮನುಷ್ಯರ ಗತಿ ಏನಾಗಬಹುದು?

ಉತ್ತರ: ಒಂದು ಒಳ್ಳೆಯದು, ಮತ್ತು ಇನ್ನೊಂದು ಕೆಟ್ಟದು!

ಒಳ್ಳೆಯದು, ಎಂದು ಯಾವುದಕ್ಕೆ ಹೇಳುತ್ತಾರೆಂದರೆ—

ಯಾವ ಮನುಷ್ಯನು, ವಿದ್ಯೆಯನ್ನು ಓದುವ ಸಾಮರ್ಥ್ಯವನ್ನಂತೂ ಇಟ್ಟುಕೊಂಡಿಲ್ಲ; ಆದರೆ, ಅವನು ಧರ್ಮದ ಆಚರಣೆಯನ್ನು ಮಾಡಲು ಇಚ್ಛಿಸುತ್ತಾನಾದರೆ, ವಿದ್ವಾಂಸರ ಸಂಗದಿಂದಲೂ, ಮತ್ತು ತನ್ನ ಆತ್ಮನ ಪವಿತ್ರತೆ, ಹಾಗೂ ಅವಿರುದ್ಧತೆಯಿಂದಲೂ ಧರ್ಮಾತ್ಮನಂತೂ ಅವಶ್ಯವಾಗಿ ಆಗಬಲ್ಲನು!

(ಎಲ್ಲರೂ ಧಾರ್ಮಿಕರಾಗಬಲ್ಲರು; ವಿದ್ಯಾವಂತರಾಗದಿರಬಹುದು!)

ಏಕೆಂದರೆ, ಮನುಷ್ಯರೆಲ್ಲರಿಗೂ ವಿದ್ವಾಂಸರಾಗುವ ಸಂಭವವಂತೂ ಇರುವುದಿಲ್ಲ; ಆದರೆ, ಧಾರ್ಮಿಕರಾಗುವ ಸಂಭವವು ಎಲ್ಲರಿಗೂ ಇರುತ್ತದೆ.

ಮತ್ತು ಹೇಗೆ ತಮಗಾಗಿ ಸುಖದ ಪ್ರಾಪ್ತಿ ಮತ್ತು ದುಃಖದ ತ್ಯಾಗ; ಆದರಣೀಯರಾಗುವುದು, ಅಪಮಾನಿತರಾಗದಿರುವುದು ಮೊದಲಾದ ಅಭಿಲಾಷೆಗಳನ್ನು ಮಾಡುತ್ತಾರೋ, ಹಾಗೆಯೇ ಇತರಿಗಾಗಿಯೂ ಏತಕ್ಕಾಗಿ ಮಾಡಬಾರದು?

ಯಾವಾಗ [ಯಾವನೋ] ಯಾವನದೋ ಯಾವುದೋ ಕಳ್ಳತನದ [ಆರೋಪ], ಅಥವಾ ಯಾವನ ಮೇಲಾದರೂ ಸುಳ್ಳಿನ ಜಾಲವನ್ನು ಹರಡುತ್ತಾನೆಯಾದರೆ, ಅವನಿಗೆ ಒಳಿತು ಎನಿಸುತ್ತದೇನು?

ಮತ್ತು ಯಾವ ಯಾವ ಕೆಲಸ ಮಾಡುವುದರಲ್ಲಿ ತನ್ನ ಆತ್ಮನಿಗೆ ಶಂಕೆ, ಲಜ್ಜೆ ಮತ್ತು ಭಯ ಉಂಟಾಗುವುದಿಲ್ಲವೋ, ಅದದು '**ಧರ್ಮ**', ಎಂದು ಯಾವನಿಗೂ ತಿಳಿಯುವುದಿಲ್ಲ ವೇನು?

ಯಾವನಾದರೂ ಆತ್ಮವಿರೋಧ, ಎಂದರೆ ಆತ್ಮನಲ್ಲಿ ಒಂದು, ಮತ್ತು ವಾಣಿಯಲ್ಲಿ ಇನ್ನೊಂದು, ಮತ್ತು ಕ್ರಿಯೆಯಲ್ಲಿ [ಬೇರೊಂದು] ವಿಲಕ್ಷಣತೆಯನ್ನು ಇಡುತ್ತಾನೋ, ಅವನು '**ಅಧರ್ಮಿ**', ಅಲ್ಲವೇನು?

ಮತ್ತು ಯಾವನ ಆತ್ಮನಲ್ಲಿ ಹೇಗೋ, ಹಾಗೆ ವಾಣಿಯಲ್ಲಿ; ಮತ್ತು ವಾಣಿಯಲ್ಲಿ ಹೇಗೋ, ಹಾಗೆಯೇ ಕ್ರಿಯೆಯಲ್ಲಿ ಆಚರಣೆ ಇರುತ್ತದೋ, ಅವನು '**ಧರ್ಮಾತ್ಮ**' ಅಲ್ಲವೇನು?

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಆತ್ಮಹಂತಕರ ಕೆಟ್ಟ ಗತಿ)

[ಇದಕ್ಕೆ] ಪ್ರಮಾಣವೇನೆಂದರೆ—

ಅಸುರ್ಯಾ ನಾಮ ತೇ ಲೋಕಾಃ ಅಂಧೇನ ತಮಸಾವೃತಾಃ ।
ತಾನ್‌ಸ್ತೇ ಪ್ರೇತ್ಯಾಭಿಗಚ್ಛಂತಿ* ಯೇ ಕೇ ಚಾತ್ಮಹನೋ ಜನಾಃ ॥

[ಯಜುರ್ವೇದ: ಅ. 40, ಮಂ. 3]

ಅರ್ಥ: (ಯೇ) ಯಾರು (ಆತ್ಮಹನಃ) ಆತ್ಮಹತ್ಯೆ ಮಾಡಿಕೊಳ್ಳುವವರು, ಎಂದರೆ, ಆತ್ಮನಲ್ಲಿರುವ ಜ್ಞಾನಕ್ಕೆ ವಿರುದ್ಧವಾಗಿ ಹೇಳುವವರು, ಅಂಗೀಕರಿಸುವವರು ಮತ್ತು ಮಾಡುವವರಾಗಿರುತ್ತಾರೋ, (ತೇ) ಆ(ಲೋಕಾಃ) ಜನರೇ (ಅಸುರ್ಯಾ ನಾಮ) ಅಸುರರು, ಎಂದರೆ ದೈತ್ಯ, ರಾಕ್ಷಸ, ಎಂಬ ಹೆಸರಿನ ಮನುಷ್ಯರಾಗಿರುತ್ತಾರೆ.

ಮತ್ತು ಅವರೇ (ಅಂಧೇನ ತಮಸಾವೃತಾಃ) ಅಧರ್ಮರೂಪದ ದೊಡ್ಡ ಅಂಧಕಾರದಿಂದ ಕೂಡಿದವರಾಗಿ, ಜೀವಿಸುತ್ತಾ ಇದ್ದು, ಮತ್ತು [ನಂತರ], ಮರಣವನ್ನು ಹೊಂದಿ, (ತಾನ್) ದುಃಖದಾಯಕವಾದ ದೇಹವೇ+ ಮೊದಲಾದ ಪದಾರ್ಥಗಳನ್ನು (ಅಭಿಗಚ್ಛಂತಿ) ಯಾವಾಗಲೂ ಪಡೆಯುತ್ತಾರೆ.

ಮತ್ತು ಯಾರು 'ಆತ್ಮರಕ್ಷಕರೋ', ಎಂದರೆ ಆತ್ಮನಿಗೆ ಅನುಕೂಲವಾಗಿಯೇ ಹೇಳುತ್ತಾರೋ, ಅಂಗೀಕರಿಸುತ್ತಾರೋ, ಮತ್ತು ಆಚರಣೆ ಮಾಡುತ್ತಾರೋ, ಆ ಮನುಷ್ಯರು ವಿದ್ಯಾರೂಪ ಶುದ್ಧಪ್ರಕಾಶದಿಂದ ಯುಕ್ತರಾಗಿ 'ದೇವ', ಎಂದರೆ ವಿದ್ವಾಂಸರು, ಎಂಬ ಹೆಸರಿನಿಂದ ಪ್ರಖ್ಯಾತರಾಗುತ್ತಾರೆ, ಅವರೇ ಯಾವಾಗಲೂ ಸುಖವನ್ನು ಪಡೆದುಕೊಂಡು, ಸತ್ತ ನಂತರವೂ, ಆನಂದಯುಕ್ತವಾದ ದೇಹ* ಮೊದಲಾದುವನ್ನು ಹೊಂದುತ್ತಾರೆ.

(ವಿದ್ಯೆ-ಅವಿದ್ಯೆ; ನ್ಯಾಯ-ಅನ್ಯಾಯ)

ಪ್ರಶ್ನೆ: 'ವಿದ್ಯೆ' ಮತ್ತು 'ಅವಿದ್ಯೆ', ಎಂದು [ಯಾವ] ಯಾವುದಕ್ಕೆ ಹೇಳುತ್ತಾರೆ?+

ಉತ್ತರ: ಯಾವುದರ ಪದಾರ್ಥವನ್ನು ಸರಿ ಸರಿಯಾಗಿ ತಿಳಿದುಕೊಂಡು, ನ್ಯಾಯಯುಕ್ತವಾದ ಕರ್ಮಗಳನ್ನು ಮಾಡಲಾಗುತ್ತದೋ, ಅದು 'ವಿದ್ಯೆ'; [ಎನಿಸುತ್ತದೆ]

---

* 'ಪ್ರೇತ್ಯಾಪಿಗಚ್ಛಂತಿ', ಎಂಬುದು ಯಜುರ್ವೇದದ ಪಾಠ. 'ಪ್ರೇತ್ಯಾಭಿಗಚ್ಛಂತಿ', ಎಂಬುದು ಕಾಣ್ವ ಸಂಹಿತೆಯ, ಅಥವಾ 'ಈಶಾವಾಸ್ಯೋಪನಿಷತ್ತಿನ' ಪಾಠ!

\+ ಎಂದರೆ, ಪ್ರಾಣಶರೀರಗಳು, ಅಥವಾ ರೋಗಿ ಮನುಷ್ಯದೇಹಗಳು.

* ಎಂದರೆ, ಉತ್ತಮ ಸ್ವಾಸ್ಥ್ಯಯುಕ್ತ, ಸುಂದರ, ಕುಲೀನ, ಶ್ರೀಮಂತ, ಮಾನವ ಶರೀರ.

\+ ಈ ಪ್ರಶ್ನೆ ಹಿಂದೆಯೂ ಬಂದಿದೆ. 12ನೆಯ ಪುಟವನ್ನು ನೋಡಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮತ್ತು ಯಾವುದರಿಂದ ಯಾವುದೂ ಪದಾರ್ಥದ ಸರಿ ಸರಿಯಾದ ಜ್ಞಾನ ಉಂಟಾಗದೇ ಅನ್ಯಾಯರೂಪ ಕರ್ಮಗಳನ್ನು ಮಾಡಲಾಗುತ್ತದೋ, ಅದು **'ಅವಿದ್ಯೆ'**, ಎನಿಸುತ್ತದೆ.

ಪ್ರಶ್ನೆ: **'ನ್ಯಾಯ'** ಮತ್ತು **'ಅನ್ಯಾಯ'**, ಎಂದು [ಯಾವ] ಯಾವುದಕ್ಕೆ ಹೇಳುತ್ತಾರೆ?

ಉತ್ತರ: ಯಾವುದು ಪಕ್ಷಪಾತರಹಿತವಾದ ಸತ್ಯದ ಆಚರಣೆ ಮಾಡುವುದಾಗಿರುತ್ತದೋ, ಅದು **'ನ್ಯಾಯ'**, [ಎನಿಸುತ್ತದೆ.]

ಮತ್ತು ಯಾವುದು ಪಕ್ಷಪಾತದಿಂದ ಮಿಥ್ಯಾಚರಣೆ ಮಾಡುವುದಾಗಿರುತ್ತದೋ, ಅದು **'ಅನ್ಯಾಯ'**, ಎನಿಸುತ್ತದೆ.

ಪ್ರಶ್ನೆ: **'ಧರ್ಮ'** [ಮತ್ತು **'ಅಧರ್ಮ'**], ಎಂದು ಯಾವ ಯಾವುದಕ್ಕೆ ಹೇಳುತ್ತಾರೆ?++

ಉತ್ತರ: ಯಾವುವು ನ್ಯಾಯಾಚರಣೆ, ಎಲ್ಲರ ಹಿತ ಮಾಡುವುದು ಮೊದಲಾದ ಕರ್ಮಗಳೋ, ಅವನ್ನು **'ಧರ್ಮ'**, ಎಂದು [ತಿಳಿಯಿರಿ.]

ಮತ್ತು [ಯಾವುವು] ಅನ್ಯಾಯಾಚರಣೆ, ಎಲ್ಲರ ಅಹಿತದ ಕೆಲಸ ಮಾಡುವುದು ಆಗಿವೆಯೋ, ಅವನ್ನು **'ಅಧರ್ಮ'**, ಎಂದು ತಿಳಿಯಿರಿ.

[ದೃಷ್ಟಾಂತ-[8]

(ವಿದ್ಯಾಶತ್ರು ಗುರು-ಶಿಷ್ಯರ ಸಂಸ್ಕೃತರಚನೆ)

ಪ್ರಿಯದಾಸನ ಶಿಷ್ಯ[ರಲ್ಲಿ] ಒಬ್ಬನಾದ **ಭಗವಾನದಾಸನು** ತನ್ನ ಗುರುವಿನ ಬಳಿ ಹನ್ನೆರಡು ವರ್ಷಗಳ ತನಕ ಓದಿದನು.

ಒಂದು ದಿನ [ಅವನು] ಅವರನ್ನು— 'ಮಹಾರಾಜ್! ನನಗೆ ಸಂಸ್ಕೃತ ಮಾತನಾಡುವುದು ಬರಲಿಲ್ಲವಲ್ಲಾ?', ಎಂದು ಕೇಳಿದನು.

ಗುರು ಹೇಳಿದರು— "ಕೇಳೋ ಲೋ! ಓದುವುದರಿಂದ-ಓದಿಸುವುದರಿಂದ ವಿದ್ಯೆ ಬರುವುದಿಲ್ಲ! ಆದರೆ, ಗುರುವಿನ ಕೃಪೆಯಿಂದ ಬಂದುಬಿಡುತ್ತದೆ!

'ಯಾವಾಗ ಗುರುವು [ಶಿಷ್ಯನ] ಸೇವೆಯಿಂದ ಪ್ರಸನ್ನನಾಗುತ್ತಾನೋ, ಆಗ; ಹೇಗೆ ಬೀಗದ ಕೈಯಿಂದ ಬೀಗವನ್ನು ತೆಗೆದಾಗ ಮನೆಯ ಸಾಮಾನುಗಳೆಲ್ಲವೂ ತಟಕ್ಕನೇ ಕಾಣ ಬರುತ್ತವೋ; ಹಾಗೆ ಎಂತಹ ಯುಕ್ತಿಯನ್ನು ಅವರು ತೋರಿಸುತ್ತಾರೆಂದರೆ, ಹೃದಯದ ಬಾಗಿಲು ತೆರೆದೇ ಹೋಗಿ, ಎಲ್ಲಾ ಪದಾರ್ಥವಿದ್ಯೆಯೂ ತತ್‌ಕ್ಷಣವೇ ಬಂದು ಬಿಡುತ್ತದೆ.

'ಕೇಳು! ಸಂಸ್ಕೃತ ಮಾತನಾಡುವುದಕ್ಕಂತೂ ಸರಳವಾದ ಯುಕ್ತಿಯೊಂದಿದೆ!"

++ ಈ ಪ್ರಶ್ನೆಯೂ ಹಿಂದೆ ಬಂದಿದೆ. 27ನೆಯ ಪುಟವನ್ನು ನೋಡಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭಗವಾನದಾಸ— ಮಹಾರಾಜರೇ! ಅದು ಯಾವುದು?

ಗುರು— ಜಗತ್ತಿನಲ್ಲಿ ಎಷ್ಟು ಶಬ್ದಗಳು ಸಂಸ್ಕೃತದಲ್ಲಿ ಅಥವಾ ದೇಶಭಾಷೆಗಳಲ್ಲಿರುವುವೋ, ಅವುಗಳ ಮೇಲೆ ಒಂದೊಂದು ಬಿಂದುವನ್ನು ಇಡುವುದರಿಂದ ಎಲ್ಲವೂ ಶುದ್ಧ ಸಂಸ್ಕೃತ [ಶಬ್ದಗಳು] ಆಗಿಬಿಡುತ್ತವೆ!

ಭಗವಾನದಾಸ— ಸರಿ! ಮಹಾರಾಜರೇ! ಲೋಟ, ನೀರು, ರೊಟ್ಟಿ, ಪಲ್ಯ ಮೊದಲಾದ ಶಬ್ದಗಳ ಮೇಲೆ* ಬಿಂದುವನ್ನಿಟ್ಟರೆ, ಹೇಗೆ ಸಂಸ್ಕೃತ [ಶಬ್ದಗಳು] ಆಗಿ ಬಿಡುತ್ತವೆ!

ಗುರು— ನೋಡು!

ಲೋಂಟಂ, ನೀಂರುಂ, ರೊಂಟ್ಟಂ, ಪಂಲ್ಯಂ!

ಶಿಷ್ಯನು ಹೇಳಿದ — ಆಹ್ಹಾ! ಗುರುವಿನ ಹೊರತು ಕ್ಷಣಮಾತ್ರದಲ್ಲಿ, ಪೂರ್ತಿವಿದ್ಯೆಯನ್ನು ಯಾವನು ಹೇಳಿಕೊಡಬಲ್ಲನು!

ಭಗವಾನದಾಸನು ತನ್ನ ಆಸನದ ಬಳಿ ಹೋಗಿ, ವಿಚಾರಮಾಡಿ, ಈ [ಕೆಳಗಿನ] ಶ್ಲೋಕವನ್ನು ರಚಿಸಿದನು—

'ಬಾಂಪಂ ಆಂಜಾಂ ನಂಮಂಸ್ಕೃಂತ್ಯಂ ಪಂರಂ ಪಾಂಜಂ ತ್ಯಂಥ್ಯೆಂವಂ ಚಂ ।
ಮಂಯಾಂ ಭಂಗಂವಾಂನಂದಾಂಸೇಂನಂ ಗೀಂತಾಂ ಟೀಂಕಾಂ
ಕಂರೋಂಮ್ಯಂಹಂಮ್॥+'

ಯಾವಾಗ ಅವನು ಪ್ರಾತಃಕಾಲ ಎದ್ದು, ಹರ್ಷಿತನಾಗಿ, ಗುರುವಿನ ಬಳಿಗೆ ಹೋಗಿ, ಈ ಶ್ಲೋಕವನ್ನು ಹೇಳಿದನೋ, ಆಗಂತೂ, ಪ್ರಿಯದಾಸರು ಬಹಳ ಪ್ರಸನ್ನರಾಗಿ—

'ಶಿಷ್ಯರೆಂದರೆ ನಿನ್ನಂತೆ ಗುರುವಿನ ಮಾತಿನ ಮೇಲೆ ವಿಶ್ವಾಸವಿಟ್ಟಿರುವವರಾಗಿರಬೇಕು! ಮತ್ತು ಗುರು, ಎಂದರೆ ನನ್ನಂತಿರಬೇಕು!'', [ಎಂದು ಶಿಷ್ಯನ ಬೆನ್ನು ಚಪ್ಪರಿಸಿದರು.]

---

* ದೇವನಾಗರೀ ಲಿಪಿಯಲ್ಲಿ ಅಕ್ಷರಗಳ ಮೇಲೆ ಬಿಂದುವನ್ನಿಟ್ಟಾಗ ಅನುಸ್ವಾರಯುಕ್ತವರ್ಣವಾಗುತ್ತವೆ. ಕನ್ನಡದಲ್ಲಿ ಅಕ್ಷರಗಳ ಪಕ್ಕದಲ್ಲಿ ಸೊನ್ನೆಯನ್ನು ಇಟ್ಟಾಗ ಅನುಸ್ವಾರಯುಕ್ತವರ್ಣ ಆಗುತ್ತದೆ. ಇದನ್ನೇ ಇಲ್ಲಿ ತೋರಿಸಲಾಗಿದೆ.

\+ **ಅರ್ಥ:–** ತಂದೆಯನ್ನೂ, ತಾತನನ್ನೂ, ಹಾಗೆಯೇ ಪರಮಾತ್ಮನನ್ನೂ ನಮಸ್ಕರಿಸಿ, ಭಗವಾನದಾಸನಾದ ನನ್ನಿಂದ, ನಾನು ಗೀತಾಭಾಷ್ಯವನ್ನು ಮಾಡುತ್ತೇನೆ.

ಹೀಗಿದೆ, ಈ 'ದೇಶೀಸಂಸ್ಕೃತ' ಶ್ಲೋಕದ ರಚನೆ, ಮತ್ತು ಅರ್ಥ! ಶತಮೂರ್ಖನಾದ ಭಗವಾನದಾಸನೂ ಕೂಡ, ಭಗವದ್ಗೀತೆಯ ಭಾಷ್ಯರಚಿಸಲು ಇಚ್ಛಿಸುತ್ತಾನೆ! ಮಧ್ಯಕಾಲದಲ್ಲಿ ಭಗವದ್ಗೀತೆಗೆ ಎಷ್ಟು ಮಹತ್ವ ಜನಮಾನಸದಲ್ಲಿ ಹುಟ್ಟಿಸಲಾಗಿತ್ತೆಂಬುದಕ್ಕೆ ಇದು ಒಂದು ಉದಾಹರಣೆ! ಗೀತೆಯನ್ನು ಓದಿ ಬಿಟ್ಟರೆಂದಾಯಿತು, ಅಥವಾ ಪ್ರವಚನ ಕೇಳಿಬಿಟ್ಟರೆಂದಾಯಿತು; ವಿದ್ವಾಂಸನಾಗಿರಲೀ, ಮೂರ್ಖನಾಗಿರಲೀ, ಅದಕ್ಕೆ ಭಾಷ್ಯ ಬರೆಯತೊಡಗುತ್ತಾನೆ! ಇದೇ ಪಿಡುಗು, ಈಗ, ಈ ನವ ಆಧುನಿಕ ಕಾಲದಲ್ಲಿ ಯೋಗದರ್ಶನಕ್ಕೆ ಬಂದಿದೆ!

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ನೀತಿ)

ಇಂತಹ ಮನುಷ್ಯರಿಂದ ದೂರ ಇರುವುದರ ಹೊರತಾಗಿ ಇನ್ನೇನು ಔಷಧವಿದೆ!

(ಪಠನ–ಪಾಠನ ಎರಡೂ ಏಕಕಾಲದಲ್ಲಾಗಬೇಕು)

ಪ್ರಶ್ನೆ: ವಿದ್ಯೆಯನ್ನು ಓದುತ್ತಿರುವ ಅವಧಿಯಲ್ಲಿ, ಅಥವಾ ಓದಿದ ಮೇಲೆ, ಬೇರೆ ಯಾರಿಗಾದರೂ ಕಲಿಸಬಹುದೋ, ಅಥವಾ ಬೇಡವೋ?

ಉತ್ತರ: ಖಂಡಿತವಾಗಿ ಕಲಿಸುತ್ತಾ ಹೋಗಬೇಕು!

ಏಕೆಂದರೆ, ಕಲಿಯುತ್ತಿರುವುದಕ್ಕಿಂತ, ಕಲಿಸುವುದರಿಂದ ವಿದ್ಯೆಯ ವೃದ್ಧಿಯು ಹೆಚ್ಚಾಗಿ ಆಗುತ್ತದೆ.

[ತಾನೇ] ಓದುವುದರಿಂದ ತಾನೊಬ್ಬನೇ ವಿದ್ವಾಂಸನಾಗುತ್ತಾನೆ. ಆದರೆ, ಕಲಿಸುವುದರಿಂದ ಇನ್ನೊಬ್ಬನೂ ಕೂಡ, ವಿದ್ವಾಂಸನಾಗಿ ಹೋಗುತ್ತಾನೆ. ಸಮಯಕ್ರಮೇಣ ವಿದ್ಯೆಯ ವೃದ್ಧಿಯು ಆಗೇ ಆಗುತ್ತದೆ.

ಯಾವನು ವಿದ್ಯೆಯನ್ನು ಗಳಿಸುತ್ತಾನೋ, ಆ ಮನುಷ್ಯನು ಪರೋಪಕಾರಿಯೂ, ಧಾರ್ಮಿಕನೂ ಅವಶ್ಯವಾಗಿ ಆಗುತ್ತಾನೆ. ಏಕೆಂದರೆ, ಹೇಗೆ ಕುರುಡನು ಬಾವಿಯಲ್ಲಿ ಬಿದ್ದು ಬಿಡುತ್ತಾನೋ, ಹಾಗೆ [ಕಣ್ಣಿನಿಂದ] ನೋಡುವವನು ಎಂದಿಗೂ ಬೀಳುವುದಿಲ್ಲ!

ಮತ್ತು ಅವಿದ್ಯೆಯ ನಾಶ ಮಾಡುವುದು ಮುಂತಾದ ಪ್ರಯೋಜನಗಳು [ಇತರರಿಗೆ] ಓದಿಸುವುದರಿಂದಲೇ ಸಿದ್ಧವಾಗುತ್ತವೆ.

ದೃಷ್ಟಾಂತ-[9]

['ಪೋಪ ಪಂಡಿತರ'* ಸಂಕುಚಿತ ಬುದ್ಧಿ]

ಕ್ಷುದ್ರಬುದ್ಧಿಯು ಹೇಳುತ್ತಾನೆ— 'ಎಲ್ಲರೂ ವಿದ್ವಾಂಸರಾಗಿ ಹೋದರೆ, ನಮ್ಮನ್ನು ಯಾರು ಕೇಳುವರು? ಮತ್ತು ಎಲ್ಲರೂ ತಾವೇ ತಾವಾಗಿ ಪುಸ್ತಕಗಳನ್ನು ಓದಿಕೊಂಡು, ಅರ್ಥಗಳನ್ನು ತಿಳಿದುಕೊಂಡುಬಿಡುವರು! ಪೂಜಾಪಾಠಗಳಿಗೂ [ನಮ್ಮನ್ನು] ಕರೆಸುವುದಿಲ್ಲ!

'ಧನವಂತರಿಗೂ ಮತ್ತು ರಾಜರಿಗೂ ಓದಿಸುವುದರಿಂದ ವಿಶೇಷ ವಿಘ್ನ ಇದೆ. ಏಕೆಂದರೆ, ಅವರಿಂದಲೇ ನಮ್ಮೆಲ್ಲರ ಜೀವನ ನಡೆಯುತ್ತಿದೆ!

ಯಾವಾಗ ಯಾವನೋ ಶೂದ್ರನು ಓದುವ ಇಚ್ಛೆಯಿಂದ ಅವರ ಬಳಿಗೆ+ ಹೋಗಿ— 'ನನಗೆ ತಾವು ಸ್ವಲ್ಪ [ವಿದ್ಯೆ] ಕಲಿಸಿರಿ', ಎಂದು ಹೇಳಿದಾಗ—

---

* ಇವರ ಪರ್ಯಾಯಗಳನ್ನು ನೋಡಿ– ಕ್ಷುದ್ರಬುದ್ಧಿ, ಅಲ್ಪಬುದ್ಧಿ, ನಷ್ಟಮತಿ, ಬಕವೃತ್ತಿ, ಸ್ವಾರ್ಥೀ, ಅಂಧಕಾರೀ, ಮಾರ್ಜಾರಲಿಂಗೀ, ಧೂರ್ತ.

\+ ಎಂದರೆ, 'ಕ್ಷುದ್ರಬುದ್ಧಿ'ಯಂತಹ ಬ್ರಾಹ್ಮಣ ಪಂಡಿತರ ಬಳಿಗೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಲ್ಪಬುದ್ಧಿ— ನೀನು ಯಾರು! ಏನು ಕೆಲಸಮಾಡುತ್ತೀಯೆ? ಮತ್ತು ನಿನ್ನ ಮನೆಯಲ್ಲಿ ಯಾವ ವ್ಯವಸಾಯು ನಡೆಯುತ್ತದೆ?

.**ದಾಸ**— ನಾನಂತೂ, ಮಹಾಸ್ವಾಮಿ! ತಮ್ಮ ದಾಸನಾದ ಶೂದ್ರನಾಗಿದ್ದೇನೆ. ಸ್ವಲ್ಪ ಜಮೀಂದಾರಿ ಇದೆ. ಬೇಸಾಯವೂ ಆಗುತ್ತಿದೆ. ಮತ್ತು ಮನೆಯಲ್ಲಿ ಸ್ವಲ್ಪ ಲೇವಾದೇವಿಯ ವ್ಯವಹಾರವೂ ಇದೆ.

ನಷ್ಟಮತಿ— ಛಿ! ಛೀ!! ಛೀ!!! ನಿನಗೆ ಆಲಿಸುವ, ಮತ್ತು ನಮಗೆ ಶ್ರವಣ ಮಾಡಿಸುವ ಅಧಿಕಾರವೂ ಇಲ್ಲ!

ನೀನು ನಿನ್ನ ಧರ್ಮವನ್ನು ಬಿಟ್ಟು ನಮ್ಮ ಧರ್ಮವನ್ನು ಆಚರಿಸುವೆಯಾದರೆ, ನೀನು ನರಕದಲ್ಲಿ ಬೀಳುವುದಿಲ್ಲವೇನು?

ಹೌದು! ನಿನಗೆ ವೇದಗಳಿಂದ ಬೇರೆಯಾದ ಗ್ರಂಥಗಳ ಕಥೆಯನ್ನು ಕೇಳುವ ಅಧಿಕಾರವಿದೆ! ಯಾವಾಗ ನಿನಗೆ ಆಲಿಸುವ ಇಚ್ಛೆ ಉಂಟಾಗುವುದೋ, ಆಗ ನಮ್ಮನ್ನು ಕರೆಸಿಕೊಂಡು ಬಿಡು! ಹೇಳಿಬಿಡುತ್ತೇವೆ!

ಆದರೆ, ತಾನೇ ತಾನಾಗಿ ಓದಿಕೊಳ್ಳಬೇಡ! ಇಲ್ಲದಿದ್ದರೆ, ಅಧರ್ಮಿಯಾಗಿಬಿಡುವೆ!

ಏನಾದರೂ ದಾನ-ದಕ್ಷಿಣೆ ತಂದಿರುವುದಾದರೆ, ಇಟ್ಟು, ಹೊರಟು ಹೋಗು!

ಮತ್ತು, ಕೇಳಿಲ್ಲಿ! ನಮ್ಮ ಮಾತನ್ನು ಒಪ್ಪಿಕೋ! ಇಲ್ಲದಿದ್ದರೆ, ನಿನ್ನ ಮುಕ್ತಿಯು ಎಂದಿಗೂ ಆಗದು!

ಚೆನ್ನಾಗಿ ಸಂಪಾದಿಸು! ಮತ್ತು ನಮ್ಮ ಸೇವೆಯನ್ನು ಮಾಡು! ಇದರಲ್ಲೇ ನಿನಗೆ ಕಲ್ಯಾಣವಿದೆ. ಮತ್ತು ಈಶ್ವರನು ನಿನ್ನ ಮೇಲೆ ಪ್ರಸನ್ನನಾಗುವನು!

ದಾಸ—ಮಹಾರಾಜ್ ! ನನಗಂತೂ ಓದುವ ಬಹಳ ಇಚ್ಛೆ ಇದೆ! ದೋಷ ತಗಲುತ್ತದೆಯೆಂದರೆ, ವಿದ್ಯೆಯನ್ನು ಓದುವುದು ಕೆಟ್ಟ ಮಾತೇನು?

ಬಕವೃತ್ತಿ— ಸಾಕು! ಸಾಕು!! ಯಾವನೋ ನಿನ್ನನ್ನು ದಾರಿ ತಪ್ಪಿಸುತ್ತಿದ್ದಾನೆ! ಅದಕ್ಕೇ ನೀನು ನಮ್ಮೆದುರಿಗೆ ಎದುರುವಾದಿಸುತ್ತಿದ್ದೀಯೆ!

ಅಯ್ಯೋ! ಏನು ಮಾಡೋಣ? ಕಲಿಯುಗ ಬಂದುಬಿಟ್ಟಿತು!! ವಿದ್ಯೆಯನ್ನು ಓದಿ ಬಿಟ್ಟು, ನಮ್ಮ ಉಪದೇಶವನ್ನು ಕೇಳುತ್ತಿಲ್ಲವಲ್ಲಾ? ಕೆಟ್ಟು ಹೋದರು!!

ದಾಸ— ಏನು, ಮಹಾಸ್ವಾಮಿ! ನಮ್ಮನ್ನೇ ಓದುವುದರಿಂದ, ಮತ್ತು ಮುಕ್ತಿಯಿಂದ ತಡೆಯಲು, ಕಲಿಯುಗವು ನಮ್ಮ ಮೇಲೆಯೇ ಏರಿ ಬಂದಿದೆಯೇನು?

ಸ್ವಾರ್ಥಿ— ಹೌದು ಹೌದು! ಸತ್ಯಯುಗವಾಗಿದ್ದಿದ್ದರೆ, ನೀನು ನಮ್ಮ ಎದುರಿಗೇನೇ ಈ ತರಹ ಒದರಬಲ್ಲೆಯಾಗಿರುತ್ತಿದ್ದೆಯಾ?

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದಾಸ— ಹಾಗಾದರೆ, ಮಹಾಸ್ವಾಮಿಗಳೇ! ತಾವು ನಮಗೆ ಹೇಳಿಕೊಡದಿದ್ದರೆ, ಯಾರು ನಮಗೆ ಕಲಿಸುತ್ತಾರೋ, ನಾವು ಅವರ ಶಿಷ್ಯರಾಗಿ ಬಿಡುವೆವು.

ಅಂಧಕಾರಿ— ಕೇಳಿರಿ! ಕೇಳಿರಿ! ಈ ಕಲಿಯುಗದಲ್ಲಿ ಇನ್ನೇನಾಗಬೇಕಾಗಿದೆ?

ದಾಸ— ನಾವು ತಮ್ಮ ಸೇವೆ ಮಾಡಿದರೆ, ಅದರ ಬದಲಾಗಿ ತಾವು ನಮಗೆ ಏನು ಕೊಡುವಿರಿ?

ಮಾರ್ಜಾರಲಿಂಗೀ*— ಆಶೀರ್ವಾದ!

ದಾಸ— ಆ ಆಶೀರ್ವಾದದಿಂದ ಏನಾಗುವುದು?

ಧೂರ್ತ— ನಿನ್ನ ಕಲ್ಯಾಣ!

ದಾಸ— ಯಾವಾಗ ತಾವು ನಮ್ಮ ಕಲ್ಯಾಣವನ್ನು ಇಚ್ಛಿಸುತ್ತೀರೋ, ಆಗ ವಿದ್ಯೆಯನ್ನು ಓದುವುದರಿಂದ ಅಕಲ್ಯಾಣವಾಗುತ್ತದೇನು?

ಪೋಪನು+ ಹೇಳಿದ— ಈಗ ನೀನು ನಮ್ಮೊಡನೆ ಶಾಸ್ತ್ರಾರ್ಥ ಮಾಡುತ್ತೀಯಾ?

(ನೀತಿ)

ಪ್ರಶ್ನೆ: **'ಪೋಪ'** [ಶಬ್ದದ] ಅರ್ಥವೇನು?

ಉತ್ತರ: ಈ ಶಬ್ದವು ಬೇರೆ ದೇಶದ ಭಾಷೆಯದಾಗಿದೆ. ಅಲ್ಲಂತೂ ಇದರ ಅರ್ಥವು ತಂದೆ ಮತ್ತು ಹಿರಿಯ, ಎಂಬುದಾಗಿರುತ್ತದೆ. ಆದರೆ, ಇಲ್ಲಿ, ಯಾವನು ಕೇವಲ ಧೂರ್ತ ತನವನ್ನು ಮಾಡಿ, ತನ್ನ ಸ್ವಾರ್ಥ ಸಿದ್ಧಿಸಿಕೊಳ್ಳುತ್ತಾನೋ, ಅವನದೇ ಹೆಸರಾಗಿರುತ್ತದೆ.

(ವಿದ್ಯೆ ಮತ್ತು ಧರ್ಮ ಒಟ್ಟಿಗೇ ಇರುತ್ತವೆ)

ಪ್ರಶ್ನೆ: ಯಾವನು ವಿದ್ಯೆಯನ್ನು ಓದಿರುತ್ತಾನೋ, ಆದರೆ, ಅವನಲ್ಲಿ ಧಾರ್ಮಿಕತೆ ಇಲ್ಲವೋ, ಅವನಿಗೆ ವಿದ್ಯೆಯ ಫಲ ಉಂಟಾಗುತ್ತದೋ, ಅಥವಾ ಇಲ್ಲವೋ?

ಉತ್ತರ: ಎಂದಿಗೂ ಇಲ್ಲ! ಏಕೆಂದರೆ, ಮನುಷ್ಯನು ಅವಶ್ಯವಾಗಿ ಧಾರ್ಮಿಕನಾಗುವುದೇ ವಿದ್ಯೆಯ ಫಲವಾಗಿರುತ್ತದೆ.

ಯಾವನು ವಿದ್ಯೆಯ ಪ್ರಕಾಶದಿಂದ, ಒಳಿತು (ಯಾವುದೆಂಬುದನ್ನು] ತಿಳಿದು, ಮಾಡಲಿಲ್ಲವೋ, ಮತ್ತು ಕೆಡುಕು [ಯಾವುದೆಂಬುದನ್ನು] ತಿಳಿದು, ಬಿಡಲಿಲ್ಲವೋ, ಅವನು ಕಳ್ಳನಂತೆ ಅಲ್ಲವೇನು?

---

* **ಎಂದರೆ, ಹೊಂಚು ಹಾಕಿ ಕದಿಯುವವನು; ವಂಚಕ.**

\+ **'ಸತ್ಯಾರ್ಥಪ್ರಕಾಶ', ಏಕಾದಶ ಸಮುಲ್ಲಾಸ, ಪುಟ** 570-572.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಏಕೆಂದರೆ, ಹೇಗೆ ಕಳ್ಳನು ಕಳ್ಳತನವನ್ನು ಕೆಟ್ಟದೆಂದು ತಿಳಿದೂ ಕೂಡ, ಮಾಡುತ್ತಾನೋ, ಮತ್ತು ಸಾವುಕಾರಿಕೆಯನ್ನು ಒಳ್ಳೆಯದೆಂದು ತಿಳಿದೂ ಕೂಡ, ಮಾಡುವುದಿಲ್ಲವೋ, ಹಾಗೆಯೇ ಯಾವನು ಓದಿಯೂ ಕೂಡ, ಅಧರ್ಮವನ್ನು ಬಿಡುವುದಿಲ್ಲವೋ, ಮತ್ತು ಧರ್ಮವನ್ನು ಮಾಡುವುದಿಲ್ಲವೋ, ಅವನು ಮನುಷ್ಯನೇನು?

ಪ್ರಶ್ನೆ: ಯಾವಾಗ ಯಾವನಾದರೂ ಮನುಷ್ಯನು ಮನಸ್ಸಿನಿಂದ ಕೆಟ್ಟದನ್ನು ತಿಳಿಯುತ್ತಾನೋ, ಆದರೆ, ಯಾವುದೋ, ವಿಶೇಷ ಭಯ ಮೊದಲಾದ ನಿಮಿತ್ತಗಳಿಂದ [ಅದನ್ನು] ಬಿಡಲಾರನೋ*, ಮತ್ತು ಒಳ್ಳೆಯ ಕೆಲಸವನ್ನು ಮಾಡಲಾರನೋ, ಆಗಲೂ ಕೂಡ, ಅವನಿಗೆ ದೋಷ ಅಥವಾ ಗುಣವು ತಟ್ಟುತ್ತದೇನು? ಅಥವಾ ಇಲ್ಲವೋ?

ಉತ್ತರ: ದೋಷವೇ ತಟ್ಟುತ್ತದೆ! ಏಕೆಂದರೆ, ಅವನು ಯಾವ ಅಧರ್ಮವನ್ನು ಮಾಡಿಬಿಟ್ಟನೋ, ಅದರ ಫಲವು ಅವಶ್ಯವಾಗಿ ಉಂಟಾಗುತ್ತದೆ.

ಮತ್ತು ಧರ್ಮವನ್ನು ತಿಳಿದೂ ಕೂಡ, ಮಾಡಲಿಲ್ಲವೋ, ಅವನಿಗೆ ಸುಖರೂಪ ಫಲವು ಸ್ವಲ್ಪವೂ ಉಂಟಾಗದು.

ಉದಾಹರಣೆಗಾಗಿ— ಯಾವನಾದರೂ ಮನುಷ್ಯನು ಬಾವಿಯಲ್ಲಿ ಬೀಳುವುದು ಕೆಟ್ಟದೆಂದು+ ತಿಳಿದೂ ಕೂಡ, ಬಿದ್ದರೆ, ಅವನಿಗೆ ದುಃಖ ಉಂಟಾಗುವುದಿಲ್ಲವೇನು?

ಮತ್ತು ಒಳ್ಳೆಯ ಮಾರ್ಗದಲ್ಲಿ ನಡೆಯುವುದು ಉತ್ತಮವೆಂದು ತಿಳಿದೂ ಕೂಡ, ನಡೆಯದಿದ್ದರೆ, ಅವನಿಗೆ ಎಂದಿಗಾದರೂ ಸುಖ ಉಂಟಾಗುತ್ತದೇನು?

ಆದುದರಿಂದ—

[ಸತ್ಪುರುಷರ ಮತ್ತು ಅಸತ್ಪುರುಷರ ಲಕ್ಷಣ]

ಯಥಾ ಮತಿಸ್ತಥೋಕ್ತಿರ್ಯಥೋಕ್ತಿಸ್ತಥಾ ಮತಿಃ ।
ಸತ್ಪುರುಷಸ್ಯ ಲಕ್ಷಣಮತೋ ವಿಪರೀತಮಸತ್ಪುರುಷಸ್ಯೇತಿ ॥++

'ಸತ್ಪುರುಷ'ನ ಲಕ್ಷಣವು, ಹೇಗೆ ಆತ್ಮನ ಜ್ಞಾನವೋ, ಹಾಗೆ ಹೇಳುವುದು; ಮತ್ತು ಹೇಗೆ ಹೇಳುವುದೋ, ಹಾಗೆಯೇ ಕರ್ಮ ಮಾಡುವುದು— ಇದೇ ಆಗಿರುತ್ತದೆ.

ಮತ್ತು ಯಾವನ ಆತ್ಮಕ್ಕೆ ವಿರುದ್ಧವಾಗಿ ಮನಸ್ಸಿರುವುದೋ, ಅದಕ್ಕೆ ವಿರುದ್ಧವಾಗಿ ವಚನವಿರುವುದೋ, ಮತ್ತು ವಚನಕ್ಕೆ ವಿರುದ್ಧವಾಗಿ ಕರ್ಮ ಮಾಡುವುದು, ಆಗಿರುತ್ತದೋ, ಅದೇ '**ಅಸತ್ಪುರುಷ**'ನ ಲಕ್ಷಣವಾಗಿರುತ್ತದೆ.

---

* ಮೂರ್ತಿಪೂಜಕರಾದ ವಿದ್ವಾಂಸರ, ಹಾಗೂ ಜನಸಾಧಾರಣರ ಸ್ಥಿತಿ ಹೀಗಿರುತ್ತದೆ.

\+ ಅಪಾಯಕಾರಿಯೆಂದು.

++ ಅರ್ಥ:— (ಸತ್ಪುರುಷಸ್ಯ) ಸತ್ಪುರುಷರ (ಲಕ್ಷಣಮ್) ಲಕ್ಷಣವು (ಯಥಾ) ಹೇಗೆ (ಮತಿಃ) ಬುದ್ಧಿ [ಇರುತ್ತದೋ] (ತಥಾ) ಹಾಗೆ (ಉಕ್ತಿಃ) ವಚನ [ಇರುತ್ತದೆ.] (ಯಥಾ) ಹೇಗೆ (ಉಕ್ತಿಃ) ವಚನ [ಇರುತ್ತದೋ,] (ತಥಾ) ಹಾಗೆ (ಮತಿಃ) ಬುದ್ಧಿ[ಇರುತ್ತದೆ.] (ಅತಃ) ಇದಕ್ಕೆ (ವಿಪರೀತಮ್) ವಿಪರೀತವಾಗಿರುವುದು (ಅಸತ್ಪುರುಷಸ್ಯ ಇತಿ) ಅಸತ್ಪುರುಷನ [ಲಕ್ಷಣವಾಗಿರುತ್ತದೆ.]

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆದುದರಿಂದ, ಎಲ್ಲಾ ಪ್ರಕಾರದ ಪುರುಷಾರ್ಥವನ್ನು ಮಾಡಿ, ಅವಶ್ಯವಾಗಿ ಧಾರ್ಮಿಕರಾಗಿರುವುದು ಮನುಷ್ಯರಿಗೆ ಉಚಿತವಾಗಿದೆ.

(ಪುರುಷಾರ್ಥ ಮತ್ತು ಅದರ ಭೇದಗಳು)

ಪ್ರಶ್ನೆ: '**ಪುರುಷಾರ್ಥ**', ಎಂದು ಯಾವುದಕ್ಕೆ ಹೇಳುತ್ತಾರೆ? ಮತ್ತು ಅದರ ಭೇದಗಳು ಎಷ್ಟಿವೆ?

ಉತ್ತರ: ಉದ್ಯೋಗದ ಹೆಸರು '**ಪುರುಷಾರ್ಥ**', ಎಂದಿರುತ್ತದೆ. ಮತ್ತು ಅದರ ಭೇದಗಳು ನಾಲ್ಕು ಇವೆ —

ಒಂದು — ಅಪ್ರಾಪ್ತದ ಇಚ್ಛೆ;

ಎರಡನೆಯದು— ಪ್ರಾಪ್ತವಾದುದರ ಯಥಾವತ್ ರಕ್ಷಣೆ;

ಮೂರನೆಯದು— ರಕ್ಷಿಸಲ್ಪಟ್ಟುದರ ವೃದ್ಧಿ;

ಮತ್ತು **ನಾಲ್ಕನೆಯದು**— ವರ್ಧಿಸಲ್ಪಟ್ಟ ಪದಾರ್ಥಗಳನ್ನು ಧರ್ಮದಲ್ಲಿ ವ್ಯಯ ಮಾಡುವುದು*.

ಇವು ಪುರುಷಾರ್ಥದ ಭೇದಗಳಾಗಿವೆ.

[ಎಂದರೆ—]

ನ್ಯಾಯ, ಧರ್ಮದಿಂದ ಕೂಡಿದ ಕ್ರಿಯೆಯಿಂದ ಅಪ್ರಾಪ್ತ ಪದಾರ್ಥಗಳ ಅಭಿಲಾಷೆ ಮಾಡಿ, [ಅವುಗಳಿಗಾಗಿ] ಉದ್ಯೋಗ ಮಾಡುವುದು;

ಅದೇ ರೀತಿಯಲ್ಲಿ, ಆ ಪದಾರ್ಥವು ಯಾವ ವಿಧದಿಂದಲಾದರೂ ನಷ್ಟ-ಭ್ರಷ್ಟವಾಗಿ ಹೋಗದಿರಲಿ, ಎಂದು, ಅದನ್ನು ಎಲ್ಲಾ ರೀತಿಯಿಂದಲೂ ರಕ್ಷಿಸುವುದು!

ಅದನ್ನು ಧರ್ಮಯುಕ್ತ ವ್ಯವಹಾರದಿಂದ ಹೆಚ್ಚಿಸುತ್ತಾ ಹೋಗುವುದು.

ಮತ್ತು ಹೆಚ್ಚಿಸಿದ ಪದಾರ್ಥವನ್ನು ಉತ್ತಮ ವ್ಯವಹಾರಗಳಲ್ಲಿ ಖರ್ಚು ಮಾಡುವುದು.

ಈ ನಾಲ್ಕು ಭೇದಗಳಿವೆ.

[ತನು-ಮನ-ಧನದ ಸದುಪಯೋಗ ಹೇಗೆ?]

ಪ್ರಶ್ನೆ: ಯಾವ ಯಾವ ರೀತಿಯಿಂದ, ಯಾವ ಯಾವ ವ್ಯವಹಾರದಲ್ಲಿ ತನು-ಮನ-ಧನ ಗಳನ್ನು ವಿನಿಯೋಜಿಸಬೇಕು?

ಉತ್ತರ: ಕೆಳಗೆ ಬರೆದ ಈ ನಾಲ್ಕರಲ್ಲಿ —

---

* **ಮನುಸ್ಮೃತಿ (7.99) ನೋಡಿ.**

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

1. ವಿದ್ಯೆಯ ವೃದ್ಧಿ[ಯಲ್ಲಿ];
2. ಪರೋಪಕಾರ[ದಲ್ಲಿ];
3. ಅನಾಥರ ಪಾಲನೆ[ಯಲ್ಲಿ];
4. ಮತ್ತು ತನ್ನ ಸಂಬಂಧಿಗಳ ರಕ್ಷಣೆ[ಯಲ್ಲಿ];

(1) ವಿದ್ಯೆಯ ವೃದ್ಧಿಗಾಗಿ—

ಶರೀರದ ಆರೋಗ್ಯ [ಇಟ್ಟುಕೊಳ್ಳುವುದು] ಮತ್ತು ಅದರಿಂದ ಯಥಾಯೋಗ್ಯವಾಗಿ ಕ್ರಿಯೆಯನ್ನು ಮಾಡುವುದು.

ಮನಸ್ಸಿನಿಂದ ಬಹಳವಾಗಿ ವಿಚಾರ ಮಾಡುವುದು-ಮಾಡಿಸುವುದು.

ಮತ್ತು **ಧನದಿಂದ** ತನ್ನ ಮಕ್ಕಳಿಗೂ, ಹಾಗೂ ಇತರ ಮನುಷ್ಯರಿಗೂ ವಿದ್ಯಾದಾನ ಮಾಡಬೇಕು-ಮಾಡಿಸಬೇಕು.

(2) ಪರೋಪಕಾರಕ್ಕಾಗಿ—

ಶರೀರ ಮತ್ತು **ಮನಸ್ಸಿನಿಂದ** ಅತ್ಯಂತ ಉದ್ಯೋಗ ಮಾಡಬೇಕು.

ಮತ್ತು **ಧನದಿಂದ** ನಾನಾ ಪ್ರಕಾರದ ವ್ಯವಹಾರಗಳನ್ನು ಮಾಡಬೇಕು.

ಮತ್ತು ಯಾವುದರಲ್ಲಿ ಅನೇಕ ಮನುಷ್ಯರು ಕೆಲಸ ಮಾಡಿ, ತಮ್ಮ ತಮ್ಮ ಜೀವನವನ್ನು ಸುಖದಿಂದ ಕಳೆಯಬಲ್ಲರೋ, ಅಂತಹ ಕಾರಖಾನೆಗಳನ್ನು ಸ್ಥಾಪಿಸಬೇಕು.

(3) ಅನಾಥರ ಪಾಲನೆಗಾಗಿ—

'ಅನಾಥರು', ಎಂದು ಯಾರಿಗೆ ಹೇಳುತ್ತಾರೆಂದರೆ, ತಮ್ಮ ಪಾಲನೆ ಮಾಡಿಕೊಳ್ಳುವುದಕ್ಕೂ ಅವರಿಗೆ ಸಾಮರ್ಥ್ಯವೇ ಇರುವುದಿಲ್ಲ.

ಉದಾಹರಣೆಗಾಗಿ— ಬಾಲಕರು, ವೃದ್ಧರು, ರೋಗಿಗಳು, ಅಂಗ-ಭಂಗವುಳ್ಳವರು, ಮೊದಲಾದವರು!

ತನು-ಮನ-ಧನವನ್ನು ವಿನಿಯೋಜಿಸಿ, ಅವರನ್ನೂ ಕೂಡ, ಸುಖಿಗಳನ್ನಾಗಿ ಇಟ್ಟು, ಯಾವನೂ ಆಲಸ್ಯದಿಂದ ನಷ್ಟಬುದ್ಧಿ ಆಗದಿರಲಿ, ಎಂದು ಯಾವ ಯಾವನಿಂದ ಯಾವ ಯಾವ ಕೆಲಸವು ಆಗಬಲ್ಲದೋ, ಅವನವನಿಂದ ಆಯಾಯಾ ಕೆಲಸವನ್ನು ತೆಗೆದುಕೊಳ್ಳಬೇಕು.

(4) ಮಕ್ಕಳು ಮೊದಲಾದವರ ವಿದ್ಯೆಗಾಗಿ—

ತನ್ನ ಮಕ್ಕಳೇ ಮೊದಲಾದ[ವರು ಮತ್ತು ಇತರ] ಮನುಷ್ಯರ ಭೋಜನ-ಪಾನೀಯ ಅಥವಾ ವಿದ್ಯೆಯ ಪ್ರಾಪ್ತಿಗಾಗಿ ಎಷ್ಟು ತನು-ಮನ-ಧನಗಳನ್ನು ಉಪಯೋಗಿಸಿದರೂ, ಅಷ್ಟು ಕಡಿಮೆಯೇ!

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆದರೆ, ಯಾರೂ ನಿರರ್ಥಕರಾಗಿ ಎಂದಿಗೂ ಇರಬಾರದು; ಮತ್ತು ಯಾರನ್ನೂ ಇರಗೊಡಿಸಬಾರದು!

(ವಿವಾಹಿತ ಸ್ತ್ರೀ– ಪುರುಷರ ಪರಸ್ಪರ ವರ್ತನೆ)

ಪ್ರಶ್ನೆ: ಮದುವೆ ಮಾಡಿಕೊಂಡ ಮೇಲೆ, ಪತಿ-ಪತ್ನಿಯರು ಪರಸ್ಪರವಾಗಿ ಹೇಗೆ ವರ್ತಿಸಬೇಕು?

ಉತ್ತರ:

(1) ಎಂದಿಗೂ ಯಾರ ಅಪ್ರಿಯಾಚರಣವನ್ನೂ, ಎಂದರೆ, ಯಾವ ಯಾವ ವ್ಯವಹಾರದಿಂದ ಒಬ್ಬರಿಂದ ಇನ್ನೊಬ್ಬರಿಗೆ ಕಷ್ಟ ಉಂಟಾಗುತ್ತದೋ; ಉದಾಹರಣೆಗಾಗಿ, ವ್ಯಭಿಚಾರ ಮೊದಲಾದುದು; ಅಂತಂತಹ ಕೆಲಸವನ್ನು ಎಂದಿಗೂ ಮಾಡಬಾರದು!

(2) ಒಬ್ಬರು ಇನ್ನೊಬ್ಬರನ್ನು ನೋಡಿ, ಪ್ರಸನ್ನರಾಗಬೇಕು!

(3) ಒಬ್ಬರು ಇನ್ನೊಬ್ಬರ ಸೇವೆ ಮಾಡಬೇಕು!

(4) ಪತಿಯು ಭೋಜನ, ವಸ್ತ್ರ, ಆಭೂಷಣ, ಮತ್ತು ಪ್ರಿಯವಚನ ಮೊದಲಾದ ವ್ಯವಹಾರಗಳಿಂದ ಪತ್ನಿಯನ್ನು ಯಾವಾಗಲೂ ಪ್ರಸನ್ನಳನ್ನಾಗಿಟ್ಟಿರಬೇಕು!

(5) ಮತ್ತು ಮನೆಯ ಎಲ್ಲಾ ಕೃತ್ಯಗಳನ್ನೂ ಅವಳ ಆಧೀನದಲ್ಲಿಡಬೇಕು!*

(6) ಪತ್ನಿಯೂ ಕೂಡ, ತನ್ನ ಪತಿಯೊಡನೆ ಪ್ರಸನ್ನವದನಳಾಗಿದ್ದುಕೊಂಡು; ಉತ್ತಮ ಸಂತಾನಪ್ರಾಪ್ತಿಗಾಗಿಯೂ, ಹಾಗೂ ಯಾವಾಗಲೂ ಇಬ್ಬರಲ್ಲೂ ಆನಂದ ಹೆಚ್ಚುತ್ತಾ ಹೋಗಲಿ, ಎಂದೂ ಭೋಜನ–ಪಾನೀಯ, ಪ್ರೇಮಭಾವನೆ ಮೊದಲಾದುವುಗಳ ಮೂಲಕ, ಅವನನ್ನು ಯಾವಾಗಲೂ ಹರ್ಷಿತನನ್ನಾಗಿ ಇಟ್ಟಿರಬೇಕು.

(ಪರಸ್ಪರ ಪ್ರೀತಿಯಿಲ್ಲದ ದಾಂಪತ್ಯದ ಸರ್ವಸ್ವನಾಶ)

ಪ್ರಶ್ನೆ: ಹಾಗೆ ಮಾಡದೇ ಇದ್ದರೆ, ಏನು ಕೆಡುಕಾದೀತು?

ಉತ್ತರ: ಸರ್ವಸ್ವ–ನಾಶ!

ಏಕೆಂದರೆ, ಪರಸ್ಪರ ಪ್ರೀತಿ ಇಲ್ಲದೇ, ಗೃಹಾಶ್ರಮದ ಸ್ವಲ್ಪವೂ ಸುಖವೂ, ಉತ್ತಮ ಸಂತಾನವೂ, ಮತ್ತು ಪ್ರತಿಷ್ಠೆ ಅಥವಾ '**ಲಕ್ಷ್ಮೀ**'* ಮೊದಲಾದ ಶ್ರೇಷ್ಠ ಪದಾರ್ಥಗಳ ಪ್ರಾಪ್ತಿಯೂ ಎಂದಿಗೂ ಆಗುವುದಿಲ್ಲ!

---

* ಎಂದರೆ, ಮಧ್ಯಕಾಲದ ಪೌರಾಣಿಕ ಜನರು ತಿಳಿದಿರುವಂತೆ, ಎಲ್ಲಾ ಗೃಹಕೃತ್ಯಗಳನ್ನೂ ಪತ್ನಿಯ ಕೈಯಿಂದ ಮಾಡಿಸಬೇಕೆಂದು ಅರ್ಥವಲ್ಲ. ಈ ಕಾರ್ಯಗಳು ಪತ್ನಿಯ ಜವಾಬ್ದಾರಿಯಲ್ಲಿರಬೇಕು, ಎಂದು ಅರ್ಥ!

* ಲಕ್ಷ್ಮೀ = ಐಶ್ವರ್ಯ, ಕಾಂತಿ, ಸೌಂದರ್ಯ, ವೈಭವ, ಸುದರ್ಶನ, ಶುಭ ಚಿಹ್ನೆ, ಶ್ರೇಷ್ಠ, ಉತ್ತಮ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆಲಿಸಿರಿ **ಮನು** ಅವರು ಏನು ಹೇಳುತ್ತಾರೆ, ಎಂಬುದನ್ನು —

"ಸಂತುಷ್ಟೋ ಭಾರ್ಯಯಾ ಭರ್ತಾ ಭರ್ತ್ರಾ ಭಾರ್ಯಾ ತಥೈವ ಚ ।
ಯಸ್ಮಿನ್ನೇವ ಕುಲೇ ನಿತ್ಯಂ ಕಲ್ಯಾಣಂ ತತ್ರ ವೈ ಧ್ರುವಮ್ ॥+

[ಮನುಸ್ಮೃತಿ: ಅಧ್ಯಾಯ 3, 60]

ಯಾವ ಕುಲದಲ್ಲಿ ಪತ್ನಿಯಿಂದ ಪತಿಯೂ, ಹಾಗೂ ಪತಿಯಿಂದ ಪತ್ನಿಯೂ ಆನಂದಿತರಾಗಿರುತ್ತಾರೋ, ಅದರಲ್ಲೇ ನಿಶ್ಚಿತ ಕಲ್ಯಾಣವು ಸ್ಥಿತವಾಗಿರುತ್ತದೆ.

(ಪರೀಕ್ಷಾಪೂರ್ವಕ ಸ್ವಯಂವರ ವಿವಾಹವೇ ಶ್ರೇಷ್ಠ)

ಆದರೆ, ಈ ಮಾತು ಯಾವಾಗ ಆಗುವುದರೆಂದರೆ, ಯಾವಾಗ [ಅವರು] ಬ್ರಹ್ಮಚರ್ಯದ ಮೂಲಕ ವಿದ್ಯೆ, ಶಿಕ್ಷಣವನ್ನು ಗ್ರಹಿಸಿ, ಯುವಾವಸ್ಥೆಯಲ್ಲಿ ಪರಸ್ಪರ ಪರೀಕ್ಷೆಮಾಡಿ, ಪ್ರಸನ್ನತಾಪೂರ್ವಕವಾಗಿ **ಸ್ವಯಂವರ** ವಿವಾಹವನ್ನೇ ಮಾಡಿಕೊಳ್ಳುವರೋ, ಆಗ!

ಏಕೆಂದರೆ, ಎಷ್ಟು ಸುಖದ, ವಿದ್ಯೆಯ ಮತ್ತು ಉತ್ತಮ ಸಂತಾನದ, ಹಾನಿಯು ಬಾಲ್ಯಾವಸ್ಥೆಯಲ್ಲಿನ ವಿವಾಹದಲ್ಲಾಗುತ್ತದೋ, ಅಷ್ಟೇ ಸುಖಲಾಭವು ಬ್ರಹ್ಮಚರ್ಯದಿಂದ ಶರೀರ ಮತ್ತು ಆತ್ಮಕ್ಕೂ, [ಹಾಗೂ] ಪೂರ್ಣ ಯುವಾವಸ್ಥೆಯಲ್ಲಿ ಪರಸ್ಪರ ಪ್ರೀತಿಯಿಂದ ವಿವಾಹ ಮಾಡಿಕೊಳ್ಳುವುದರಿಂದಲೂ ಆಗುತ್ತದೆ.

ಯಾವ ಮನುಷ್ಯರು ಪರಸ್ಪರ ಪ್ರೀತಿಯಿಂದ ಸ್ವಯಂವರ ವಿವಾಹವನ್ನು ಮಾಡಿಕೊಂಡು, ಸಂತಾನಗಳನ್ನು ಉತ್ಪನ್ನ ಮಾಡುತ್ತಾರೋ, ಅವರ ಸಂತಾನಗಳೂ ಕೂಡ, ಹಾಗೆಯೇ, ಲಕ್ಷ್ಯದಲ್ಲಿ ಒಂದಿರುವಂತೆ, ಯೋಗ್ಯವಾಗಿರುತ್ತವೆ. ಎಂದರೆ, ಅವರಲ್ಲಿ ಬುದ್ಧಿ, ಬಲ, ಪರಾಕ್ರಮ, ಧರ್ಮ ಮತ್ತು ಸುಶೀಲತ್ವ ಮೊದಲಾದ ಶುಭಗುಣಗಳು ಪೂರ್ಣಗೊಂಡು, ಮಹಾಭಾಗ್ಯಶಾಲಿಗಳು, ಎಂದು ಕರೆಯಿಸಿಕೊಂಡು, ತಮ್ಮ ಕುಲವನ್ನು ಅತ್ಯಂತ ಪ್ರಶಂಸಿತವನ್ನಾಗಿ ಮಾಡಿಬಿಡುತ್ತಾರೆ!

[ಪಶುರೂಪೀ ಮನುಷ್ಯ ಜಾತಿಯ ಲಕ್ಷಣ]

ಪ್ರಶ್ನೆ: **'ಮನುಷ್ಯತ್ವ'**, ಎಂದು ಯಾವುದಕ್ಕೆ ಹೇಳುತ್ತಾರೆ?

ಉತ್ತರ: ಈ ಮನುಷ್ಯ ಜಾತಿಯಲ್ಲಿ ಎಂತಹ ಗುಣ ಇದೆಯೆಂದರೆ, ಅಂತಹುದು ಬೇರೆ ಯಾವ ಜಾತಿಯಲ್ಲೂ ಸಿಗುವುದಿಲ್ಲ!

** **ಅರ್ಥ :— (ಯಸ್ಮಿನ್) ಯಾವ (ಕುಲೇ) ಕುಲದಲ್ಲಿ (ಭಾರ್ಯಯಾ) ಪತ್ನಿಯಿಂದ (ಭರ್ತಾ) ಪತಿಯು (ಸಂತುಷ್ಟಃ) ಪ್ರಸನ್ನಗೊಳಿಸಲ್ಪಟ್ಟಿರುತ್ತಾನೋ, ತಥಾ (ಚ) ಮತ್ತು ಹಾಗೆಯೇ, (ಭಾರ್ಯಾ) ಪತ್ನಿಯು (ಭರ್ತ್ರಾ) ಪತಿಯಿಂದ ಪ್ರಸನ್ನಗೊಳಿಸಲ್ಪಟ್ಟಿರುತ್ತಾಳೋ, (ತತ್ರ ಏವ) ಅದರಲ್ಲಿಯೇ (ನಿತ್ಯಮ್) ನಿತ್ಯವೂ, (ಧ್ರುವಮ್) ಸ್ಥಿರವೂ ಆದ (ಕಲ್ಯಾಣಮ್ ವೈ) ಕಲ್ಯಾಣವು ನಿಶ್ಚಯವಾಗಿ [ಇರುತ್ತದೆ.]**

\+ **'ಸತ್ಯಾರ್ಥಪ್ರಕಾಶ', ಚತುರ್ಥ ಸಮುಲ್ಲಾಸ, ಪುಟ 164.**

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಶ್ನೆ: ಅದು ಯಾವುದು?

ಉತ್ತರ: ಮನುಷ್ಯನಿಂದ ಬೇರೆಯಾದ ಎಷ್ಟು ಜಾತಿಗಳ ಪ್ರಾಣಿಗಳಿವೆಯೋ, ಅವುಗಳಲ್ಲಿ ಎರಡು ಪ್ರಕಾರದ ಸ್ವಭಾವ ಇರುತ್ತದೆ—

ಬಲಶಾಲಿಯಾದ [ಪ್ರಾಣಿ]ಯಿಂದ ಹೆದರುವುದು;

ಬಲಹೀನ [ಪ್ರಾಣಿ]ಯನ್ನು ಹೆದರಿಸುವುದು;

ಮತ್ತು ನೋವನ್ನುಂಟುಮಾಡಿ, ಎಂದರೆ ಬೇರೆಯದರ ಪ್ರಾಣವನ್ನೂ ಕೂಡ, ತೆಗೆದುಕೊಂಡು, ತನ್ನ ಸ್ವಾರ್ಥಸಾಧನೆಯನ್ನು ಮಾಡಿಕೊಳ್ಳುವುದು.*

ಇದು ಕಾಣಬರುತ್ತಿದೆ!

ಯಾವ ಮನುಷ್ಯನು ಇಂತಹ ಸ್ವಭಾವವನ್ನು ಇಟ್ಟುಕೊಂಡಿರುತ್ತಾನೋ, ಅವನನ್ನೂ ಕೂಡ, ಈ ಜಾತಿಗಳಲ್ಲೇ ಎಣಿಸುವುದು ಉಚಿತವಾಗಿರುತ್ತದೆ.+

(ಮನುಷ್ಯತ್ವದ ಲಕ್ಷಣ)

ಆದರೆ, ಯಾವುದು ನಿರ್ಬಲರ ಮೇಲೆ ದಯೆ ಇಡುವುದು, ಅವರ ಉಪಕಾರ ಮಾಡುವುದು ಮತ್ತು ನಿರ್ಬಲರನ್ನು ಪೀಡಿಸುವ ಅಧರ್ಮೀ ಬಲಶಾಲಿಗಳಿಗೆ ಕಿಂಚಿನ್ಮಾತ್ರವೂ ಕೂಡ, ಹೆದರದೇ-ಶಂಕಿಸದೇ, ಅವರನ್ನು ಪರಪೀಡನದಿಂದ ದೂರಮಾಡಿ, ನಿರ್ಬಲರ ರಕ್ಷಣೆಯನ್ನು ತನು-ಮನ-ಧನದಿಂದ ಯಾವಾಗಲೂ ಮಾಡುವುದಾಗಿರುತ್ತದೋ, ಅದೇ ಮನುಷ್ಯಜಾತಿಯ ನಿಜಗುಣವಾಗಿರುತ್ತದೆ.

ಏಕೆಂದರೆ, ಯಾರು ಕೆಟ್ಟ ಕೆಲಸಗಳನ್ನು ಮಾಡುವುದರಲ್ಲಿ ಹೆದರುತ್ತಾರೋ, ಮತ್ತು ಒಳ್ಳೆಯ ಕೆಲಸಗಳನ್ನು ಮಾಡುವುದರಲ್ಲಿ ಸ್ವಲ್ಪವೂ ಕೂಡ, ಭಯ-ಶಂಕೆ ಇಡುವುದಿಲ್ಲವೋ, ಆ ಮನುಷ್ಯರೇ ಯಾವಾಗಲೂ ಧನ್ಯವಾದಕ್ಕೆ ಪಾತ್ರರಾಗಿರುತ್ತಾರೆ!

[ಯಾವಾಗಲೂ ಸತ್ಯವ್ಯವಹಾರ ಮಾಡಬೇಕು]

ಪ್ರಶ್ನೆ: ಅಲ್ರೀ! ಸರ್ವಥಾ ಸತ್ಯದಿಂದಲಂತೂ ಯಾವ ವ್ಯವಹಾರವೂ ನೆರವೇರಲಾರದು.

ನೋಡಿ! ವ್ಯಾಪಾರದಲ್ಲಿ ಸತ್ಯದ ಮಾತನ್ನು ಹೇಳಿ ಬಿಟ್ಟರೆ, ಯಾವ ವಸ್ತುವಿನ ಮಾರಾಟವೂ ಆಗದು!

---

* ಈ ಎರಡೂ ಸ್ವಭಾವಗಳೂ, ಇಂದೂ ಕೂಡ, ಸುಲಿಗೆ, ಅತ್ಯಾಚಾರ ಮತ್ತು ಯುದ್ಧವನ್ನೇ ತಮ್ಮ ಧರ್ಮವನ್ನಾಗಿಟ್ಟುಕೊಂಡ ಬರ್ಬರ ಮನುಷ್ಯ ಜಾತಿಯೊಂದರಲ್ಲಿ ಕಂಡು ಬರುತ್ತಿದೆ.

\+ ಇಂತಹ ಮನುಷ್ಯರ ಪಂಗಡ, ಯಾವುದೆಂದು ಊಹಿಸಿ!

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸೋಲುವ-ಗೆಲ್ಲುವ ವ್ಯವಹಾರಗಳಲ್ಲಿ ಸುಳ್ಳುಸಾಕ್ಷಿಯನ್ನು ನಿಲ್ಲಿಸದಿದ್ದರೆ, ಸೋಲೇ ಆದೀತಲ್ಲಾ!

ಈ ಮೊದಲಾದ ಕಾರಣಗಳಿಂದ, ಎಲ್ಲಾ ಸ್ಥಾನಗಳಲ್ಲೂ ಸತ್ಯಭಾಷಣ ಮೊದಲಾದುವನ್ನು ಹೇಗೆ ಮಾಡಬಲ್ಲೆವು?

ಉತ್ತರ: ಈ ಮಾತು ಮಹಾಮೂರ್ಖತೆಯದಾಗಿದೆ! ಉದಾಹರಣೆಗಾಗಿ—

ದೃಷ್ಟಾಂತ-[10]

[ಮೊಂಡು ಮಂಡೆಯ ಗುಂಡಪ್ಪನ 'ಪ್ರಗಲ್ಭತ್ವ'!]

ಯಾವುದೋ ಗ್ರಾಮದಲ್ಲಿ ಮೊಂಡು ಮಂಡೆಯ ಗುಂಡಪ್ಪ, ಎಂಬುವವನು ಇರುತ್ತಿದ್ದನು. ಅವನನ್ನು ಐನೂರು ಗ್ರಾಮದ ಮಹಾಪಂಡಿತನೆಂದೂ, ಮತ್ತು ಅದ್ವಿತೀಯ ಗುರು, ಎಂದೂ [ಜನರು] ಅಂಗೀಕರಿಸುತ್ತಿದ್ದರು.

(ಜಿಂಕೆಯ ಪಾದಕ್ಕೆ 'ಬೀಸೇಕಲ್ಲು')

ಒಂದು ರಾತ್ರಿ, ಯಾವುದೋ ರಾಜನ ಆನೆಯು ಅದೇ ಗ್ರಾಮದ ಸಮೀಪದಿಂದ ಹಾಯ್ದು ಹೋಗಿ, ಬೇರೆ ಕಡೆಗೆ ಹೊರಟುಹೋಗಿತ್ತು.

ಅದರ ಪಾದದ ಗುರುತು ಮಾರ್ಗದಲ್ಲಿ ಅಲ್ಲಲ್ಲಿ ಬಿದ್ದು ಬಿಟ್ಟಿತ್ತು.

ಅದನ್ನು ನೋಡಿ, ಬೇಸಾಯ ಮಾಡುವ ಗ್ರಾಮೀಣ ಜನರು ಪರಸ್ಪರವಾಗಿ— 'ಸೋದರರರೇ! ಇದು ಯಾವುದರ ಗುರುತು?', ಎಂದು ಕೇಳಿದರು.

'ನಮಗೆ ಗೊತ್ತಿಲ್ಲ!', ಎಂದು ಎಲ್ಲರೂ ಹೇಳಿದರು.

ಆಗ, ಎಲ್ಲರೂ ಒಮ್ಮತದಿಂದ ಮೊಂಡು ಮಂಡೆಯ ಗುಂಡಪ್ಪನನ್ನು ಕರೆದು—

'ನಿಮ್ಮ ಹೊರತಾಗಿ ಯಾವ ಮನುಷ್ಯನೂ ಇದರ ಸಮಾಧಾನ ಮಾಡಲಾರನು! ಹೇಳಿ! ಇದು ಯಾವುದರ ಪಾದದ ಗುರುತು?', ಎಂದು ಕೇಳಿದರು.

[ಅವನು ಅತ್ತು ಬಿಟ್ಟನು, ಮತ್ತೆ ನಕ್ಕು ಬಿಟ್ಟನು].

ಅವನು ಯಾವಾಗ ಅತ್ತನೋ, ಮತ್ತು ಅತ್ತು ಬಿಟ್ಟು ನಕ್ಕನೋ, ಆಗ ಎಲ್ಲರೂ—

'ನೀವು ಏಕೆ ಅತ್ತಿರಿ, ಮತ್ತು ಏತಕ್ಕಾಗಿ ನಕ್ಕಿರಿ?', ಎಂದು ಕೇಳಿದರು.

ಆಗ ಅವನು — 'ಯಾವಾಗ ನಾನು ಸತ್ತು ಹೋಗುವೆನೋ, ಆಗ ಇಂತಿಂತಹ ಮಾತುಗಳ ಉತ್ತರವನ್ನು ನನ್ನ ಹೊರತು ಬೇರಾವನು ಕೊಡಬಲ್ಲನು?, [ಎಂದು, ಯೋಚಿಸಿ ಅತ್ತೆನು].

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮತ್ತು ಏತಕ್ಕಾಗಿ ನಕ್ಕೆನು. ಎಂದರೆ, ಇದರ ಉತ್ತರವಂತೂ ಸುಲಭವಾಗಿದೆಯಲ್ಲಾ? ಕೇಳಿರಿ!

"ಮೊಂಡು ಮಂಡೆಯ ಗುಂಡಪ್ಪನೇ ಅರಿತ; ಮತ್ತ್ಯಾರೂ ಅಲ್ಲಾ!
ಪಾದಕ್ಕೆ ಬೀಸೇಕಲ್ಲು ಕಟ್ಟಿಕೊಂಡು ಜಿಂಕೆ ಜಿಗಿದಿತ್ತಲ್ಲಾ!!"

'ಎಂದರೆ, ಕಾಡಿನಲ್ಲಿ ಯಾವ ಜಿಂಕೆ ಇರುತ್ತದೋ, ಅದು ಯಾವನೋ ಕಾಡು ಮನುಷ್ಯನ ಬೀಸೇಕಲ್ಲಿನ ಹಾಸುಗಳನ್ನು ತನ್ನ ಪಾದಗಳಿಗೆ ಕಟ್ಟಿಕೊಂಡು, ಜಿಗಿಯುತ್ತಾ ಹೊರಟು ಹೋಗಿದೆ!', ಎಂದು ಹೇಳಿದನು.

ಆಗ, ಇದನ್ನು ಕೇಳಿ, ಜನರೆಲ್ಲರೂ— 'ಆಹಾಹಾ! ಆಹಾಹಾ!!', ಎಂದು ಹೇಳುತ್ತಾ— 'ಇಂತಿಂತಹ ಮಾತುಗಳಿಗೆ ಉತ್ತರವನ್ನು ಕೊಡಬಲ್ಲ ನಿಮ್ಮಂತಹ ಪಂಡಿತರು ಈ ಪೃಥಿವಿಯಲ್ಲಿ ಯಾವನೂ ಇಲ್ಲ!', ಎಂದು ಅವನಿಗೆ ಧನ್ಯವಾದ ಕೊಟ್ಟರು!

(ಕಂಬದಿಂದ ಕೈ ಬಿಡಿಸುವ 'ಉಪಾಯ'!)

ಯಾವಾಗ ಆ ಮೊಂಡು ಮಂಡೆಯ ಗುಂಡಪ್ಪನು ಗ್ರಾಮದ ಕಡೆಗೆ ಬರುತ್ತಿದ್ದನೋ, ಆಗ, ಅಷ್ಟರಲ್ಲೇ [ಗ್ರಾಮದಲ್ಲಿ] ಗ್ರಾಮೀಣ ಹೆಂಗಸೊಬ್ಬಳು ಕಾಡಿನಿಂದ ಎಳಚೀ ಹಣ್ಣುಗಳನ್ನು ತಂದು, ಚಪ್ಪರದ ಕಂಬವನ್ನು ಹಿಡಿದುಕೊಂಡು ನಿಂತಿದ್ದ ತನ್ನ ಮಗನಿಗೆ— 'ಮಗೂ! ಎಳಚಿ ಹಣ್ಣು ತೆಗೆದುಕೋ!', ಎಂದು ಹೇಳಿದಳು.

ಆಗ, ಅವನು [ಕಂಬದ ಎರಡೂ ಕಡೆಯಿಂದ ಕೈಚಾಚಿ], ಕೈ ಬೊಗಸೆಯಲ್ಲಿ ಎಳಚೀ ಹಣ್ಣುಗಳನ್ನು ತೆಗೆದುಕೊಂಡುಬಿಟ್ಟನು. ಆದರೆ, ಚಪ್ಪರದ ಕಂಬವು [ಎರಡೂ] ಕೈಗಳ ಮಧ್ಯದಲ್ಲಿದ್ದುದರಿಂದ, ಎಳಚೀ ಹಣ್ಣು ಅವನ ಬಾಯಿಯ ತನಕ ಬರಲಿಲ್ಲ.

ಆಗ ಹುಡುಗನು ಅಳತೊಡಗಿದನು!

ಅವನು ಅಳುತ್ತಿರುವುದನ್ನು ಕಂಡು, ಅವನ ತಾಯಿ, ಮತ್ತು ತಂದೆ ಕೂಡ —

'ಅಯ್ಯೋ! ನಮ್ಮ ಹುಡುಗನನ್ನು ಕಂಬವು ಹಿಡಿದುಕೊಂಡು ಬಿಟ್ಟಿದೆಯಲ್ಲಾ! ಏ! ಏ!ಏ!', ಎಂದು ಅಳತೊಗಿಡದರು.

ಆಗ ಅದನ್ನು ಕೇಳಿ, ನೆರೆಹೊರೆಯವರೂ ಕೂಡ— 'ಅಯ್ಯಯ್ಯೋ! ಇವರ ಹುಡುಗನನ್ನು ಕಂಬವು ಹೇಗೆ ಹಿಡಿದುಕೊಂಡು ಬಿಟ್ಟಿದೆ! ಬಿಡುತ್ತಲೇ ಇಲ್ಲವಲ್ಲಾ!', ಎಂದು ಅಳತೊಡಗಿದರು.

ಆಗ ಯಾವನೋ— 'ಮೊಂಡು ಮಂಡೆಯ ಗುಂಡಪ್ಪನನ್ನು ಕರೆಯಿರಿ!, ಅವನ ಹೊರತು ಯಾವನೂ ಈ ಹುಡುಗನನ್ನು ಬಿಡಿಸಲಾರನು', ಎಂದು ಹೇಳಿದನು.

ಆಗ ಒಬ್ಬ ಮನುಷ್ಯನು ಅವನನ್ನು ಬೇಗ ಕರೆದು ಕೊಂಡು ಬಂದನು. ಮತ್ತು, ಅವನನ್ನು— 'ಈ ಹುಡುಗನು ಹೇಗೆ ಬಿಡುಗಡೆ ಹೊಂದಬಲ್ಲನು?', ಎಂದು ಕೇಳಿದನು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆಗ ಅವನು — 'ಕೇಳಿರಿ ಜನರೇ! ಎರಡು ರೀತಿಯಿಂದ ಈ ಹುಡುಗನು ಬಿಡುಗಡೆ ಹೊಂದಬಲ್ಲನು. ಒಂದೇನೆಂದರೆ— ಕೊಡಲಿಯನ್ನು ತಂದು, ಹುಡುಗನ ಕೈಯನ್ನು ಕತ್ತರಿಸಿ ಬಿಡಿರಿ! ಇದೀಗ ಬಿಡುಗಡೆಯಾಗುವನು!

'ಮತ್ತು ಎರಡನೇ ಉಪಾಯವೇನೆಂದರೆ, ಮೊದಲು ಚಪ್ಪರವನ್ನು [ಕಂಬದಿಂದ] ಕೆಳಗೆ ಇಳಿಸಿಡಿ. ನಂತರ, ಹುಡುಗನನ್ನು ಕಂಬದ ಮೇಲುಭಾಗದಿಂದ ಎತ್ತಿ, ಕೆಳಗೆ ಇಳಿಸಿ ತನ್ನಿರಿ!', ಎಂದು ಹೇಳಿದನು.

ಆಗ ಹುಡುಗನ ತಂದೆಯು— 'ನಾವು ದರಿದ್ರ ಮನುಷ್ಯರಾಗಿದ್ದೇವೆ. ನಮ್ಮ ಚಪ್ಪರವು ಮುರಿದು ಹೋಗುವುದಾದರೆ, ಮತ್ತೆ ಹಾಕಲು ಕಷ್ಟವಾಗುತ್ತದೆ,' ಎಂದು ಹೇಳಿದನು.

ಆಗ ಮೊಂಡು ಮಂಡೆಯ ಗುಂಡಪ್ಪನು — '[ಹಾಗಾದರೆ], ತನ್ನಿ ಕೊಡಲಿಯನ್ನು! ಮತ್ತೇಕೆ ಕಾಯುತ್ತಿದ್ದೀರಿ!', ಎಂದು ಹೇಳಿದನು.

ಕೊಡಲಿಯನ್ನು ತಂದು ಯಾವಾಗ [ಹುಡುಗನ] ಕೈಯನ್ನು ಕತ್ತರಿಸಲು ಉದ್ಯುಕ್ತರಾದರೋ, ಆಗ ಬೇರೆ ಗ್ರಾಮದ ಬುದ್ಧಿವಂತ ಹೆಂಗಸೊಬ್ಬಳು ಗಲಾಟೆಯನ್ನು ಕೇಳಿ, ಅಲ್ಲಿಗೆ ಬಂದು, ನೋಡಿ, — 'ಇವನ ಕೈಯನ್ನು ಕತ್ತರಿಸಬೇಡಿ! ನಾನು ಈ ಹುಡುಗನ ಕೈಯನ್ನು ಬಿಡಿಸಿಬಿಡುತ್ತೇನೆ', ಎಂದು ಹೇಳಿದಳು.

ಯಾವಾಗ ಅವಳು ಕಂಬದ ಹತ್ತಿರ ಹೋಗಿ, ಹುಡುಗನ ಕೈ ಬೊಗಸೆಯ ಕೆಳಗೆ ತನ್ನ ಬೊಗಸೆಯನ್ನು ಹಿಡಿದುಕೊಂಡು— 'ಮಗೂ! ನನ್ನ ಕೈಯಲ್ಲಿ ಎಳಚೀ ಹಣ್ಣುಗಳನ್ನು ಬಿಟ್ಟು ಬಿಡಪ್ಪಾ', ಎಂದು ಹೇಳಿದಳೋ—

ಆಗ ಅವನು ಎಳಚೀ ಹಣ್ಣುಗಳನ್ನು ಬಿಟ್ಟು ಬಿಟ್ಟು, [ಕಂಬದಿಂದ] ಬೇರೆಯಾದನು.

ಮತ್ತು, ಅವನಿಗೆ [ಆ ಹೆಂಗಸು] ಎಳಚೀ ಹಣ್ಣುಗಳನ್ನು ಕೊಟ್ಟು ಬಿಟ್ಟಳು. ಅವನು ತಿನ್ನ ತೊಡಗಿದನು!

ಆಗ ಮೊಂಡು ಮಂಡೆಯ ಗುಂಡಪ್ಪನು ಬಹಳ ಕೋಪಾವಿಷ್ಟನಾಗಿ — 'ಈ ಹುಡುಗನು ಆರು ತಿಂಗಳಲ್ಲಿ ಸತ್ತು ಹೋಗುವನು. ಏಕೆಂದರೆ, ಹೇಗೆ ನಾನು ಹೇಳಿದ್ದೆನೋ, ಹಾಗೆಯೇ ಮಾಡಿದ್ದರೆ, ಸಾಯುತ್ತಿರಲಿಲ್ಲ!', ಎಂದು ಹೇಳಿದನು.

ಆಗಂತೂ ಹುಡುಗನ ತಾಯಿ-ತಂದೆ ಗಾಬರಿ ಪಟ್ಟು— 'ಈಗ ಏನು ಮಾಡಬೇಕು?', ಎಂದು ಕೇಳಿದರು.

ಆಗ ಆ ಹೆಂಗಸು — 'ಈ ಮಾತು ಸುಳ್ಳಾಗಿದೆ! ಕೈ ಕತ್ತರಿಸುವುದರಿಂದ ಅವನು ಈಗಲೇ ಸತ್ತು ಹೋಗಿದ್ದಿದ್ದರೆ, ನೀವೇನು ಮಾಡುತ್ತಿದ್ದಿರಿ? ಸಾವಿನಿಂದ ಉಳಿಸುವ [ಯಾವ] ಔಷಧವೂ ಇಲ್ಲವಲ್ಲಾ?', ಎಂದು ತಿಳಿಸಿಕೊಟ್ಟಳು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆಗ ಅವರ ತಳಮಳ ದೂರವಾಯಿತು.

(ನೀತಿ)

ಹೀಗೆ ಯಾವ ಮನುಷ್ಯರು ಮಹಾಮೂರ್ಖರಾಗಿರುತ್ತಾರೋ, ಅವರು — 'ಸತ್ಯದಿಂದ ವ್ಯವಹಾರದ ನಾಶವೂ ಮತ್ತು ಸುಳ್ಳಿನಿಂದ ವ್ಯವಹಾರದ ಸಿದ್ಧಿಯೂ ಆಗುತ್ತದೆ,' ಎಂದು ತಿಳಿದಿರುತ್ತಾರೆ.

(ಸತ್ಯಾಸತ್ಯ ವ್ಯವಹಾರಗಳ ಲಾಭ-ಹಾನಿ)

ಆದರೆ, ಯಾವಾಗ ಯಾವನೋ ಯಾವನನ್ನಾದರೂ ಒಂದು ವ್ಯವಹಾರದಲ್ಲಿ 'ಸುಳ್ಳಿಗ,' ಎಂದು ತಿಳಿದುಬಿಟ್ಟರಂತೂ, ಅವನ ಪ್ರತಿಷ್ಠೆ ಮತ್ತು ವಿಶ್ವಾಸವೆಲ್ಲವೂ ನಾಶವಾಗಿ, ಅವನ ಎಲ್ಲಾ ವ್ಯವಹಾರಗಳೂ ನಾಶವಾಗುತ್ತಾ ಹೋಗುತ್ತವೆ.

ಮತ್ತು ಯಾರು ಎಲ್ಲಾ ವ್ಯವಹಾರಗಳಲ್ಲೂ ಸುಳ್ಳನ್ನು ತ್ಯಜಿಸಿ, ಸತ್ಯವನ್ನೇ ಹೇಳುತ್ತಾರೋ, ಅವರಿಗೆ ಲಾಭವೇ ಲಾಭ ಉಂಟಾಗುತ್ತದೆ; ಹಾನಿಯು ಎಂದಿಗೂ ಇಲ್ಲ!

ಏಕೆಂದರೆ, ಸತ್ಯ ವ್ಯವಹಾರವನ್ನು ಮಾಡುವುದರ ಹೆಸರು **'ಧರ್ಮ'**, ಎಂದೂ, ಮತ್ತು [ಅದಕ್ಕೆ] ವಿರುದ್ಧ [ಮಾಡುವುದರ] ಹೆಸರು **'ಅಧರ್ಮ'**, ಎಂದೂ ಇರುತ್ತದೆ.

ಧರ್ಮದ ಫಲವು ಸುಖಲಾಭರೂಪಿಯಾಗಿಯೂ, ಮತ್ತು ಅಧರ್ಮದ ಫಲವು ದುಃಖರೂಪಿಯಾಗಿಯೂ ಇರುವುದಿಲ್ಲವೇನು?

ಇದಕ್ಕೆ ಪ್ರಮಾಣವೇನೆಂದರೆ—

ಇದಮಹಮನೃತಾತ್ ಸತ್ಯಮುಪೈಮಿ ॥ 1 ॥[1]

[ಯಜುರ್ವೇದ: ಅಧ್ಯಾಯ 1, ಮಂತ್ರ 5]

ಸತ್ಯಮೇವ ಜಯತಿ* **ನಾನೃತಂ ಸತ್ಯೇನ ಪಂಥಾ ವಿತತೋ ದೇವಯಾನಃ।**
ಯೇನಾಽಽಕ್ರಮಂತ್ಯೃಷಯೋ ಹ್ಯಾಪ್ತಕಾಮಾ ಯತ್ರ ತತ್ಸತ್ಯಸ್ಯ ಪರಮಂ
ನಿಧಾನಮ್ ॥2॥[2]

[ಮುಂಡಕೋಪನಿಷತ್, ಮುಂಡಕ 3, ಖಂಡ 1, ಮಂತ್ರ 6]

---

1. **ಅರ್ಥ** :— (ಇದಮ್) ಇದೇನೆಂದರೆ, (ಅಹಮ್) ನಾನು (ಅನೃತಾತ್) ಅನೃತದಿಂದ (ಸತ್ಯಮ್) ಸತ್ಯವನ್ನು (ಉಪೈಮಿ) ಹೊಂದುತ್ತೇನೆ.

2. **ಅರ್ಥ** :— (ಯತ್ರ) ಎಲ್ಲಿ (ಸತ್ಯಸ್ಯ) ಸತ್ಯದ (ಪರಮಮ್) ಶ್ರೇಷ್ಠವಾದ (ನಿಧಾನಮ್) ಆಕರ [ಇದೆಯೋ, ಹಾಗೂ] (ಯೇನ) ಯಾವುದರ ಮೂಲಕ (ಆಪ್ತಕಾಮಾಃ) ಆಪ್ತಕಾಮರಾದ (ಋಷಯಃ) ಋಷಿಗಳು (ಆಕ್ರಮಂತಿ ಹಿ) ನಿಶ್ಚಯವಾಗಿ ನಡೆಯುತ್ತಾರೋ, [ಮತ್ತು] (ಸತ್ಯೇನ) ಸತ್ಯದಿಂದ (ದೇವಯಾನಃ ಪಂಥಾಃ) ವಿದ್ವಾಂಸರ ಮಾರ್ಗವು (ವಿತತಃ) ವಿಸ್ತರಿಸಲ್ಪಟ್ಟಿದೆಯೋ (ತತ್) ಆ (ಸತ್ಯಮ್ ಏವ) ಸತ್ಯವೇ (ಜಯತಿ) ಜಯಿಸುತ್ತದೆ (ನ ಅನೃತಮ್) ಅನೃತವಲ್ಲ!

*. ಉಪನಿಷತ್ತಿನಲ್ಲಿ—'ಜಯತೇ', ಎಂಬ ಪಾಠವಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಹಿ ಸತ್ಯಾತ್ ಪರೋ ಧರ್ಮೋ ನಾನೃತಾತ್ ಪಾತಕಂ ಪರಮ್ ॥ 3 ॥ [3]

ಇತ್ಯಾದಿ.

[ಅರ್ಥ] :— ಮನುಷ್ಯನಲ್ಲಿರುವ ಮನುಷ್ಯತ್ವವೆಂದರೆ, ಸುಳ್ಳಿನ ವ್ಯವಹಾರಗಳನ್ನು ಎಲ್ಲಾ ರೀತಿಯಿಂದಲೂ ತ್ಯಜಿಸಿ, ಸತ್ಯವ್ಯವಹಾರಗಳನ್ನು ಯಾವಾಗಲೂ ಗ್ರಹಿಸಬೇಕು. [1]

ಏಕೆಂದರೆ, ಯಾವಾಗಲೂ ಸತ್ಯದ್ದೇ ವಿಜಯವೂ ಮತ್ತು ಸುಳ್ಳಿನ ಪರಾಜಯವೂ ಆಗುತ್ತದೆ. ಆದುದರಿಂದ, ಯಾವ ಸತ್ಯ [ಮಾರ್ಗ]ದಿಂದ ಹೊರಟು, ಧಾರ್ಮಿಕ ಋಷಿಜನರು, ಎಲ್ಲಿ ಸತ್ಯದ ನಿಧಿಯಾದ ಪರಮಾತ್ಮನಿದ್ದಾನೋ, ಅವನನ್ನು ಪ್ರಾಪ್ತಮಾಡಿಕೊಂಡು, ಆನಂದಿತರಾದರೋ, ಮತ್ತು ಈಗಲೂ ಕೂಡ, ಆಗುತ್ತಾರೋ, ಅದರ ಆಚರಣೆಯನ್ನು ಮನುಷ್ಯರು ಏತಕ್ಕಾಗಿ ಮಾಡಬಾರದು? [2]

ಸತ್ಯದಿಂದ ಹೊರಗಾದ ಯಾವ ಧರ್ಮವೂ, ಹಾಗೂ ಅಸತ್ಯದಿಂದ ಹೊರಗಾದ ಯಾವ ಅಧರ್ಮವೂ ಇಲ್ಲ, ಎಂಬುದು ನಿಶ್ಚಿತವಾಗಿದೆ. [3]

ಆದುದರಿಂದ, ಯಾರು ಎಲ್ಲಾ ವ್ಯವಹಾರಗಳನ್ನೂ ಸತ್ಯದಿಂದಲೇ ಮಾಡುತ್ತಾರೋ, ಮತ್ತು ಸುಳ್ಳಿನಿಂದ ಕೂಡಿದ ಕರ್ಮವನ್ನು ಸ್ವಲ್ಪ ಮಾತ್ರವೂ ಕೂಡ, ಮಾಡುವುದಿಲ್ಲವೋ, ಆ ಮನುಷ್ಯರೇ ಧನ್ಯರು!

ದೃಷ್ಟಾಂತ– [11]

[ಸುಳ್ಳುಗಾರ ಗಿರಾಕಿಯ ಮತ್ತು ಮೋಸಗಾರ ಜವಳಿ ವ್ಯಾಪಾರಿಯ ಚೌಕಾಸಿ ವ್ಯಾಪಾರ; ಜಗಳ]

ಯಾವನೋ ಅಧರ್ಮಿ ಮನುಷ್ಯನೊಬ್ಬನು ಯಾವನೋ, ಅಧರ್ಮಿ ಜವಳಿ ವ್ಯಾಪಾರಿಯ ಅಂಗಡಿಗೆ ಹೋಗಿ, — 'ಈ ಬಟ್ಟೆಯನ್ನು ಎಷ್ಟು ಆಣೆ* ಗಜ[ದ+ ಬೆಲೆಗೆ] ಕೊಡುತ್ತೀರಿ?', ಎಂದು ಕೇಳಿದನು.

ಅವನು — 'ಹದಿನಾರು ಆಣೆ! ನೀವೂ ಕೂಡ, ಸ್ವಲ್ಪ ಹೇಳಿ', ಎಂದನು.

ಜವಳಿ ವ್ಯಾಪಾರಿ ಮತ್ತು ಗಿರಾಕಿ, ಇಬ್ಬರೂ— 'ಇದು ಹತ್ತು ಆಣೆ ಗಜದ ಬೆಲೆಯ ಬಟ್ಟೆ', ಎಂದು ತಿಳಿದೇ ಇದ್ದರು!

ಆದರೆ, ಅಧರ್ಮಿಗಳು ಸುಳ್ಳು ಹೇಳುವುದಕ್ಕೆ ಎಂದಿಗೂ ಹೆದರುವುದಿಲ್ಲವಲ್ಲಾ!

---

3. **ಅರ್ಥ:— (ಸತ್ಯಾತ್) ಸತ್ಯದಿಂದ (ಪರಃ) ಬೇರೆಯಾದ (ಧರ್ಮಃ) ಧರ್ಮವು (ನಹಿ) ಇಲ್ಲ; (ಅನೃತಾತ್) ಅನೃತದಿಂದ (ಪರಮ್) ಬೇರೆಯಾದ (ಪಾತಕಮ್) ಪಾತಕವು [ಇಲ್ಲ.]**

* **ಈಗಿನ ವಿನಿಮಯದಂತೆ ಆರು ಪೈಸೆ.**

\+ **ಮೂವತ್ತಾರು ಅಂಗುಲ ಅಥವಾ 91.4 ಸೆಂಟಿಮೀಟರ್.**

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಿರಾಕಿ— ಆರಾಣೆ ಗಜಕ್ಕೆ ಕೊಡಿ! ಮತ್ತು ತೆಗೆದುಕೊಳ್ಳುವ-ಕೊಡುವ ಮಾತನ್ನು ನಿಜ-ನಿಜವಾಗಿ ಹೇಳಿ !

ಜವಳಿ ವ್ಯಾಪಾರಿ— ಸರಿ! ಹಾಗಾದರೆ, ನಿಮಗಾಗಿ ಎರಡಾಣೆ ಬಿಟ್ಟು ಬಿಡುತ್ತೇವೆ. ಹದಿನಾಲ್ಕಾಣೆ ಕೊಡಿ!

ಗಿರಾಕಿ— ನಷ್ಟವೇನೋ ಆಯಿತು! ಆದರೆ, ಏಳಾಣೆ ತೆಗೆದುಕೊಳ್ಳಿ.

ಜವಳಿ ವ್ಯಾಪಾರಿ— ಹಾಗಾ! ನಿಜ-ನಿಜವಾಗಿ ಹೇಳಲೇನು?

ಗಿರಾಕಿ — ಹೇಳಿ!

ಜವಳಿ ವ್ಯಾಪಾರಿ— ಬಿಡಿ! ಒಂದಾಣೆ ನಷ್ಟಕ್ಕೇ ಆಗಲಿ! ಹದಿಮೂರಾಣೆ ಕೊಡಿ! ನಿಮಗೆ ಕೊಳ್ಳುವುದಿದ್ದರೆ, ಕೊಳ್ಳಿ!

ಗಿರಾಕಿ — ನಾನು ಸತ್ಯ ಸತ್ಯವಾಗಿ ಹೇಳುತ್ತೇನೆ. ಇದಕ್ಕೆ ಎಂಟಾಣೆಗಿಂತ ಹೆಚ್ಚಾಗಿ ಯಾವನೂ ನಿಮಗೆ ಕೊಡುವುದಿಲ್ಲ!

ಜವಳಿ ವ್ಯಾಪಾರಿ— ನಿಮಗೆ ಕೊಳ್ಳುವುದಿದ್ದರೆ, ಕೊಂಡು ಕೊಳ್ಳಿರಿ! ಕೊಳ್ಳಲಾಗದಿದ್ದರೆ, ಕೊಳ್ಳಬೇಡಿ! **ದೇವರಾಣೆ!** ಹನ್ನೆರಡಾಣೆ ಗಜಕ್ಕೆ ನನಗೆ ಬಿದ್ದಿದೆ. ನಿಮ್ಮನ್ನು ಒಳ್ಳೆಯ ಮನುಷ್ಯರೆಂದು ತಿಳಿದು, [ಹನ್ನೆರಡಾಣೆಗೆ] ಕೊಟ್ಟು ಬಿಡುತ್ತೇನೆ.

ಗಿರಾಕಿ— ಧರ್ಮದಾಣೆ! ನಾನು ನಿಜ ಹೇಳುತ್ತೇನೆ. ನನಗೆ ಕೊಡುವುದಿದ್ದರೆ, ಕೊಡಿ. [ಇಲ್ಲದಿದ್ದರೆ], ಆಮೇಲೆ ಪಶ್ಚಾತ್ತಾಪ ಪಡುವಿರಿ. ನಾನಂತೂ ಬೇರೆ ಅಂಗಡಿಯಿಂದ ಕೊಂಡು ಕೊಂಡುಬಿಡುವೆನು. ನಿಮ್ಮ ಅಂಗಡಿ ಇದೊಂದೇ ಏನು? ಒಂಬತ್ತಾಣೆ ಗಜಕ್ಕೆ ಕೊಟ್ಟು ಬಿಡಿ! ಇಲ್ಲದಿದ್ದರೆ, ನಾನು ಹೋಗುತ್ತೇನೆ.

ಜವಳಿ ವ್ಯಾಪಾರಿ — ನೀವು ಎಂದಾದರೂ ಇಂತಹ [ಬಟ್ಟೆ]ಯನ್ನು ಕೊಂಡಿದ್ದಿರೇನು?

[ನೀವು] ಒಂಬತ್ತಾಣೆ ಗಜಕ್ಕೆ ಕೊಡಿ[ಸಿ], ನಾನು ನೂರು ರೂಪಾಯಿಯಷ್ಟರದನ್ನು ಕೊಳ್ಳುತ್ತೇನೆ.

ಗಿರಾಕಿಯು ನಿಧಾನ-ನಿಧಾನವಾಗಿ— [ವ್ಯಾಪಾರಿಯು] ತನ್ನನ್ನು ಕರೆಯುತ್ತಾನೋ, ಇಲ್ಲವೋ, ಎಂದು [ನಿರೀಕ್ಷಿಸುತ್ತಾ] ಹೊರಟನು.

'ಗಿರಾಕಿಯು ವಾಪಸು ಬರುತ್ತಾನೋ, ಇಲ್ಲವೋ ನೋಡೋಣ', ಎಂದು ಜವಳಿ ವ್ಯಾಪಾರಿಯು ಓರೆಗಣ್ಣಿನಿಂದ ನೋಡುತ್ತಿದ್ದನು.

ಯಾವಾಗ ಗಿರಾಕಿಯು ವಾಪಸ್ಸು ಬರಲಿಲ್ಲವೋ, ಆಗ ಅವನು — 'ಕೇಳ್ರೀ, ಇಲ್ಲಿ ಬನ್ನಿ!', ಎಂದು ಕೂಗಿದನು*.

ಗಿರಾಕಿ— ಏನು ಹೇಳ್ತೀರ್ರೀ! ಒಂಬತ್ತಾಣೆಗೆ ಕೊಡುತ್ತೀರೇನು?

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಜವಳಿ ವ್ಯಾಪಾರಿ— ರ್‍ರೀ! ಧರ್ಮದಿಂದ ಹೇಳುತ್ತೇನೆ. ಹನ್ನೊಂದಾಣೆಯನ್ನಂತೂ ಕೊಡುತ್ತೀರೋ, [ಇಲ್ಲವೋ]?

ಗಿರಾಕಿ— ಒಂಬತ್ತೂವರಾಣೆ ತೆಗೆದುಕೊಳ್ಳಿ,

ಎಂದು ಹೇಳಿ, ಸ್ವಲ್ಪ ಮುಂದೆ ಹೊರಟನು.

'ಕೈಯಿಂದ ಜಾರಿದನಲ್ಲಾ', ಎಂದು ಜವಳಿ ವ್ಯಾಪಾರಿಗೆ ಅರಿವಾಯಿತು$.

ಜವಳಿ ವ್ಯಾಪಾರಿ— ರೀ, ಸ್ವಾಮಿ! ಇಲ್ಲಿ ಬನ್ನಿರೀ! ಬನ್ನಿರೀ!

ಗಿರಾಕಿ— ನೀವು ಏಕೆ ತಡ ಮಾಡುತ್ತಿದ್ದೀರ್‍ರೀ! ಸುಮ್ಮನೇ$ ಸಮಯ ಹೋಗುತ್ತಿದೆ.

ಜವಳಿ ವ್ಯಾಪಾರಿ — ನನ್ನ **ಮಗನಾಣೆ!** ನೀವು ಇದನ್ನು ಕೊಳ್ಳದಿದ್ದರೆ, ಪಶ್ಚಾತ್ತಾಪ ಪಡುವಿರಿ! ಈಗ ನಾನು ನಿಜವನ್ನೇ ಹೇಳುತ್ತೇನೆ. ಹತ್ತೂವರಾಣೆ ಕೊಟ್ಟುಬಿಡಿ! ಇಲ್ಲದಿದ್ದರೆ ನಿಮ್ಮಿಷ್ಟ!

ಗಿರಾಕಿ— ನನ್ನಾಣೆ! ನೀವು ಎರಡಾಣೆ ಹೆಚ್ಚಾಗಿ ಕೇಳುತ್ತಿದ್ದೀರಿ! ಹತ್ತಾಣೆ ಕೊಡುತ್ತೇನೆ. ಇಷ್ಟರದಕ್ಕಂತೂ ಅಲ್ಲವೇ ಅಲ್ಲ!

ಜವಳಿ ವ್ಯಾಪಾರಿ— ಸರಿ! ಹತ್ತೂಕಾಲಾಣೆಯನ್ನೂ ಕೂಡ, ಕೊಡುತ್ತೀರೋ, [ಇಲ್ಲವೋ]?

ಗಿರಾಕಿ— ಇಲ್ಲ! ಇಲ್ಲ!

ಜವಳಿ ವ್ಯಾಪಾರಿ— ಸರಿ! ಬನ್ನಿ, ಕುಳಿತುಕೊಳ್ಳಿ! ಎಷ್ಟು ಗಜ ಕೊಳ್ಳುವಿರಿ?

ಗಿರಾಕಿ— ಒಂದೂಕಾಲು ಗಜ!

ಜವಳಿ ವ್ಯಾಪಾರಿ— ರೀ! ಸ್ವಲ್ಪ ಹೆಚ್ಚಾಗಿ ತೆಗೆದುಕೊಳ್ಳಿರೀ!

ಗಿರಾಕಿ — ಆಗಲಿ! [ಈಗ] ನಮೂನೆ[ಗಾಗಿ] ತೆಗೆದುಕೊಂಡು ಹೋಗುತ್ತೇವೆ. ಈಗ ನಿಮ್ಮ ಅಂಗಡಿಯನ್ನು ನೋಡಿದ್ದಾಯಿತಲ್ಲಾ! ಮತ್ತೆ, ಯಾವಾಗಲಾದರೂ ಬಂದಾಗ ಬಹಳ ಕೊಳ್ಳುತ್ತೇವೆ.

ಜವಳಿ ವ್ಯಾಪಾರಿಯು ಅಳೆಯುತ್ತಿರುವಾಗ [ಗಜ ಕಡ್ಡಿಯನ್ನು] ಸ್ವಲ್ಪ ಜಾರಿಸಿದನು!

ಗಿರಾಕಿ— ರೀ ನೋಡ್ರೀ! ನೀವು ಹೇಗೆ ಅಳೀತಿದ್ದೀರಿ?

ಜವಳಿ ವ್ಯಾಪಾರಿ— ನಿಮಗೆ ನಂಬಿಕೆ ಇಲ್ಲವೋ? ನಾವು ಸಾಹುಕಾರರೋ, ಇಲ್ಲಾ ತಮಾಷೆ[ಗಾರರೋ]? ನಾವೆಂದಿಗಾದರೂ ಸುಳ್ಳು ಹೇಳುತ್ತೇವೇನು? ಅಥವಾ ಮೋಸ$ ಮಾಡುತ್ತೇವೇನು?

$ **ಇದು ಭಾವಾನುವಾದ ಮಾತ್ರ; ಶಬ್ದಾನುವಾದವಲ್ಲ.**

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಿರಾಕಿ— ಹೌದ್ರೀ! ನೀವು ದೊಡ್ಡ ಸತ್ಯವಂತರು!! ಒಂದು ರೂಪಾಯಿ, ಎಂದು ಹೇಳಿ, ಹತ್ತಾಣೆಯ ತನಕ ಇಳಿದಿರಿ$. ಆರಾಣೆ ಕಮ್ಮಿಯಾಯಿತು! ಬಹಳ ಆಣೆಗಳನ್ನಿಟ್ಟರಿ!

ಜವಳಿ ವ್ಯಾಪಾರಿ— ಆಹಾ! ಹಾಹಾ! ರ್‍ರೀ! ನೀವು ದೊಡ್ಡ ಸತ್ಯವಂತರಲ್ಲವೇ! ಆರಾಣೆ, ಎಂದು ಹೇಳಿ, ಹತ್ತಾಣೆಯ ತನಕ ಕೊಡಲು ತಯಾರಾದಿರಿ! ಅನೇಕ ಆಣೆಗಳನ್ನು ಇಟ್ಟು ಇಟ್ಟು ಬಂದಿರಿ!

ಸುಳ್ಳಿಲ್ಲದೇ ವ್ಯಾಪಾರವು ಆಗಲಾರದು!

ಗಿರಾಕಿ — ನೀನು ದೊಡ್ಡ ಸುಳ್ಳುಗಾರ!

ಜವಳಿ ವ್ಯಾಪಾರಿ— ನೀನಲ್ಲವೇನು? ಏಕೆಂದರೆ, ಒಂದು ಗಜ ಬಟ್ಟೆಗಾಗಿ ಯಾವನಾದರೂ ಒಳ್ಳೆಯ ಮನುಷ್ಯನು ಇಷ್ಟೊಂದು ಜಗಳ ಮಾಡುತ್ತಾನೇನು?

ಗಿರಾಕಿ— ನೀನು ಸುಳ್ಳುಗಾರ! ನಿಮ್ಮಪ್ಪ [ಸುಳ್ಳುಗಾರ]!! ನಮ್ಮ ಏಳು ತಲೆಮಾರಿನಲ್ಲಿ ಯಾವನಾದರೂ ಸುಳ್ಳುಗಾರನಾಗಿದ್ದನೇನು?

ಜವಳಿ ವ್ಯಾಪಾರಿ— ನೀನೂ ಸುಳ್ಳುಗಾರ! ನಿನ್ನ ಏಳು ತಲೆಮಾರಿನವರೂ ಸುಳ್ಳುಗಾರರು!

ಗಿರಾಕಿಯು ಚಪ್ಪಲಿ ಎತ್ತಿಕೊಂಡು, [ವ್ಯಾಪಾರಿಗೆ] **ಒಂದು** ಕೊಟ್ಟನು!

ಜವಳಿ ವ್ಯಾಪಾರಿಯು ಥಕ್ಕನೆ ಗಜಕಡ್ಡಿಯಿಂದ ಬಾರಿಸಿದನು!

ನೆರೆಹೊರೆಯ ಅಂಗಡಿಯವರು ಹೇಗೋ-ಹೇಗೋ [ಜಗಳವನ್ನು] ಬಿಡಿಸಿದರು.

ಜವಳಿ ವ್ಯಾಪಾರಿ— ಹೋಗೋ-ಹೋಗೋ! ತೊಲಗು$! ನಿನ್ನಂತಹ ಲಕ್ಷಾಂತರ [ಮಂದಿ]ಯನ್ನು ನೋಡಿದ್ದೇವೆ.

ಗಿರಾಕಿ— ಹೋಗೋ ಲೇ! ನಿನ್ನಂತಹ, ಜೂಜುಗಾರ, ಕಳ್ಳ, ಹರಕು ಬಂಡವಾಳದ ಅಂಗಡಿಯವನನ್ನು ನಾನು ಕೋಟ್ಯಾಂತರ+ ನೋಡಿದ್ದೇನೆ.

ನೆರೆ-ಹೊರೆಯವರು— ಅಲ್ಲೀ! ಸುಳ್ಳಿಲ್ಲದೇ ಎಂದಾದರೂ ವ್ಯಾಪಾರವಾಗುತ್ತದೇನು?

ರೀ, ನೀವು ಹೋಗ್ರೀ! ನಿಮ್ಮ ಅಂಗಡಿಯಲ್ಲಿ ಕುಳಿತುಕೊಳ್ಳಿ!

ಮತ್ತು **ನೀವು**! ನಿಮ್ಮ ಮನೆಗೆ ಹೋಗಿ!

ಜವಳಿ ವ್ಯಾಪಾರಿ— ಇವನು ಬಹಳ ದುಷ್ಟ ಮನುಷ್ಯ!

ಗಿರಾಕಿ— ಲೋ! ಬಾಯಿ ಬಿಗಿಹಿಡಿದು ಮಾತಾಡು!

$ ಇದು ಭಾವಾನುವಾದ ಮಾತ್ರ; ಶಬ್ದಾನುವಾದವಲ್ಲ.

\+ ಕೋಟ್ಯಂತರ, ಎಂಬುದು ಶುದ್ಧಶಬ್ದ, ಆದರೆ, ಇಲ್ಲಿ ಜನಸಾಧಾರಣರು ಬಳಸುವ ಶಬ್ದವನ್ನು ಉಪಯೋಗಿಸಿದ್ದೇವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಜವಳಿ ವ್ಯಾಪಾರಿ— ಏನು ಮಾಡ್ತೀಯೋ, ನೀನೂ?

ಗಿರಾಕಿ— ನಾನೇನನ್ನು ಮಾಡಿದ್ದೆನೋ, ಅದನ್ನು ನೀನು ನೋಡಿಕೊಂಡೆಯಲ್ಲಾ?++ ಮತ್ತು ಇನ್ನೂ ಸ್ವಲ್ಪ ನೋಡಬೇಕೆಂದಿದ್ದರೆ, ತೋರಿಸಲಾ?

ಜವಳಿ ವ್ಯಾಪಾರಿ — ನೀನೂ ಮತ್ತೆ ಗಜಕಡ್ಡಿಯಿಂದ ಹೊಡೆಸಿಕೊಳ್ಳಬೇಕೋ?

ಪುನಃ ಇಬ್ಬರೂ ಕಾದಾಡಲು ಓಡಿ ಬಂದರು. $

ಹೇಗೆ-ಹೇಗೋ ಜನರು [ಅವರಿಬ್ಬರನ್ನೂ] ಬೇರೆ-ಬೇರೆ ಮಾಡಿದರು!

[ನೀತಿ]

ಹೀಗೆಯೇ, ಎಲ್ಲೆಡೆಯೂ ಸುಳ್ಳುಗಾರರಿಗೆ ದುರ್ದಶೆ ಉಂಟಾಗುತ್ತದೆ!

ದೃಷ್ಟಾಂತ-[12]

(ಧಾರ್ಮಿಕರ ವ್ಯಾಪಾರ)

ಗಿರಾಕಿ — ಶಾಲಿನ ಬೆಲೆ ಏನು?

ಜವಳಿ ವ್ಯಾಪಾರಿ— ಐನೂರು ರೂಪಾಯಿ!

ಗಿರಾಕಿ — ಸರಿ! ತೆಗೆದುಕೊಳ್ಳಿ.

ಜವಳಿ ವ್ಯಾಪಾರಿ— ತೆಗೆದುಕೊಳ್ಳಿ ಶಾಲು!

ದೃಷ್ಟಾಂತ-[13]

[ಸತ್ಯವಂತ ಜವಳಿ ವ್ಯಾಪಾರಿ ಮತ್ತು ಸುಳ್ಳುಗಾರ ಗಿರಾಕಿಯ ಚೌಕಾಸಿ]

ಸತ್ಯವಂತನಾದ [ಜವಳಿ] ಅಂಗಡಿಯವನ ಬಳಿಗೆ ಯಾವನೋ ಸುಳ್ಳುಗಾರ ಗಿರಾಕಿಯು ಹೋದನು. ಮತ್ತು—

'ಈ ಶಾಲಿಗೆ ಏನು ತೆಗೆದುಕೊಳ್ಳುವಿರಿ?', ಎಂದು ಕೇಳಿದನು.

ಜವಳಿ ವ್ಯಾಪಾರಿ — ಇನ್ನೂರೈವತ್ತು ರೂಪಾಯಿ!

ಗಿರಾಕಿ— ಇನ್ನೂರು ತೆಗೆದುಕೊಳ್ಳಿ.

ವ್ಯಾಪಾರಿ — ಹೋಗಿ! ಇಲ್ಲಿ ನಿಮಗಾಗಿ ವ್ಯಾಪಾರವಿಲ್ಲ.

++ ಎಂದರೆ, ಚಪ್ಪಲಿ ಏಟು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಿರಾಕಿ — ಅಲ್ರೀ! ಸ್ವಲ್ಪ ಕಡಿಮೆ ಮಾಡಿ^{S}!

ವ್ಯಾಪಾರೀ— ಇಲ್ಲಿ ಮೋಸದ^{S} ವ್ಯವಹಾರವಿಲ್ಲ. ಹೆಚ್ಚು ಮಾತಾಡಬೇಡಿ. ಕೊಳ್ಳುವುದಾದರೆ, ಕೊಂಡು ಕೊಳ್ಳಿರಿ, ಇಲ್ಲದಿದ್ದರೆ, ಹೊರಟು ಹೋಗಿ!

ಗಿರಾಕಿಯು ಇತರ ಬಹಳ ಅಂಗಡಿಗಳಲ್ಲಿ ಸರಕನ್ನು ನೋಡಿ, ಬೆಲೆ ತಿಳಿದು, ಮತ್ತೆ ಅದೇ [ಅಂಗಡಿಗೆ] ಬಂದು, ಇನ್ನೂರ ಐವತ್ತು ರೂಪಾಯಿಯನ್ನು ಕೊಟ್ಟು, ಶಾಲನ್ನು ತೆಗೆದುಕೊಂಡು ಹೋದನು.

ದೃಷ್ಟಾಂತ- [14]

[ಸತ್ಯವಂತ ಗಿರಾಕಿ ಮತ್ತು ಮೋಸಗಾರ ಜವಳಿ ವ್ಯಾಪಾರಿಯ ಚೌಕಾಸಿ]

ಸತ್ಯವಂತನಾದ ಗಿರಾಕಿಯು ಮೋಸಗಾರನಾದ [ಜವಳಿ] ಅಂಗಡಿಯವನ ಬಳಿಗೆ ಹೋಗಿ— 'ಈ ಪೀತಾಂಬರಕ್ಕೆ ಏನು ತೆಗೆದುಕೊಳ್ಳುವಿರಿ?', ಎಂದು ಕೇಳಿದನು.

ಜವಳಿ ವ್ಯಾಪಾರಿ— ಇಪ್ಪತ್ತೈದು ರೂಪಾಯಿ!

ಗಿರಾಕಿ— [ಇದು] ಹನ್ನೆರಡು ರೂಪಾಯಿಯದ್ದಾಗಿದೆ. ಕೊಡುವುದಾದರೆ ಕೊಡಿ!

ಎಂದು ಹೇಳಿ, ಹೊರಡತೊಡಗಿದನು.

ಜವಳಿ ವ್ಯಾಪಾರಿ— ರೀ! ಸ್ವಾಮಿ! ಹದಿನೆಂಟು ಕೊಡಿ.

ಗಿರಾಕಿ— ಇಲ್ಲ!

ಜವಳಿ ವ್ಯಾಪಾರಿ — ಹದಿನಾಲ್ಕು ಕೊಡಿ.

ಗಿರಾಕಿ — ಇಲ್ಲ!

ಜವಳಿ ವ್ಯಾಪಾರಿ— ಹದಿಮೂರು ಕೊಡಿ.

ಗಿರಾಕಿ — ಇಲ್ಲ!

ಜವಳಿ ವ್ಯಾಪಾರಿ— ಸರಿ! ಹಾಗಾದರೆ, ಹನ್ನೆರಡೂವರೆಯನ್ನೇ ಕೊಡಿ!

ಗಿರಾಕಿ— ಇಲ್ಲ!

ಜವಳಿ ವ್ಯಾಪಾರಿ— ಹನ್ನೆರಡೂ ಕಾಲು ಕೊಡಿ.

ಗಿರಾಕಿ — ಇಲ್ಲ!

ಜವಳಿ ವ್ಯಾಪಾರಿ — ಸರಿ ಕಣ್ರೀ! ಹನ್ನೆರಡಕ್ಕೇ ತೆಗೆದುಕೊಂಡು ಹೋಗಿ!

ಗಿರಾಕಿ— ಕೊಡಿ! ರೂಪಾಯಿ ತೆಗೆದುಕೊಳ್ಳಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ನೀತಿ)

ಇಂತಹ ಧಾರ್ಮಿಕರಿಗೆ ಯಾವಾಗಲೂ ಲಾಭ ಉಂಟಾಗುತ್ತದೆ. ಮತ್ತು ಸುಳ್ಳುಗಾರರಿಗೆ ದುರ್ದಶೆಯುಂಟಾಗಿ, ದಿವಾಳಿಯೇ ಎದ್ದು ಹೋಗುತ್ತಾರೆ!

ಆದುದರಿಂದ, ಸುಳ್ಳು [ವ್ಯವಹಾರ]ವನ್ನು ಎಲ್ಲಾ ರೀತಿಯಿಂದಲೂ ಬಿಟ್ಟು, ಸತ್ಯದಿಂದಲೇ ಎಲ್ಲಾ ವ್ಯವಹಾರಗಳನ್ನೂ ಮಾಡುವುದು ಮನುಷ್ಯರೆಲ್ಲರಿಗೂ ಅತ್ಯಂತ ಉಚಿತವಾಗಿದೆ. ಇದರಿಂದ, ಧರ್ಮ, ಅರ್ಥ, ಕಾಮ, ಮತ್ತು ಮೋಕ್ಷವನ್ನು ಪಡೆದುಕೊಂಡು, ಯಾವಾಗಲೂ ಆನಂದದಲ್ಲಿರಬಹುದು.

(ಆತ್ಮಾ-ಪರಮಾತ್ಮನ ಸಾಕ್ಷಿಯ ಅರಿವಿಲ್ಲದೇ ಸತ್ಯವ್ಯವಹಾರವಿಲ್ಲ)

ಪ್ರಶ್ನೆ: ಮನುಷ್ಯನ ಆತ್ಮವು ಯಾವಾಗಲೂ ಧರ್ಮ[ಯುಕ್ತ ಅಥವಾ] ಅಧರ್ಮಯುಕ್ತವಾಗಿ ಯಾವ ಯಾವ ಕರ್ಮದಿಂದ ಆಗುತ್ತದೆ?

ಉತ್ತರ: ಎಲ್ಲಿನ ತನಕ ಮನುಷ್ಯನು ಸರ್ವಾಂತರ್ಯಾಮಿಯೂ, ಸರ್ವದ್ರಷ್ಟನೂ, ಸರ್ವವ್ಯಾಪಕನೂ, ಸರ್ವಕರ್ಮಗಳ ಸಾಕ್ಷಿಯೂ ಆದ ಪರಮಾತ್ಮನಿಗೆ ಹೆದರುವುದಿಲ್ಲವೋ; [ಅಲ್ಲಿನ ತನಕ ಧರ್ಮಾತ್ಮನಾಗಲಾರನು].

ಏಕೆಂದರೆ, ಪರಮಾತ್ಮನಿಗೆ ಗೊತ್ತಿರದಂತಹ ಯಾವ ಕೆಲಸವೂ ಇಲ್ಲ!

ಸತ್ಯವಿದ್ಯೆ, ಸುಶಿಕ್ಷಣ, ಸತ್ಪುರುಷರ ಸಂಗ, ಉದ್ಯೋಗ, ಜಿತೇಂದ್ರಿಯತ್ವ, ಬ್ರಹ್ಮಚರ್ಯ ಮೊದಲಾದ ಶುಭಗುಣಗಳಿಂದ ಕೂಡಿರುವುದು; ಮತ್ತು ಲಾಭಕ್ಕೆ ಅನುಸಾರವಾಗಿ ವ್ಯಯ ಮಾಡುವುದರಿಂದ, **ಧರ್ಮಾತ್ಮ**ನಾಗುತ್ತಾನೆ.

ಮತ್ತು ಯಾವನು ಇದಕ್ಕೆ ವಿಪರೀತವಾಗಿರುತ್ತಾನೋ, ಅವನು ಎಂದಿಗೂ **ಧರ್ಮಾತ್ಮ**ನಾಗಲಾರನು.

ಏಕೆಂದರೆ, ಯಾವನು ರಾಜನೇ ಮೊದಲಾದ ಅಲ್ಪಜ್ಞ ಮನುಷ್ಯರಿಗೆ ಹೆದರುತ್ತಾನೋ, ಮತ್ತು ಪರಮೇಶ್ವರನಿಗೆ ಹೆದರುವುದಿಲ್ಲವೋ, ಅವನು ಹೇಗೆ ಧರ್ಮಾತ್ಮನಾಗಬಲ್ಲನು?

ಏಕೆಂದರೆ, ರಾಜಾ ಮೊದಲಾದವರ ಎದುರಿಗೆ ಅಧರ್ಮಯುಕ್ತವಾದ ಬಾಹ್ಯ ಚೇಷ್ಟೆಗಳನ್ನು ಮಾಡುವುದಕ್ಕೆ ಭಯ ಉಂಟಾಗುವುದು [ಸಹಜ]! ಆದರೆ, ಆತ್ಮಾ ಮತ್ತು ಮನಸ್ಸಿನಿಂದ ಕೆಟ್ಟ ಚೇಷ್ಟೆಗಳನ್ನು ಮಾಡುವುದರಲ್ಲಿ [ಅವರಿಗೆ] ಸ್ವಲ್ಪವೂ ಭಯವಾಗುವುದಿಲ್ಲ!

ಏಕೆಂದರೆ, ಇವರು ಒಳಗಿನ ಕರ್ಮಗಳನ್ನು ತಿಳಿಯಲಾರರು.

ಆದುದರಿಂದ, ಆತ್ಮನ, ಹಾಗೂ ಮನಸ್ಸಿನ ನಿಯಂತ್ರಣ ಮಾಡುವ **ರಾಜನು** ಮೊದಲನೆಯದಾಗಿ **ಆತ್ಮಾ** ಆಗಿರುತ್ತಾನೆ; ಮತ್ತು ಎರಡನೆಯವನು **ಪರಮೇಶ್ವರನೇ**

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆಗಿರುತ್ತಾನೆ; [ಬೇರೆ] ಮನುಷ್ಯನಲ್ಲ!*

ಮತ್ತು ಅವರು ಏಕಾಂತದಲ್ಲಿ ಯಾವಾಗ$ ರಾಜನೇ ಮೊದಲಾದ ಮನುಷ್ಯರನ್ನು ಕಾಣುವುದಿಲ್ಲವೋ, [ಆಗ] ಅಲ್ಲಿ ಕಳ್ಳತನ ಮೊದಲಾದ ಬಾಹ್ಯದುಷ್ಟ ಕರ್ಮಗಳನ್ನು ಮಾಡುವುದರಲ್ಲಿ ಸ್ವಲ್ಪವೂ ಶಂಕೆ ಇಡುವುದಿಲ್ಲ.

ದೃಷ್ಟಾಂತ-[15]

(ಪರಮಾತ್ಮನ ಸಾಕ್ಷಿಯ ಬಗ್ಗೆ ಪರೀಕ್ಷೆ)

ಒಬ್ಬ ಧಾರ್ಮಿಕ ವಿದ್ವಾಂಸನ ಬಳಿ ಓದುವುದಕ್ಕಾಗಿ ಇಬ್ಬರು ಹೊಸ ವಿದ್ಯಾರ್ಥಿಗಳು ಬಂದು —'ತಾವು ನಮಗೆ [ವಿದ್ಯೆ] ಕಲಿಸಿ', ಎಂದು ಕೇಳಿಕೊಂಡರು. $

ವಿದ್ವಾಂಸ — ಒಳ್ಳೆಯದು! ನಾವು ನಿಮಗೆ ವಿದ್ಯೆ ಕಲಿಸುವೆವು. ಆದರೆ, ಯಾವುದನ್ನು ನಾವು [ಮಾಡಲು] ಹೇಳುತ್ತೇವೋ, ಆ ಕೆಲಸವನ್ನು ನೀವಿಬ್ಬರೂ ಮಾಡಿ ಬನ್ನಿ.

'ಈ ಒಬ್ಬೊಬ್ಬ ಹುಡುಗನನ್ನು ಏಕಾಂತದಲ್ಲಿ ಕರೆದುಕೊಂಡು ಹೋಗಿ, ಎಲ್ಲಿ ಯಾವನೂ ನೋಡುವವನಿಲ್ಲವೋ, ಅಲ್ಲಿ, ಇವನ ಕಿವಿಯನ್ನು ಹಿಡಿದು, ನಾಲ್ಕೆರಡು ಬಾರಿ ಬೇಗ-ಬೇಗನೆ 'ಉಠಾ-ಬೈಠಕ್ಕು' ಮಾಡಿಸಿ, ನಿಧಾನವಾಗಿ ಒಂದು ಏಟು ಕೆನ್ನೆಗೆ ಹೊಡೆದು ಬಿಡಿ'.

ಇಬ್ಬರೂ ಇಬ್ಬರು [ಹುಡುಗರನ್ನು] ಕರೆದುಕೊಂಡು ಹೊರಟರು.

ಒಬ್ಬನು ನಾಲ್ಕೂ ಕಡೆಗೂ ನೋಡಿದನು — 'ಇಲ್ಲಿ ಯಾವನೂ ನೋಡುತ್ತಿಲ್ಲ!'

ಹೇಳಿದ ಕೆಲಸವನ್ನು ಮಾಡಿ, ಕೂಡಲೇ ಹೊರಟು ಬಂದನು.

ಇನ್ನೊಬ್ಬನು ಪಂಡಿತರ ಮಾತಿನ ಅಭಿಪ್ರಾಯವನ್ನು [ತಿಳಿಯಲು] ವಿಚಾರ ಮಾಡ ತೊಡಗಿದನು—'ನನ್ನನ್ನು ಹುಡುಗನೂ ಮತ್ತು ನಾನು ಹುಡುಗನನ್ನೂ ಕೂಡ, ನೋಡುತ್ತಿದ್ದೇವಲ್ಲಾ! ಮತ್ತೆ, ಆ ಕೆಲಸವನ್ನು ಹೇಗೆ ಮಾಡಬಲ್ಲೆನು?'

ಪಂಡಿತರ ಬಳಿಗೆ ಬಂದನು!

ಆಗ, ಯಾವನು ಮೊದಲು ಬಂದಿದ್ದನೋ, ಅವನನ್ನು ಪಂಡಿತರು — 'ನಾವು ಏನನ್ನು ಹೇಳಿದ್ದೆವೋ, ಅದನ್ನು ನೀನು ಮಾಡಿ ಬಂದೆಯಾ?', ಎಂದು ಕೇಳಿದರು.

ಅವನು — 'ಆಯಿತು', ಎಂದು ಹೇಳಿದನು.

---

* ಶರೀರದ ಆಂತರಿಕ, ಮಾನಸ, ಹಾಗೂ ಆತ್ಮಿಕ ಚೇಷ್ಟೆಗಳನ್ನು ತತ್ರಸ್ಥ ಆತ್ಮಾ, ಮತ್ತು ಪರಮೇಶ್ವರ ಮಾತ್ರ ತಿಳಿಯಬಲ್ಲರು. ಇತರ ಮನುಷ್ಯರು ಇನ್ನೊಬ್ಬರ ಕೇವಲ ಬಾಹ್ಯ ಚೇಷ್ಟೆಗಳನ್ನು ಮಾತ್ರ ತಿಳಿಯಬಲ್ಲರು, ಎಂದರ್ಥ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇನ್ನೊಬ್ಬನನ್ನು — 'ನೀನೂ ಕೂಡ, ಮಾಡಿ ಬಂದೆಯೋ, ಇಲ್ಲವೋ?', ಎಂದು ಕೇಳಿದರು.

ಅವನು— ಇಲ್ಲ! ಏಕೆಂದರೆ, ತಾವು ನನಗೆ ಎಲ್ಲಿ ಯಾವನೂ ನೋಡುವವನಿಲ್ಲವೋ, ಅಲ್ಲಿ ಈ ಕೆಲಸವನ್ನು ಮಾಡಬೇಕು', ಎಂದು ಹೇಳಿದ್ದಿರಿ. ಆದರೆ, ಅಂತಹ ಜಾಗವು ನನಗೆ ಎಲ್ಲಿಯೂ ಸಿಗಲಾರದು. [ಏಕೆಂದರೆ,] ಮೊದಲಾಗಿ, ನಾನು ಈ ಹುಡುಗನನ್ನೂ, ಮತ್ತು [ಎರಡನೆಯದಾಗಿ], ಹುಡುಗನು ನನ್ನನ್ನೂ ನೋಡುತ್ತಲೇ ಇದ್ದೆವು! *

ಪಂಡಿತರು— 'ನೀನು ಬುದ್ಧಿವಂತನಾಗಿದ್ದೀಯೆ, ಹಾಗೂ ಧಾರ್ಮಿಕನಾಗಿದ್ದೀಯೆ, ನನ್ನಿಂದ ವಿದ್ಯೆ ಕಲಿ', ಎಂದು ಹೇಳಿದರು.

ಇನ್ನೊಬ್ಬನಿಗೆ — 'ನೀನು ವಿದ್ಯೆ ಕಲಿಯಲು ಯೋಗ್ಯನಲ್ಲ! ಇಲ್ಲಿಂದ ಹೊರಟು ಹೋಗು', ಎಂದು ಹೇಳಿದರು.

(ನೀತಿ)

ಹೀಗೆ, ಯಾವುದನ್ನು ಆತ್ಮಾ ಮತ್ತು ಪರಮಾತ್ಮಾ ನೋಡುವುದಿಲ್ಲವೋ, ಅಂತಹ ಸ್ಥಾನ ಅಥವಾ ಕರ್ಮ ಯಾವುದಾದರೂ ಇದೆಯೇನು?

ಯಾವ ಮನುಷ್ಯರು ಈರೀತಿಯಾಗಿ ಆತ್ಮನ, ಮತ್ತು ಪರಮಾತ್ಮನ ಸಾಕ್ಷಿಗೆ ಅನುಕೂಲವಾಗಿ ಕರ್ಮ ಮಾಡುತ್ತಾರೋ, ಅವರೇ 'ಧರ್ಮಾತ್ಮಾ', ಎಂದು ಕರೆಯಲ್ಪಡುತ್ತಾರೆ.

(ಜ್ಞಾನವಂತರೇ ಸತ್ಯದಲ್ಲಿ ದೃಢರಾಗಿರಬಲ್ಲರು)

ಪ್ರಶ್ನೆ: ಮನುಷ್ಯರೆಲ್ಲರಿಗೂ ವಿದ್ವಾಂಸರೂ, ಅಥವಾ ಧರ್ಮಾತ್ಮರೂ ಆಗುವುದು ಸಂಭವವಾಗುತ್ತದೋ, ಅಥವಾ ಇಲ್ಲವೋ?

ಉತ್ತರ: [ಎಲ್ಲರೂ] ವಿದ್ವಾಂಸರಾಗುವುದಂತೂ ಸಂಭವವಿಲ್ಲ; ಆದರೆ, ಧರ್ಮಾತ್ಮರಾಗಬಯಸಿದರೆ, ಎಲ್ಲರೂ ಆಗಬಹುದು.

ಅವಿದ್ವಾಂಸ ಜನರು ಇತರರನ್ನು ಧರ್ಮದಲ್ಲಿ ದೃಢರಾಗಿರುವಂತೆ ಮಾಡಲಾರರು.

ಆದರೆ, ವಿದ್ವಾಂಸರು [ಸ್ವತಃ] ಧಾರ್ಮಿಕರಾಗಿ, ಅನೇಕ ಮನುಷ್ಯರನ್ನೂ ಕೂಡ, ಧಾರ್ಮಿಕರನ್ನಾಗಿ ಮಾಡಬಲ್ಲರು.

ಮತ್ತು ಯಾವನಾದರೂ ಧೂರ್ತ ಮನುಷ್ಯನು ತಿಳಿವಳಿಕೆ ಇಲ್ಲದವರನ್ನು ದಾರಿ ತಪ್ಪಿಸಿ, ಅಧರ್ಮದಲ್ಲಿ ಪ್ರವೃತ್ತರಾಗುವಂತೆ ಮಾಡಬಲ್ಲನು. ಆದರೆ, ತಿಳಿವಳಿಕೆಯುಳ್ಳವರನ್ನು ಅಧರ್ಮದಲ್ಲಿ ಎಂದಿಗೂ ನಡೆಯಿಸಲಾರನು.

---

* ಕನಕದಾಸರ ಕಥೆಯೂ ಇದೇ ರೀತಿಯದಾಗಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಏಕೆಂದರೆ, ಹೇಗೆ [ಕಣ್ಣಿನಿಂದ] ನೋಡುತ್ತಿರುವ ಮನುಷ್ಯನು ಬಾವಿಯಲ್ಲಿ ಎಂದಿಗೂ ಬೀಳುವುದಿಲ್ಲವೋ, ಆದರೆ, ಕುರುಡನು ಬೀಳುವ ಸಂಭವ ಇರುತ್ತದೋ, ಹಾಗೆ, ತಿಳಿವಳಿಕೆಯುಳ್ಳವರು ಸತ್ಯಾಸತ್ಯಗಳನ್ನು ತಿಳಿದು, ಅದರಲ್ಲಿ ದೃಢರಾಗಿರಬಲ್ಲರು. ಆದರೆ, ತಿಳಿವಳಿಕೆ ಇಲ್ಲದವರು ಸರಿ ಸರಿಯಾಗಿ ಸ್ಥಿರವಾಗಿರಲಾರರು.

ದೃಷ್ಟಾಂತ - [16]

[ಮೂರ್ಖರಾಜನ ಲಂಚಕೋರ ಅಧಿಕಾರಿಗಳ ಪ್ರಪಂಚ]

ಯಾವನೋ ಒಬ್ಬ ತಿಳಿವಳಿಕೆ ಇಲ್ಲದ ರಾಜನಿದ್ದನು. ಅವನ ರಾಜ್ಯದ ಯಾವುದೋ ಗ್ರಾಮದಲ್ಲಿ ಯಾವನೋ ಮೂರ್ಖನಾದ ಭಿಕ್ಷುಕ ಬ್ರಾಹ್ಮಣನಿದ್ದನು.

ಅವನು ಹೆಂಡತಿಯು — 'ಈ ದಿನಗಳಲ್ಲಿ ಊಟ ಕೂಡ, ಸಿಕ್ಕುತ್ತಿಲ್ಲ; ಬಹಳ ಕಷ್ಟವಾಗಿದೆ! ನೀವು ಮೊದಲು ದಾನಾಧ್ಯಕ್ಷರ ಬಳಿಗೆ ಹೋಗಿ! ಅವರು ರಾಜರ ಬಳಿಗೆ ನಿಮ್ಮನ್ನು ಕರೆದುಕೊಂಡು ಹೋಗಿ, ಸ್ವಲ್ಪ ಜಪ-ಅನುಷ್ಠಾನಗಳನ್ನು ಮಾಡಿಸುವರು', ಎಂದು ಹೇಳಿದಳು.

ಬ್ರಾಹ್ಮಣನು[$] ಹಾಗೆಯೇ ಮಾಡಿದನು.

(ಮೊದಲನೆಯ ಮೂರ್ಖಯಾಚಕನ ಜಪ)

ಯಾವಾಗ ಅವನು ದಾನಾಧ್ಯಕ್ಷನ ಬಳಿಗೆ ಹೋಗಿ — 'ತಾವು ನನ್ನ ಜೀವನೋಪಾಯಕ್ಕಾಗಿ ಸ್ವಲ್ಪ[ಸಹಾಯ] ಮಾಡಿ ಬಿಡಿರಿ', ಎಂದು ಹೇಳಿದನೋ, ಆಗ—

ದಾನಾಧ್ಯಕ್ಷ— ನನಗೆ ಏನು ಕೊಡುತ್ತೀಯೆ?

ಯಾಚಕ — ನೀವು ಏನು ಕೇಳುತ್ತೀರೋ, [ಅದು]!

ದಾನಾಧ್ಯಕ್ಷ— 'ಅರ್ಧಮರ್ಧಂ ಸ್ವಾಹಾ!'*

ಯಾಚಕ— ಸ್ವಾಮಿ! ನೀನು ಏನು ಹೇಳಿದಿರಿ, ಎಂದು ನನಗೆ ಗೊತ್ತಾಗಲಿಲ್ಲ!

ದಾನಾಧ್ಯಕ್ಷ — ನೀನು ಅರ್ಧವನ್ನು ನಮಗೆ ಕೊಟ್ಟು, [ಉಳಿದ] ಅರ್ಧವನ್ನು ನೀನು ತೆಗೆದುಕೊಳ್ಳುವೆಯಾದರೆ, ನಾವು ನಿನಗೆ ಜೀವನೋಪಾಯ ಕಲ್ಪಿಸಬಲ್ಲೆವು.

ಯಾಚಕ— ಹೇಗೆ ನಿಮ್ಮ ಇಚ್ಛೆಯಿದೆಯೋ, ಹಾಗೆ ಮಾಡಿ!

ದಾನಾಧ್ಯಕ್ಷ— ಸರಿ! ರಾಜನ ಬಳಿಗೆ ನಡಿ!

ಯಾಚಕ — ನಡೆಯಿರಿ!

---

* **ಅರ್ಥ:- ಅರ್ಧ-ಅರ್ಧವನ್ನು ಕಬಳಿಸಿಬಿಡೋಣ!**

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

[ರಾಜ] ಸಭೆಯು ಹೊಗಳುಭಟ್ಟರಿಂದ ತುಂಬಿತ್ತು!

ಇಬ್ಬರೂ ಅಲ್ಲಿಗೆ ಬಂದರು.

ದಾನಾಧ್ಯಕ್ಷನು [ರಾಜನಿಗೆ]— 'ಇವನು ಗೋ-ಬ್ರಾಹ್ಮಣ ಆಗಿದ್ದಾನೆ. ಇವನಿಗೆ ಸ್ವಲ್ಪ ಜೀವನೋಪಾಯವನ್ನು ದಯವಿಟ್ಟು ಕಲ್ಪಿಸಿ. ಇವನು ತಮ್ಮ [ಕಡೆಯಿಂದ] ಜಪ-ಅನುಷ್ಠಾನ ಮಾಡುತ್ತಾ ಹೋಗುವನು', ಎಂದು ಹೇಳಿದನು.

ರಾಜಾ— ಸರಿ! ನೀವು ಹೇಗೆ ಹೇಳುತ್ತೀರೋ, [ಹಾಗೆ]!

ದಾನಾಧ್ಯಕ್ಷ — ತಿಂಗಳ ಸಂಬಳ ಹತ್ತು ರೂಪಾಯಿ ಇರಬೇಕು.

ರಾಜಾ— ಸರಿ, ಆಗಲಿ!

ದಾನಾಧ್ಯಕ್ಷ — ಆರು ತಿಂಗಳ [ಮುಂಗಡ ಹಣ] ಮೊದಲು ಸಿಗಬೇಕು.

ರಾಜಾ — ಸರಿ! ಕೋಷಾಧ್ಯಕ್ಷರೇ! ಇವನಿಗೆ ಆರು ತಿಂಗಳ [ವೇತನವನ್ನು] ಸೇರಿಸಿ, ಕೊಟ್ಟು ಬಿಡಿ.

ಕೋಷಾಧ್ಯಕ್ಷ — ಅಪ್ಪಣೆಯಂತೆ!

ಯಾವಾಗ ಯಾಚಕನು ಹಣ$ ತೆಗೆದುಕೊಳ್ಳಲು ಹೋದನೋ, ಆಗ ಕೋಷಾಧ್ಯಕ್ಷನು— 'ನನಗೆ ಏನು ಕೊಡುತ್ತೀಯೆ'?, ಎಂದು ಕೇಳಿದನು.

ಯಾಚಕ — ನೀವೂ ಕೂಡ, ಒಂದೆರಡು [ರೂಪಾಯಿ] ತೆಗೆದುಕೊಳ್ಳಿ!

ಕೋಷಾಧ್ಯಕ್ಷ — ಛೀ! ಛೀ! ನಾವು ಹತ್ತು ರೂಪಾಯಿಗಿಂತ ಕಮ್ಮಿ ತೆಗೆದುಕೊಳ್ಳುವುದಿಲ್ಲ! ಇಲ್ಲದಿದ್ದರೆ, ಇಂದು ಹಣ ಸಿಗುವುದಿಲ್ಲ. ಮತ್ತೆ ಬಾ!

ಯಾವಾಗ ದಾನಾಧ್ಯಕ್ಷನು— 'ಬ್ರಾಹ್ಮಣನನ್ನು$ ನಮ್ಮ ಬಳಿಗೆ ಕರೆದುಕೊಂಡು ಬಾ', ಎಂದು ಹೇಳಿ, ಒಬ್ಬ ನೌಕರನನ್ನು ಕಳುಹಿಸಿದನೋ, ಅಷ್ಟರಲ್ಲಿ ಕೋಷಾಧ್ಯಕ್ಷನೂ ಕೂಡ, ಹತ್ತು ರೂಪಾಯಿಗಳನ್ನು [ಬ್ರಾಹ್ಮಣನಿಂದ] ಕಸಿದುಕೊಂಡು ಬಿಟ್ಟನು.

ಬ್ರಾಹ್ಮಣನು ಐವತ್ತು ರೂಪಾಯಿಗಳನ್ನು ತೆಗೆದುಕೊಂಡು, ಹೊರಟನು.

ದಾರಿಯಲ್ಲಿ —

ನೌಕರ— ಸ್ವಲ್ಪ ನನಗೂ ಕೂಡ, ಕೊಡು.

ಯಾಚಕ — ಸರಿಯಪ್ಪ! ನೀನೂ ಕೂಡ, ಒಂದು ರೂಪಾಯಿ ತೆಗೆದು ಕೋ!

ನೌಕರ — ಕೊಡಿ!

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯಾವಾಗ [ಬ್ರಾಹ್ಮಣನು] ದ್ವಾರದ ಬಳಿಗೆ ಬಂದನೋ, ಆಗ **ಸಿಪಾಯಿಗಳು** ತಡೆದರು— 'ಯಾರು? ನೀವು ಏನನ್ನು ತೆಗೆದುಕೊಂಡು ಹೋಗುತ್ತಿದ್ದೀರಿ', [ಎಂದು ಕೇಳಿದರು.]

ನೌಕರ— ನಾನು ದಾನಾಧ್ಯಕ್ಷರ ನೌಕರ!

ಸಿಪಾಯಿ— ಇವನು ಯಾರು?

ನೌಕರ— ಜಪ-ಅನುಷ್ಠಾನ ಮಾಡುವವನು!

ಸಿಪಾಯಿ— ಏನಾದರೂ ಸಿಕ್ಕಿತೋ?

ನೌಕರ—ಇವನಿಗೇ ಗೊತ್ತು!

ಸಿಪಾಯಿ — ಹೇಳಯ್ಯಾ! ಏನು ಸಿಕ್ಕಿತು?

ಯಾಚಕ — ನಿಮ್ಮಗಳಿಂದ ಉಳಿಸಿಕೊಂಡು, ಎಷ್ಟು ಮನ ಸೇರುವುದೋ, ಅಷ್ಟೇ ಸಿಕ್ಕಿತು!

ಸಿಪಾಯಿ — ನಮಗೂ ಕೂಡ, ಸ್ವಲ್ಪ ಕೊಟ್ಟು ಹೋಗು.

ಯಾಚಕ — ತೆಗೆದು ಕೋ, ಎಂಟಾಣೆ!

ಸಿಪಾಯಿ — ಕೊಡು!

ಇಷ್ಟರಲ್ಲೇ, ಬ್ರಾಹ್ಮಣನು[5] [ಎಲ್ಲಾದರೂ] ಓಡಿ ಹೋದಾನೇನೋ, ಎಂದು ದಾನಾಧ್ಯಕ್ಷನಿಗೆ ತಳಮಳವುಂಟಾಯಿತು.

'ನೋಡು! ಅವನು ಎಲ್ಲಿ ಹೋದ?', ಎಂದು ಇನ್ನೊಬ್ಬ ನೌಕರನಿಗೆ ಹೇಳಿದನು.

ಅಷ್ಟರಲ್ಲಿ ಆ ಯಾಚಕ ಮೊದಲಾದವರು ಬಂದು ಸೇರಿದರು.

ದಾನಾಧ್ಯಕ್ಷ — ಕೊಡಿ; ಆ ಹಣ ಎಲ್ಲಿ?

ಯಾಚಕ— ಇಗೋ, ಈ ನಲವತ್ತೆಂಟು!

ದಾನಾಧ್ಯಕ್ಷ — ಓ ಹೋ ! ಹನ್ನೆರಡು ರೂಪಾಯಿ ಎಲ್ಲಿ ಹೋಯಿತು?

ಯಾಚಕನು ಹೇಗೆ ನಡೆದಿತ್ತೋ, ಹಾಗೆ ಹೇಳಿ ಬಿಟ್ಟನು!

ದಾನಾಧ್ಯಕ್ಷ — ಸರಿ, ಹಾಗಾದರೆ, ನನ್ನದು ನಾಲ್ಕು ಹೋಯಿತು; ಮತ್ತು ನಿನ್ನದು ಎಂಟು!

ಯಾಚಕ — ಸರಿ! ತಮ್ಮ ಇಚ್ಛೆ ಇದ್ದಂತಾಗಲಿ!

ಆಗ ದಾನಾಧ್ಯಕ್ಷನು ಇಪ್ಪತ್ತಾರು [ರೂಪಾಯಿ] ತೆಗೆದುಕೊಂಡನು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮತ್ತು [ಉಳಿದ] ಇಪ್ಪತ್ತೆರಡನ್ನು + ತೆಗೆದುಕೊಂಡು, ಯಾಚಕನು — 'ನಾನು ಮನೆಗೆ ಹೋಗಿ ಬರಲೋ? ನಾಳೆ ಬಂದು ಬಿಡುತ್ತೇನೆ', ಎಂದು ಹೇಳಿದನು.

ಅವನು ಮಾರನೆಯ ದಿನ ಬಂದನು. ಅವನಿಗೆ ದಾನಾಧ್ಯಕ್ಷನು —

'ನೀನು ಗಂಗಾನದಿಯ ಹತ್ತಿರ ಹೋಗಿ, ರಾಜನ ಕಡೆಯಿಂದ ಜಪ ಮಾಡು. ಮತ್ತು ಈ ಪಂಚೆ ಅಂಗವಸ್ತ್ರ, ಪಂಚಪಾತ್ರೆ, ಸರ, ಮತ್ತು ಗೋಮುಖಿ* ತೆಗೆದುಕೋ', ಎಂದು ಹೇಳಿದನು.

ಅವನು ತೆಗೆದುಕೊಂಡು ಗಂಗಾನದಿಗೆ ಹೊರಟನು.

ಅಲ್ಲಿ ಸ್ನಾನ ಮಾಡಿ, ಸರವನ್ನು ಹಿಡಿದುಕೊಂಡು ಜಪ ಮಾಡುತೊಡಗಿದನು.

ದಾನಾಧ್ಯಕ್ಷನು ಏನು ಹೇಳಿದ್ದನೋ, ಅದೇ ಮಂತ್ರವಿರಬೇಕು, ಎಂದು ಆಲೋಚಿಸಿ, ಆ ಮೂರ್ಖನು ಹಾಗೆಯೇ ತಿಳಿದುಕೊಂಡಿದ್ದನು —

"ಸರವೇ ಜರುಗು; ಮಣಿಯೇ ಹೊರಳು!
ರಾಜನಿಗಾಗಿ ಜಪ ಮಾಡುವೆ!
ರಾಜನಿಗಾಗಿ ಜಪ ಮಾಡುವೆ!
ರಾಜನಿಗಾಗಿ ಜಪ ಮಾಡುವೆ!"

ಎಂದು ಜಪ ಮಾಡತೊಡಗಿದನು.

(ಎರಡನೆಯ ಮೂರ್ಖ ಯಾಚಕನ ಜಪ)

ಆಗ, **ಇನ್ನೊಬ್ಬ ಮೂರ್ಖನು** — 'ಯಾವಾಗ ಇವನಿಗೆ [ಜೀವನೋಪಾಯ] ಸಿಕ್ಕಿ ಬಿಟ್ಟಿತೋ, ಆಗ ನನಗೂ ಕೂಡ, ಸಿಕ್ಕೇ ಬಿಡುವುದು. ಹೋಗೋಣ!', ಎಂದು ಯೋಚಿಸಿದನು.

ಅವನು ಹೋದನು. ಹಾಗೆಯೇ [ಎಲ್ಲವೂ] ಆಯಿತು.

[ವಾಪಸು] ಬರುತ್ತಿರುವಾಗ$ ದಾನಾಧ್ಯಕ್ಷರು— 'ನೀನೂ ಹೋಗು! ಹೇಗೆ ಅವನು ಮಾಡುತ್ತಿದ್ದಾನೋ, ಹಾಗೆಯೇ ಮಾಡಬೇಕು', ಎಂದು ಹೇಳಿದರು.

ಅವನು ಹೋದನು, ಹಾಗೆಯೇ, ಆಸನದ ಮೇಲೆ ಕುಳಿತುಕೊಂಡು, ಪಾಠ ಮಾಡುತ್ತಿರುವವನ 'ಮಂತ್ರ'ವನ್ನು ಆಲಿಸಿಕೊಂಡು—

\+ ಇಲ್ಲಿ $21\frac{1}{2}$ರೂ. ಎಂದಿರಬೇಕಿತ್ತು, ಅಥವಾ ಸಿಪಾಯಿಗೆ ಕೊಟ್ಟ ಎಂಟಾಣೆ ಬ್ರಾಹ್ಮಣನು ತನ್ನ ಜೇಬಿನಿಂದ ಕೊಟ್ಟಿರಬಹುದು.

* ಹಸುವಿನ ಮುಖದ ಆಕಾರದ ಚೀಲ! ಇದರೊಳಗೆ ಸರವನ್ನು ಹಿಡಿದುಕೊಂಡು, ಜಪ ಮಾಡುತ್ತಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

"ನೀನು ಮಾಡುವುದನ್ನೇ ನಾನು ಮಾಡುವೆ!
ನೀನು ಮಾಡುವುದನ್ನೇ ನಾನು ಮಾಡುವೆ!
ನೀನು ಮಾಡುವುದನ್ನೇ ನಾನು ಮಾಡುವೆ!"

ಎಂದು ಜಪಿಸತೊಡಗಿದನು.

(ಮೂರನೆಯ ಮೂರ್ಖಯಾಚಕನ ಜಪ)

ಹಾಗೆಯೇ, **ಮೂರನೆಯವನಾಗಿ** ಯಾವನೋ ಧೂರ್ತನು ಹೋಗಿ, ಎಲ್ಲವನ್ನೂ ಮಾಡಿ-ಮಾಡಿಸಿ ಬಂದನು.

ಹೊರಡುವ ಸಮಯದಲ್ಲಿ ದಾನಾಧ್ಯಕ್ಷನು— 'ಎಲ್ಲಿನ ತನಕ ನಿರ್ವಾಹವಾಗುತ್ತಾ ತೋರುವುದೋ, ಅಲ್ಲಿನ ತನಕ ಮಾಡು', ಎಂದು ಹೇಳಿದನು.

ಅವನೂ ಕೂಡ, ಈ ಅಭಿಪ್ರಾಯವನ್ನೇ 'ಮಂತ್ರ', ಎಂದು ತಿಳಿದುಕೊಂಡು, ಜಪ ಮಾಡುವುದಕ್ಕಾಗಿ ಅಲ್ಲಿಗೆ ಹೋಗಿ ಕುಳಿತುಕೊಂಡು —

'ಹೀಗೆ ನಿರ್ವಾಹವಾಗುವುದು ಎಲ್ಲಿನ ತನಕ!
ಹೀಗೆ ನಿರ್ವಾಹವಾಗುವುದು ಎಲ್ಲಿನ ತನಕ!
ಹೀಗೆ ನಿರ್ವಾಹವಾಗುವುದು ಎಲ್ಲಿನ ತನಕ!'

ಎಂದು ಜಪಿಸತೊಡಗಿದನು.

(ನಾಲ್ಕನೆಯ ಮೂರ್ಖ ಯಾಚಕನ ಜಪ)

ಹಾಗೆಯೇ, **ನಾಲ್ಕನೆಯವನಾಗಿ** ಯಾವನೋ ಮೂರ್ಖನು ಎಲ್ಲಾ ವ್ಯವಸ್ಥೆಯನ್ನೂ ಮಾಡಿ ಮಾಡಿಸಿ, ಗಂಗಾನದಿಯ ಬಳಿ ಯಾವಾಗ ಹೊರಡಲುದ್ಯುಕ್ತನಾದನೋ, ಆಗ ದಾನಾಧ್ಯಕ್ಷನು—

'ಎಲ್ಲಿನ ತನಕ ನಿರ್ವಾಹವಾಗುತ್ತದೋ, ಅಲ್ಲಿನ ತನಕ ನಿರ್ವಾಹ ಮಾಡು', ಎಂದು ಹೇಳಿದನು.

ಅವನೂ ಕೂಡ, ಅದನ್ನೇ 'ಮಂತ್ರ', ಎಂದು ತಿಳಿದುಕೊಂಡು, ಗಂಗಾನದಿಯ ಬಳಿ ಹೋಗಿ, ಜಪ ಮಾಡುವುದಕ್ಕಾಗಿ ಕುಳಿತುಕೊಂಡು, ಆ ಮೂವರ 'ಮಂತ್ರ'ಗಳನ್ನೂ ಆಲಿಸಿದನು—

ಒಬ್ಬನು ಹೇಳುತ್ತಾನೆ —

'ರಾಜನಿಗಾಗಿ ಜಪ ಮಾಡುವೆ!
ರಾಜನಿಗಾಗಿ ಜಪ ಮಾಡುವೆ!
ರಾಜನಿಗಾಗಿ ಜಪ ಮಾಡುವೆ!'

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಎರಡನೆಯವನು—

'ನೀನು ಮಾಡುವುದನ್ನೇ ನಾನು ಮಾಡುವೆ!
ನೀನು ಮಾಡುವುದನ್ನೇ ನಾನು ಮಾಡುವೆ!
ನೀನು ಮಾಡುವುದನ್ನೇ ನಾನು ಮಾಡುವೆ!'

ಮೂರನೆಯವನು—

'ಹೀಗೆ ನಿರ್ವಾಹವಾಗುವುದು ಎಲ್ಲಿನ ತನಕ!
ಹೀಗೆ ನಿರ್ವಾಹವಾಗುವುದು ಎಲ್ಲಿನ ತನಕ!
ಹೀಗೆ ನಿರ್ವಾಹವಾಗುವುದು ಎಲ್ಲಿನ ತನಕ!'

ಆಗ, ನಾಲ್ಕನೆಯವನು ಜಪಿಸತೊಡಗಿದನು —

'ಎಲ್ಲಿನ ತನಕ ನಿರ್ವಾಹವಾಗುವುದೋ, ಅಲ್ಲಿ ತನಕ!
ಎಲ್ಲಿನ ತನಕ ನಿರ್ವಾಹವಾಗುವುದೋ, ಅಲ್ಲಿನ ತನಕ!
ಎಲ್ಲಿ ತನಕ ನಿರ್ವಾಹವಾಗುವುದೋ, ಅಲ್ಲಿ ತನಕ!'

(ನೀತಿ)

ತಮ್ಮ ಸ್ವಾರ್ಥಕ್ಕಾಗಿ, ಅನ್ಯಾಯರೂಪ ಕರ್ಮಗಳನ್ನು ಮಾಡಿ, ಇತರ ಮನುಷ್ಯರನ್ನು ವಂಚಿಸಿ ಬಿಡುವುದಕ್ಕಾಗಿ ಎಲ್ಲಾ ಅಧರ್ಮಿ ಮತ್ತು ಸ್ವಾರ್ಥೀ ಜನರ ಲೀಲೆ ಈ ರೀತಿಯಾಗಿಯೇ ಇರುತ್ತದೆ, ಎಂಬುದನ್ನು ಗಮನಿಸಿ!

ಯಾರ ಆತ್ಮವು ಅವಿದ್ಯೆ ಮತ್ತು ಅಂಧಕಾರದಲ್ಲಿ ಬಿದ್ದು ಎಂದಿಗೂ ಸುಖವನ್ನು ಪ್ರಾಪ್ತ ಮಾಡಿಕೊಳ್ಳಲಾರದೋ, ಅಂತಹ ಮನುಷ್ಯರದು ಭಾಗ್ಯಹೀನತೆಯಾಗಿರುತ್ತದೆ.

ದೃಷ್ಟಾಂತ-[17]

ಈ ಸಂದರ್ಭದಲ್ಲಿ ಯಾವನೋ ಒಬ್ಬ ಧಾರ್ಮಿಕ ರಾಜನ ದೃಷ್ಟಾಂತವನ್ನು ಆಲಿಸಿರಿ—

[ಧಾರ್ಮಿಕ ವಿದ್ವಾಂಸನಾದ ರಾಜನ ವ್ಯವಹಾರಪಟುತ್ವ]

ಯಾವನೋ ಒಬ್ಬ ವಿದ್ವಾಂಸನೂ, ಧಾರ್ಮಿಕನೂ ಆದ ರಾಜನಿದ್ದನು. ಅವನ ದಾನಾಧ್ಯಕ್ಷನ ಬಳಿಗೆ ಯಾವನೋ ಧೂರ್ತನು ಬಂದು — 'ನನಗೆ ಜೀವನೋಪಾಯ ಕಲ್ಪಿಸಿ', ಎಂದು ಕೇಳಿಕೊಂಡನು.

(ಧೂರ್ತ ಯಾಚಕನಿಗೆ 'ಅರ್ಧಚಂದ್ರ')

ದಾನಾಧ್ಯಕ್ಷ— ನೀವು ಯಾವ ಯಾವ ಶಾಸ್ತ್ರವನ್ನು ಓದಿದ್ದೀರಿ? ಮತ್ತು ಯಾವ ಯಾವ ಕೆಲಸ ಮಾಡಬಲ್ಲಿರಿ?$

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯಾಚಕ— ನಾನು ಏನನ್ನೂ ಓದಿಲ್ಲ! ಇಪ್ಪತ್ತು ವರ್ಷಗಳ ತನಕ, ಆಟವಾಡುತ್ತಾ ಜಿಗಿಯುತ್ತಾ, ಹಸು-ಎಮ್ಮೆಗಳನ್ನು ಮೇಯಿಸುತ್ತಾ, ಹೊಲಗಳಲ್ಲಿ ಅಲೆದಾಡುತ್ತಾ ಮತ್ತು ತಾಯಿ-ತಂದೆಯರ ಎದುರಿಗೆ ಮಜವಾಗಿರುತ್ತಾದ್ದೆನು.

ಈಗ, ಮನೆಯ ಭಾರವೆಲ್ಲಾ [ನನ್ನ ಮೇಲೆ] ಬಿದ್ದು ಬಿಟ್ಟಿದೆ. ತಮ್ಮ ಬಳಿಗೆ ಬಂದಿದ್ದೇನೆ. [ಏನಾದರೂ] ಸ್ವಲ್ಪ ಮಾಡಿಸಿಬಿಡಿ!

ದಾನಾಧ್ಯಕ್ಷ— ನೌಕರಿ-ಚಾಕರಿ ಮಾಡುವಿರಾದರೆ, ಮಾಡಿಸಿಬಿಡುವೆವು.

ಯಾಚಕ— ನಾನು ಬ್ರಾಹ್ಮಣ ಸಾಧು! ಅಲ್ಲಿ-ಇಲ್ಲಿ ಪೇಟೆಗಳಲ್ಲಿ ಉಪದೇಶ ಮಾಡುವವನಾಗಿದ್ದೇನೆ. ನನ್ನಿಂದ ಇಂತಹ ಪರಿಶ್ರಮ ಎಲ್ಲಿ ಬಂದೀತು?

ದಾನಾಧ್ಯಕ್ಷ— ನೀನು ವಿದ್ಯೆಯಿಲ್ಲದೇ ಬ್ರಾಹ್ಮಣನೂ, ಪರೋಪಕಾರ ಮಾಡದೇ ಸಾಧುವೂ [ಹೇಗಾಗಿದ್ದೀಯೆ?] ಮತ್ತು ವಿಶೇಷ ಜ್ಞಾನವಿಲ್ಲದೇ ಉಪದೇಶವನ್ನೂ ಹೇಗೆ ಮಾಡಬಲ್ಲವನಾಗಿದ್ದೀಯೆ? ಆದ್ದರಿಂದ, ನೌಕರಿ-ಚಾಕರಿ ಮಾಡಬೇಕೆಂದಿದ್ದರೆ, ಮಾಡು! ಇಲ್ಲದಿದ್ದರೆ, ಹೊರಟು ಹೋಗು!

ಆ ಮೂರ್ಖನು ನಿರಾಶನಾಗಿ— 'ಇಲ್ಲಿ ನನ್ನ ಬೇಳೆ ಬೇಯುವುದಿಲ್ಲ! ಆಗಲಿ; ರಾಜನಿಗೆ ಹೇಳೋಣ!', ಎಂದುಕೊಂಡು ಹೊರಟನು.

ಯಾವಾಗ ರಾಜನ ಬಳಿ ಬಂದು, ಹಾಗೆಯೇ ಹೇಳಿದನೋ, ಆಗ ರಾಜನು [ಕೂಡ]— 'ಹೇಗೆ ದಾನಾಧ್ಯಕ್ಷರು ಹೇಳಿದ್ದಾರೋ, ಹಾಗೆ ಮಾಡಬೇಕೆಂದಿದ್ದರೆ ಮಾಡು. ಇಲ್ಲದಿದ್ದರೆ, ಹೊರಟು ಹೋಗು!', ಎಂದು ಹಾಗೆಯೇ ಉತ್ತರ ಕೊಟ್ಟನು.

ಅವನು ಅಲ್ಲಿಂದ ಹೊರಟು ಹೋದನು.

(ವಿದ್ವಾಂಸನಾದ ಯಾಚಕನಿಗೆ ಸತ್ಕಾರ)

ಇದಾದ ನಂತರ, ಒಬ್ಬ ಯೋಗ್ಯ ವಿದ್ವಾಂಸನು ಬಂದು, ದಾನಾಧ್ಯಕ್ಷನೊಡನೆ ಭೇಟಿ ಮಾಡಿ, ವಾರ್ತಾಲಾಪ ಮಾಡಿದನು.

ಆಗ ದಾನಾಧ್ಯಕ್ಷನು— 'ಇವನು, ಬಹಳ ಒಳ್ಳೆಯ ಸುಪಾತ್ರನಾದ ವಿದ್ವಾಂಸನಾಗಿದ್ದಾನೆ,' ಎಂದು ತಿಳಿದುಕೊಂಡುಬಿಟ್ಟನು.

[ದಾನಾಧ್ಯಕ್ಷನು] ರಾಜನ ಭೇಟಿ ಮಾಡಿ— 'ಪಂಡಿತಜೀ ಅವರೊಡನೆ ತಾವೂ ಕೂಡ, ಸ್ವಲ್ಪ ವಾರ್ತಾಲಾಪ ಮಾಡಿ', ಎಂದು ಹೇಳಿದನು.

ಹಾಗೆಯೇ ಆಯಿತು!

ಆಗ ರಾಜನು ಪರೀಕ್ಷೆ ಮಾಡಿ— 'ಇವನು ಅತಿಶ್ರೇಷ್ಠ ವಿದ್ವಾಂಸನಾಗಿದ್ದಾನೆ', ಎಂದು ತಿಳಿದನು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಈ ರೀತಿಯಾಗಿ ತಿಳಿದುಕೊಂಡು — 'ನಿಮಗೆ ಒಂದು ಸಾವಿರ ರೂಪಾಯಿ ತಿಂಗಳಿಗೆ ಸಂಬಳ ಸಿಗುವುದು. ನೀವು ಯಾವಾಗಲೂ ನಮ್ಮ ಪಾಠಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ವಿದ್ಯೆ ಕಲಿಸುತ್ತಿರಿ ಮತ್ತು ಧರ್ಮೋಪದೇಶ ಮಾಡುತ್ತಿರಿ', ಎಂದು ಅವನಿಗೆ ಹೇಳಿದನು.

ಹಾಗೆಯೇ ಆಯಿತು!

(ನೀತಿ)

7750

ಯಾರ ಹೃದಯದಲ್ಲಿ ವಿದ್ಯೆ, ಪರಮಾತ್ಮಾ, ಹಾಗೂ ಧರ್ಮರೂಪ ಸೂರ್ಯ ಪ್ರಕಾಶಿತವಾಗುತ್ತವೋ, ಅಂತಹ ರಾಜನೂ ಮತ್ತು ದಾನಾಧ್ಯಕ್ಷರೇ ಮೊದಲಾದವರೂ ಧನ್ಯರಾಗಿರುತ್ತಾರೆ!

(ದಾನಾಭಕ್ಷ-ದಾನಾಧ್ಯಕ್ಷರ ಪರಿಭಾಷೆ)

ಪ್ರಶ್ನೆ: '**ದಾನಾಭಕ್ಷ**' ಮತ್ತು '**ದಾನಾಧ್ಯಕ್ಷ**', ಎಂದು ಯಾವನಿಗೆ ಹೇಳುತ್ತಾರೆ.

ಉತ್ತರ: ಯಾವನು ದಾನಿಯ ದಾನದ ಭಕ್ಷಣೆ ಮಾಡಿ, ತನ್ನ ಸ್ವಾರ್ಥವನ್ನು ಸಾಧಿಸಿಕೊಳ್ಳುತ್ತಾ ಹೋಗುತ್ತಾನೋ, ಅವನು '**ದಾನಾಭಕ್ಷ**'!

ಮತ್ತು ಯಾವನು ದಾನಿಯ ದಾನವನ್ನು ಸುಪಾತ್ರರಾದ ವಿದ್ವಾಂಸರಿಗೆ ಕೊಟ್ಟು, ಅವರಿಂದ ವಿದ್ಯೆಯ, ಹಾಗೂ ಧರ್ಮದ ಉನ್ನತಿ ಮಾಡಿಸುತ್ತಾ ಹೋಗುತ್ತಾನೋ, ಅವನು '**ದಾನಾಧ್ಯಕ್ಷ**', ಎನಿಸಲ್ಪಡುತ್ತಾನೆ.

('ರಾಜನ ಅರ್ಹತೆಗಳು ಯಾವುವು?')

ಪ್ರಶ್ನೆ: 'ರಾಜಾ', ಎಂದು ಯಾವನಿಗೆ ಹೇಳುತ್ತಾರೆ?

ಉತ್ತರ: ಯಾವನು ವಿದ್ಯೆ, ನ್ಯಾಯ, ಜಿತೇಂದ್ರಿಯತ್ವ, ಶೌರ್ಯ, ಧೈರ್ಯ ಮೊದಲಾದ ಗುಣಗಳಿಂದ ಯುಕ್ತನಾಗಿದ್ದು;

ಪ್ರಜೆಗಳ ಪಾಲನೆಯಲ್ಲಿ ತನ್ನ ಪುತ್ರರಂತೆ [ತಿಳಿದು ವರ್ತಿಸುತ್ತಾ];

ಯಥಾಯೋಗ್ಯವಾಗಿ ಶ್ರೇಷ್ಠರ ರಕ್ಷಣೆ [ಮಾಡುತ್ತಾ];

ಮತ್ತು ದುಷ್ಟರಿಗೆ ದಂಡ ಕೊಟ್ಟು;

ಧರ್ಮ, ಅರ್ಥ, ಕಾಮ ಮತ್ತು ಮೋಕ್ಷದ ಪ್ರಾಪ್ತಿಯಿಂದ [ಸ್ವತಃ] ಯುಕ್ತನಾಗಿ;

ಹಾಗೂ ತನ್ನ ಪ್ರಜೆಗಳನ್ನೂ ಕೂಡ, ಯುಕ್ತ ಮಾಡಿಸಿ;

ಆನಂದಿತನಾಗಿರುತ್ತಾನೋ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮತ್ತು ಎಲ್ಲರನ್ನೂ ಸುಖದಿಂದ ಕೂಡಿರುವವರನ್ನಾಗಿ ಮಾಡುತ್ತಾನೋ;

ಅವನು '**ರಾಜಾ**', ಎಂದು ಕರೆಯಲ್ಪಡುತ್ತಾನೆ.

(ಪ್ರಜೆಗಳ ಅರ್ಹತೆಗಳು ಯಾವುವು?)

ಪ್ರಶ್ನೆ: '**ಪ್ರಜಾ**', ಎಂದು ಯಾರಿಗೆ ಹೇಳುತ್ತಾರೆ?

ಉತ್ತರ: ಹೇಗೆ ಪುತ್ರರೇ ಮೊದಲಾದವರು ತನು-ಮನ-ಧನಗಳಿಂದ ತಮ್ಮ ತಾಯಿ-ತಂದೆ ಮೊದಲಾದವರ ಸೇವೆಯನ್ನು ಮಾಡಿ, ಅವರನ್ನು ಯಾವಾಗಲೂ ಪ್ರಸನ್ನರನ್ನಾಗಿ ಡುತ್ತಾರೋ, ಹಾಗೆಯೇ—

ಯಾವ ಪ್ರಜೆಗಳು ಅನೇಕ ಪ್ರಕಾರದ ಧರ್ಮಯುಕ್ತ ವ್ಯವಹಾರಗಳಿಂದ, ಪದಾರ್ಥಗಳನ್ನು ತಯಾರಿಸಿ;

ರಾಜಸಭೆಗೆ ತೆರಿಗೆ ಕೊಟ್ಟು;

ಅವರನ್ನು* ಯಾವಾಗಲೂ ಪ್ರಸನ್ನರನ್ನಾಗಿಡುತ್ತಾರೋ;

ಅವರು '**ಪ್ರಜೆ**', ಎನಿಸುತ್ತಾರೆ.

(ರಾಜಾ-ಪ್ರಜೆಗಳ ಅನರ್ಹತೆ-ಅರ್ಹತೆ)

ಮತ್ತು ಯಾವನು ತನ್ನ ಹಿತವನ್ನೂ, ಹಾಗೂ ಪ್ರಜೆಗಳ ಅಹಿತವನ್ನೂ ಮಾಡಲು ಇಚ್ಛಿಸುತ್ತಾನೋ, ಅವನು '**ರಾಜಾ**' ಅಲ್ಲ;

ಮತ್ತು ಯಾರು ತಮ್ಮ ಹಿತವನ್ನೂ, ಹಾಗೂ ರಾಜನ ಅಹಿತವನ್ನೂ [ಮಾಡಲು] ಇಚ್ಛಿಸುತ್ತಾರೋ, ಅವರು '**ಪ್ರಜೆ**' ಕೂಡ, ಅಲ್ಲ!

ಅವರನ್ನು ಒಬ್ಬರಿನ್ನೊಬ್ಬರ ಶತ್ರು, ದರೋಡೆಕೋರ, ತಿಳಿಯಬೇಕು.

ಏಕೆಂದರೆ, [ಯಾವಾಗ] ಇಬ್ಬರೂ ಧಾರ್ಮಿಕರಾಗಿ, ಒಬ್ಬರು ಇನ್ನೊಬ್ಬರ ಹಿತ ಮಾಡುವುದರಲ್ಲಿ ನಿತ್ಯವೂ ಪ್ರವೃತ್ತರಾಗಿರುತ್ತಾರೋ, ಆಗಲೇ ಅವರಿಗೆ '**ರಾಜಾ**' ಮತ್ತು '**ಪ್ರಜಾ**', ಎಂಬ ಹೆಸರಾಗುತ್ತದೆ, ವಿಪರೀತವಾದವರಿಗೆ ಎಂದಿಗೂ ಅಲ್ಲ!

ಉದಾಹರಣೆಗಾಗಿ—

'ಏರುಪೇರುನಗರಿಯ ಐಲು ದೊರೆ!
ಕಾಸಿಗೊಂದು ಸೊಪ್ಪು, ಕಾಸಿಗೊಂದು ಹೊರೆ!'

---

* ರಾಜಸಭೆಯವರನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದೃಷ್ಟಾಂತ –[18]

ಏರುಪೇರು ನಗರಿಯ ಐಲು ದೊರೆಯ '(ಅ)ನ್ಯಾಯ ವ್ಯವಸ್ಥೆ'

ಒಬ್ಬ ದೊಡ್ಡ ಧಾರ್ಮಿಕನೂ, ವಿದ್ವಾಂಸನೂ ಆದ ಸಭಾಧ್ಯಕ್ಷ ರಾಜನು ಯಥಾವತ್ತಾದ ರಾಜನೀತಿಯಿಂದ ಯುಕ್ತನಾಗಿ, ಪ್ರಜಾಪಾಲನೆ ಮೊದಲಾದುವನ್ನು ಉಚಿತ ಸಮಯದಲ್ಲಿ ಸರಿ ಸರಿಯಾಗಿ ಮಾಡುತ್ತಿದ್ದನು.

ಅವನ ರಾಜಧಾನಿಯ ಹೆಸರು '**ಪ್ರಕಾಶವತೀ**', ಎಂದೂ, ರಾಜನ ಹೆಸರು '**ಧರ್ಮಪಾಲ**', ಎಂದೂ ಮತ್ತು[ರಾಜ್ಯ] ವ್ಯವಸ್ಥೆಯ ಹೆಸರು '**ಯಥಾಯೋಗ್ಯಕಾರಕ**', ಎಂದೂ ಇತ್ತು.

ಅವನು ಸತ್ತು ಹೋದನು!

(ಐಲು ದೊರೆಯ ಪ್ರಥಮ ದರ್ಬಾರು)

ನಂತರ, ಮಹಾ ಅಧರ್ಮಿಯೂ, ಮೂರ್ಖನೂ ಆಗಿದ್ದ ಅವನ ಮಗನು ರಾಜಸಿಂಹಾಸನದ ಮೇಲೆ ಕುಳಿತುಕೊಂಡು, ಸಭೆಗೆ—

'ಯಾರು ನನ್ನ ಆಜ್ಞೆಯನ್ನು ಪಾಲಿಸುತ್ತಾರೋ, ಅವರು ನನ್ನ ಬಳಿ ಇರಲಿ! ಮತ್ತು ಯಾರು ಪಾಲಿಸುವುದಿಲ್ಲವೋ, ಅವರು ಇಲ್ಲಿಂದ ಹೊರಟು ಹೋಗಲಿ!', ಎಂದು ಹೇಳಿದನು.

ಆಗ, ದೊಡ್ಡ ದೊಡ್ಡ ಧಾರ್ಮಿಕ ಸಭಾಸದರು—'ಹೇಗೆ ತಮ್ಮ ತಂದೆಯವರು ಸಭೆಯ ಸಮ್ಮತಿಗೆ ಅನುಕೂಲವಾಗಿ ನಡೆಯುತ್ತಿದ್ದರೋ, ಹಾಗೆಯೇ, ತಾವೂ ಕೂಡ, ನಡೆಯಬೇಕಲ್ಲವೇ?', ಎಂದು ಹೇಳಿದರು.

ರಾಜಾ— ಅವರ ಕೆಲಸ ಅವರ ಜೊತೆಗೆ ಹೋಯಿತು! ಈಗ, ನನಗೆ ಹೇಗೆ ಇಚ್ಛೆ ಉಂಟಾಗುವುದೋ, ಹಾಗೆ ಮಾಡುವೆನು.

ಸಭಾ[ಸದರು] — ತಾವು ಸಭೆ ಹೇಳಿದ್ದನ್ನು ಮಾಡದಿದ್ದರೆ, ರಾಜ್ಯದ ನಾಶ, ಅಥವಾ ತಮ್ಮದೇ ನಾಶ [ಕೂಡ], ಆಗಬಹುದು!

ರಾಜಾ— ನನ್ನ [ನಾಶವು] ಎಂದಾಗುವುದೋ, ಆಗ ಆದೀತು! ಆದರೆ, ನೀವು ಇಲ್ಲಿಂದ ಹೊರಟುಹೋಗಿರಿ! ಇಲ್ಲದಿದ್ದರೆ, ನಿಮ್ಮ ನಾಶವನ್ನು ನಾನು ಈಗಲೇ ಮಾಡಿಬಿಟ್ಟೇನು!

ಸಭಾಸದರು— 'ವಿನಾಶಕಾಲೇ ವಿಪರೀತ ಬುದ್ಧಿಃ'+

'ಯಾವನ ನಾಶವು ಶೀಘ್ರವಾಗಿಯೇ ಆಗಬೇಕಾಗಿರುತ್ತದೋ, ಅವನ ಬುದ್ಧಿಯೂ ಮೊದಲೇ ವಿಪರೀತವಾಗಿ ಬಿಡುವುದು.

'ಹೊರಡೋಣ! ಇಲ್ಲಿ ನಮ್ಮ ನಿರ್ವಾಹ ಆಗದು.' ಎಂದು ಹೇಳಿದರು.

ಅವರು ಹೊರಟು ಹೋದರು.

\+ **ಅರ್ಥ** :– ವಿನಾಶಕಾಲದಲ್ಲಿ ಬುದ್ಧಿವೈಪರೀತ್ಯವಾಗುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆಗ ಮಹಾಮೂರ್ಖರೂ, ಧೂರ್ತರೂ, ಹೊಗಳುಭಟ್ಟರೂ ಆದ ಜನರ ಮಂಡಳಿಯು ರಾಜನ[$] ಜೊತೆ ಸೇರಿಕೊಂಡಿತು!

(ಐಲುದೊರೆಯ 'ಐಲು' ಸಂವಿಧಾನ!)

ರಾಜನು—"ಇಂದಿನಿಂದ ನನ್ನ ಹೆಸರು **'ಐಲುಪೈಲು'**, ಎಂದೂ, ಮತ್ತು ರಾಜಧಾನಿಯ ಹೆಸರು **'ಏರುಪೇರು'**, ಎಂದೂ ಆಗುತ್ತದೆ.

'ಮತ್ತು ನನ್ನ ತಂದೆ, ಹಾಗೂ ಸಭೆಯು ಯಾವ ಯಾವ ಕೆಲಸವನ್ನು ಮಾಡುತ್ತಿದ್ದರೋ, ಅದಕ್ಕೆ ವಿರುದ್ಧವಾಗಿ ಎಲ್ಲವನ್ನೂ ನಾನು ಮಾಡುವೆನು.

'ಉದಾಹರಣೆಗಾಗಿ—

'ನನ್ನ ತಂದೆ ಮತ್ತು ಸಭಾಸದರು ರಾತ್ರಿಯಲ್ಲಿ ಮಲಗುವುದನ್ನೂ, ಹಾಗೂ ಹಗಲಿನಲ್ಲಿ ರಾಜಕಾರ್ಯವನ್ನೂ ಮಾಡುತ್ತಿದ್ದರು'. ಹಾಗೆಯೇ, ಅದಕ್ಕೆ ವಿರುದ್ಧವಾಗಿ, ನಾವೆಲ್ಲರೂ ಹಗಲಿನಲ್ಲಿ ಮಲಗೋಣ; ಮತ್ತು ರಾತ್ರಿಯಲ್ಲಿ ರಾಜಕಾರ್ಯ ಮಾಡೋಣ!

"ಅವರ ರಾಜ್ಯದಲ್ಲಿ ಅವರೆದುರಿಗೆ ಎಲ್ಲಾ ವಸ್ತುಗಳೂ ತಮ್ಮ ತಮ್ಮ ಬೆಲೆಗೆ [ಸರಿಯಾಗಿ] ಮಾರಾಟವಾಗುತ್ತಿದ್ದುವು. [ಆದರೆ,] ನಮ್ಮ ರಾಜ್ಯದಲ್ಲಿ ಕೇಸರಿ, ಕಸ್ತೂರಿಯಿಂದ ಹಿಡಿದು, ಮಣ್ಣಿನ ತನಕ ಎಲ್ಲಾ ವಸ್ತುಗಳೂ ಕಾಸಿಗೊಂದು ಸೇರು ಮಾಗಲ್ಪಡುವುವು", ಎಂದು ಹೇಳಿದನು.

(ಏರುಪೇರು ನಗರಿಗೆ ಗುರು-ಶಿಷ್ಯರ ಆಗಮನ)

ಯಾವಾಗ ಇದರ ಪ್ರಸಿದ್ಧಿಯು ದೇಶ-ದೇಶಾಂತರಗಳಲ್ಲಾಯಿತೋ, ಆಗ ಯಾವುದೋ ದೇಶದಲ್ಲಿ[$] ಇಬ್ಬರು ಗುರು-ಶಿಷ್ಯರಾದ ಬೈರಾಗಿಗಳು **'ಅಖಾಡಾಗಳಲ್ಲಿ'**[*] ಕುಸ್ತಿ ಮಾಡುತ್ತಾ, ಐದು-ಐದು ಸೇರು [ಕವಳ] ತಿನ್ನುತ್ತಾ ಇದ್ದರು. ಮತ್ತು ಬಹಳ ದಪ್ಪಗಿದ್ದರು.

ಶಿಷ್ಯನು — 'ಹೊರಡೋಣ ಏರುಪೇರು ನಗರಿಗೆ! ಅಲ್ಲಿ ಹತ್ತು ಕಾಸಿಗೆ ಹತ್ತು ಸೇರು ಕೆನೆ, ಮೊದಲಾದ ಭಕ್ಷ್ಯಗಳನ್ನು ಜಗಿದು, ಚೆನ್ನಾಗಿ ಊದೋಣ', ಎಂದು ಗುರುವಿಗೆ ಹೇಳಿದನು.

ಗುರುವು— 'ಅಲ್ಲಿ ಐಲುಪೈಲು [ದೊರೆಯ] ರಾಜ್ಯಕ್ಕೆ ಎಂದಿಗೂ ಹೋಗಬಾರದು! ಏಕೆಂದರೆ, ತಿಂದದ್ದೂ-ಕುಡಿದದ್ದೂ ಎಲ್ಲವೂ ಯಾವುದೋ ಒಂದು ದಿನ ಕಕ್ಕಿಬಿಡಬೇಕಾದೀತು! ಅಲ್ಲದೇ, ಪ್ರಾಣ ಉಳಿಯುವುದೂ ಕೂಡ, ಕಠಿಣವಾದೀತು!', ಎಂದು ಹೇಳಿದನು.

ಆದರೆ, ಯಾವಾಗ ಶಿಷ್ಯನು ಹಠ ಮಾಡತೊಡಗಿದನೋ, ಆಗ ಗುರುವೂ ಕೂಡ, ಮಮತ್ವ[ದಿಂದ ಶಿಷ್ಯನ] ಜೊತೆಗೆ ಹೊರಟುಬಿಟ್ಟನು.

* ಗರಡೀ ಮನೆ ಅಥವಾ ಬೈರಾಗಿ ಸಾಧುಗಳು ವಾಸಿಸುವ ಅಂಗಳ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಲ್ಲಿಗೆ ಹೋಗಿ, ಪರುಪೇರು ನಗರಿಯ ಹತ್ತಿರದಲ್ಲಿ[ನ] ಒಂದು ತೋಟದಲ್ಲಿ ನಿವಾಸ ಮಾಡ ತೊಡಗಿದರು. ಮತ್ತು ಪುಷ್ಕಳವಾಗಿ ಭಕ್ಷ್ಯಗಳನ್ನು ಜಗಿಯುತ್ತಾ, ಕುಸ್ತಿ ಮಾಡುತ್ತಿದ್ದರು.

(ಕಳ್ಳತನ! 'ಕಳ್ಳ'ನ ಬಂಧನ)

ಇಷ್ಟರಲ್ಲಿ ಎಂದೋ ಒಂದರ್ಧ ರಾತ್ರಿಯಲ್ಲಿ ಯಾವನೋ ಸಾಹುಕಾರನ ನೌಕರನು ಒಂದು ಸಾವಿರ ರೂಪಾಯಿಗಳನ್ನುಳ್ಳ ಚೀಲವನ್ನು ತೆಗೆದುಕೊಂಡು, [ಬೇರೆ] ಇನ್ನೊಬ್ಬ ಸಾಹುಕಾರನ ಅಂಗಡಿಯಲ್ಲಿ 'ಜಮಾ' ಮಾಡುವುದಕ್ಕಾಗಿ ಹೋಗುತ್ತಿದ್ದನು.

[ದಾರಿಯ] ಮಧ್ಯದಲ್ಲಿ ಕಿಸೆಗಳ್ಳರು ಬಂದು, ರೂಪಾಯಿಗಳ ಚೀಲವನ್ನು ಕಿತ್ತುಕೊಂಡು, ಓಡಿಹೋದರು!

ಯಾವಾಗ ಅವನು ಕೂಗಿಕೊಂಡನೋ, ಆಗ ಠಾಣೆಯ ಸಿಪಾಯಿಗಳು ಬಂದು — 'ಏನಾಯಿತು?', ಎಂದು ಕೇಳಿದರು.

ಅವನು— 'ಈಗೀಗ ಕಿಸೆಗಳ್ಳರು ನನ್ನಿಂದ ರೂಪಾಯಿಗಳನ್ನು ಕಿತ್ತುಕೊಂಡು [ಓಡಿ] ಹೋಗುತ್ತಿದ್ದಾರೆ', ಎಂದು ಹೇಳಿದನು.

ಸಿಪಾಯಿಗಳು ನಿಧಾನ-ನಿಧಾನವಾಗಿ ನಡೆಯುತ್ತಾ, ಯಾವನೋ ಒಳ್ಳೆಯ ಮನುಷ್ಯನನ್ನು— 'ನೀನೇ ಕಳ್ಳ!', ಎಂದು [ಹೇಳಿ], ಹಿಡಿದುಕೊಂಡು ಬಂದರು.

ಅವನು — 'ನಾನು ಇಂತಹ ಸಾಹುಕಾರರ ನೌಕರನಾಗಿದ್ದೇನೆ. ನಡೆಯಿರಿ; ವಿಚಾರಿಸಿಕೊಳ್ಳಿರಿ', ಎಂದು ಅವರಿಗೆ ಹೇಳಿದನು.

ಸಿಪಾಯಿಗಳು— ನಾವು ವಿಚಾರಿಸುವುದಿಲ್ಲ! ನಡೆ, ರಾಜನ ಬಳಿಗೆ!

ಹಿಡಿದುಕೊಂಡು, ರಾಜನ ಬಳಿಗೆ ಕರೆದುಕೊಂಡು ಹೋಗಿ — 'ಇವನು ಸಾವಿರ ರೂಪಾಯಿನ [ಹಣದ] ಚೀಲವನ್ನು ಕದ್ದಿದ್ದಾನೆ', ಎಂದು ಹೇಳಿದರು.

(ಶೂಲಕ್ಕೇರಿಸಲು ರಾಜಾಜ್ಞೆ)

ಇಲ್ಲಿ [ರಾಜಾ] ಮತ್ತು [ಅವನ] ಹತ್ತಿರ ಕುಳಿತಿದ್ದವರಲ್ಲಿನಿಂದ[*] ಯಾವನೂ ಏನನ್ನೂ ಕೇಳಲೂ ಇಲ್ಲ; ಹೇಳಲೂ ಇಲ್ಲ!

ಆ ಬಡಪಾಯಿಯು— 'ನಾನು ಆ ಸಾಹುಕಾರರ ನೌಕರ', ಎಂದು ಕೂಗುತ್ತಲೇ ಇದ್ದನು. ಆದರೆ, ಯಾವನೂ ಕೇಳಲಿಲ್ಲ.

ತಟಕ್ಕನೇ — 'ಇವನನ್ನು ಶೂಲಕ್ಕೆ ಏರಿಸಿ ಬಿಡಿ', ಎಂದು [ರಾಜನು] ಆಜ್ಞೆ ಹೊರಡಿಸಿಬಿಟ್ಟನು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

'ಶೂಲ', ಎಂಬುದು ಕಬ್ಬಿಣದ ಬರ್ಚಿಯನ್ನುಳ್ಳದ್ದಾಗಿದ್ದು, 'ಸರ'ದ ವೃಕ್ಷದಂತೆ ಚೂಪಾಗಿರುತ್ತದೆ. ಅದರ ಮೇಲೆ ಮನುಷ್ಯನನ್ನು ಏರಿಸಿ, ಬೋರಲಾಗಿ ಮಾಡಿ, [ಅವನ] ಹೊಕ್ಕಳಿನಲ್ಲಿ ಆ ಚೂಪು ಮೊನೆಯನ್ನು ಚುಚ್ಚಿ ಬಿಟ್ಟರೆ, ಅದು ಆಚೆಗೆ ಬಂದ ಸ್ವಲ್ಪ ಹೊತ್ತಿನ ಮೇಲೆ, [ಅವನು] ಸತ್ತು ಹೋಗುತ್ತಾನೆ.

ಐಲು [ರಾಜ]ನ ನೌಕರರೂ ಕೂಡ, ಅವನಂತೆ ಏಕಿರಕೂಡದು?

(ಸಮಾನ ಸ್ವಭಾವವುಳ್ಳವರಲ್ಲಿ ಮೈತ್ರಿ)

ಏಕೆಂದರೆ—

'ಸಮಾನ[ಶೀಲ]ವ್ಯವಸನೇಷು ಮೈತ್ರೀ॥'*

ಯಾರ ಸ್ವಭಾವವು ಒಂದೇ ತರಹ ಇರುತ್ತದೋ, ಅವರಲ್ಲೇ ಪರಸ್ಪರವಾಗಿ ಮಿತ್ರತ್ವ ಕೂಡ, ಇರುತ್ತದೆ!

ಉದಾಹರಣೆಗಾಗಿ — ಧರ್ಮಾತ್ಮರದು ಧರ್ಮಾತ್ಮರೊಡನೆ, ಪಂಡಿತರುಗಳದು ಪಂಡಿತರುಗಳೊಡನೆ, ದುಷ್ಟರ, ಹಾಗೂ ವ್ಯಭಿಚಾರಿಗಳದು ದುಷ್ಟರ, ಹಾಗೂ ವ್ಯಭಿಚಾರಿಗಳೊಡನೆ ಮಿತ್ರತ್ವ ಉಂಟಾಗುತ್ತದೆ.

ಧರ್ಮಾತ್ಮರೇ ಮೊದಲಾದವರ ಸ್ನೇಹವು ಅಧರ್ಮಾತ್ಮರೊಡನೆ; ಅಥವಾ ಅಧರ್ಮಾತ್ಮರ ಸ್ನೇಹವು ಧರ್ಮಾತ್ಮರೊಡನೆ ಎಂದಿಗೂ ಉಂಟಾಗಲಾರದು.

(ಸಿಪಾಯಿಗಳ ಧರ್ಮಸಂಕಟ)

ಐಲು [ರಾಜನ] ಸಿಪಾಯಿಗಳು — 'ಶೂಲವಂತೂ ದಪ್ಪಗಿದೆ; ಆದರೆ, [ಈ] ಮನುಷ್ಯನು ತೆಳ್ಳಗಿದ್ದಾನಲ್ಲಾ! ಈಗೇನು ಮಾಡಬೇಕು?', ಎಂದು ಯೋಚಿಸ[ಲಾರಂಭಿಸಿ]ದರು.

ಆಗ ರಾಜನ ಬಳಿಗೆ ಎಲ್ಲಾ ಸಂಗತಿಯನ್ನೂ ತಿಳಿಸಿದರು.

ಆಗ, **ಐಲುದೊರೆಯು** — 'ಸರಿ! ಹಾಗಾದರೆ, ಇವನನ್ನು ಬಿಟ್ಟುಬಿಡಿ! ಮತ್ತು ಯಾವನಾದರೂ ಶೂಲಕ್ಕೆ ಸರಿಯಾಗುವಂತೆ ದಪ್ಪಗಿದ್ದರೆ, ಅವನನ್ನು ಹಿಡಿದು [ತಂದು], ಇವನ ಬದಲಾಗಿ ಏರಿಸಿಬಿಡಿ', ಎಂದು ಆಜ್ಞೆ ಇತ್ತನು.

ಆಗ, ಯಾವನೋ— 'ಈ ಶೂಲಕ್ಕೆ ಸರಿಯಾದವರಂತೂ ತೋಟದಲ್ಲಿರುವ ಗುರು-ಶಿಷ್ಯರಾದ ಇಬ್ಬರೂ ಬೈರಾಗಿಗಳೇ ಇದ್ದಾರೆ!', ಎಂದು ಹೇಳಿದನು.

ಎಲ್ಲರೂ — 'ಸರಿ ಸರಿಯಾದವನಂತೂ ಗುರುವಿನ್ ಶಿಷ್ಯನೇ ಆಗಿದ್ದಾನೆ', ಎಂದು ಹೇಳಿದರು.

---

* **ಅರ್ಥ :– ಒಂದೇ ತರಹದ ಸ್ವಭಾವ-ವ್ಯಸನಗಳಿದ್ದವರಲ್ಲಿ ಸ್ನೇಹ ಇರುತ್ತದೆ.**

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಶಿಷ್ಯನಿಗೆ ಪೀಕಲಾಟ)

ಯಾವಾಗ ಬಹಳ ಸಿಪಾಯಿಗಳು ತೋಟಕ್ಕೆ ಹೋಗಿ, ಗುರುವಿನ ಶಿಷ್ಯನಿಗೆ — 'ನಿನಗೆ ಮಹಾರಾಜರ ಆಜ್ಞೆಯಾಗಿದೆ. ಶೂಲವನ್ನೇರುವುದಕ್ಕಾಗಿ ನಡೆ', ಎಂದು ಹೇಳಿದರೋ, ಆಗ ಅವನು ಗಾಬರಿಯಿಂದ—

'ನಾವಂತೂ ಏನೂ ಅಪರಾಧವನ್ನು ಮಾಡಿಲ್ಲವಲ್ಲಾ?', ಎಂದು ಹೇಳಿದನು.

ಸಿಪಾಯಿ— ಅಪರಾಧವನ್ನಂತೂ ಮಾಡಿಲ್ಲ. ಆದರೆ, ಶೂಲಕ್ಕೆ ಸರಿಯಾದವನು ನೀನೇ ಆಗಿದ್ದೀಯಲ್ಲಾ! ನಾವೇನು ಮಾಡೋಣ?

ಶಿಷ್ಯ— ಬೇರೆ ಯಾವನೂ ಇಲ್ಲವೇನು?

ಸಿಪಾಯಿ— ಇಲ್ಲ! ಹೆಚ್ಚು ಒದರ ಬೇಡ! ನಡೆ ! ಮಹಾರಾಜರ ಆಜ್ಞೆಯಾಗಿದೆ.

ಆಗ ಶಿಷ್ಯನು ಗುರುವಿಗೆ — 'ಗುರುಗಳೇ! ಈಗೇನು ಮಾಡೋದು?', ಎಂದು ಕೇಳಿದನು.

ಗುರು— ನಾವು ನಿನಗೆ ಮೊದಲೇ — 'ಏರುಪೇರು ನಗರಿಯ ಐಲುಪೈಲಿನ ರಾಜ್ಯದಲ್ಲಿ, ಬಿಟ್ಟೀ ಕವಳ ಗದಕುವುದಕ್ಕಾಗಿ ಹೊರಡಬೇಡ', ಎಂದು ಹೇಳಿದ್ದೆವು. ನೀನು ಒಪ್ಪಲಿಲ್ಲ! ಈಗ ನಾವೇನು ಮಾಡೋಣ? ಹೇಗಾಗುತ್ತದೋ, ಹಾಗೆ ಭೋಗಿಸು! ನೋಡು! ಈಗ, ತಿಂದದ್ದು-ಕುಡಿದದ್ದೆಲ್ಲಾ ಹೊರಬಂದು ಬಿಡುವುದು!

ಶಿಷ್ಯ — ಈಗ ಯಾವ ರೀತಿಯಿಂದಲಾದರೂ [ನನ್ನನ್ನು] ಉಳಿಸಿದರೆ, ನಾವು ಬೇರೆ ರಾಜ್ಯಕ್ಕೆ ಹೊರಟು ಹೋಗೋಣ!

ಗುರು — ಉಳಿಯುವುದಕ್ಕಾಗಿ ಉಪಾಯವೊಂದಿದೆ. ಅದನ್ನು ನೀನು ಮಾಡಿದರೆ, ಉಳಿಯುವ ಸಂಭವವಿದೆ.

ಶೂಲದ ಮೇಲೆ ಏರುವ ಸಮಯದಲ್ಲಿ ನೀನು ನನ್ನನ್ನು ದೂರ ತಳ್ಳು. ನಾನು ನಿನ್ನನ್ನು ದೂರ ತಳ್ಳುವೆನು. ಈ ರೀತಿಯಾಗಿ ಪರಸ್ಪರ ಕಾದಾಡುವುದರಿಂದ, ಉಳಿಯುವ ಉಪಾಯವೇನಾದರೂ ಕಂಡು ಬಂದೀತು!

ಶಿಷ್ಯ — ಒಳ್ಳೇದು! ಹಾಗಾದರೆ, ನಡೆಯಿರಿ!

ಎಲ್ಲಾ ಮಾತನ್ನೂ [ಇಬ್ಬರೂ] ಬೇರೆ ದೇಶದ ಭಾಷೆಯಲ್ಲಿ ಆಡಿದರು. ಇದನ್ನು ಸಿಪಾಯಿಗಳು ಸ್ವಲ್ಪವೂ ಅರಿಯಲಿಲ್ಲ!

ಸಿಪಾಯಿಗಳು— 'ಹೊರಡಿ! ಹೊತ್ತು ಮಾಡಬೇಡಿ! ಇಲ್ಲದಿದರೆ, ಕಟ್ಟಿ ಹಾಕಿ, ಕರೆದುಕೊಂಡು ಹೋಗುವೆವು?, ಎಂದು ಹೇಳಿದರು.

ಸಾಧುಗಳು — 'ನಾವು ಪ್ರಸನ್ನತಾಪೂರ್ವಕವಾಗಿಯೇ ಹೊರಟಿದ್ದೇವೆ. ನೀವು [ನಮ್ಮನ್ನು] ಏಕೆ ಬಂಧಿಸುತ್ತೀರಿ?', ಎಂದು ಹೇಳಿದರು.

ಸಿಪಾಯಿ— ಸರಿ! ನಡೆಯಿರಿ!

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಶೂಲದ ಬಳಿ, ಗುರು-ಶಿಷ್ಯರ ಕಾದಾಟ)

ಯಾವಾಗ ಶೂಲದ ಬಳಿಗೆ ತಲುಪಿದರೋ, ಆಗ ಇಬ್ಬರೂ ಲಂಗೋಟ* ಹಾಕಿಕೊಂಡು, ಮಣ್ಣು ಬಳಿದುಕೊಂಡು, ಜೋರಾಗಿ ಕಾದಾಡತೊಡಗಿದರು.

'ಶೂಲದ ಮೇಲೆ ನಾನು ಏರುವೆನು', ಎಂದು ಗುರು ಹೇಳಿದನು.

ಶಿಷ್ಯ— ನಾನಿರುವಾಗ ಗುರುವು ಶೂಲವನ್ನೇರುವುದು ಶಿಷ್ಯನ ಧರ್ಮವಲ್ಲ!

ಗುರು— ನನ್ನ ಎದುರಿಗೇ ಶಿಷ್ಯನು ಶೂಲವನ್ನೇರುವುದು ನನ್ನ ಧರ್ಮವೂ ಅಲ್ಲ! ಆದರೆ, ನನ್ನನ್ನು ಕೊಂದು, ನಂತರ, ಬೇಕಾದರೆ ಶಿಷ್ಯನು ಶೂಲಕ್ಕೇರಿ ಬಿಡಲಿ!

'ಏಕೋ, ಬೊಗಳುತ್ತೀಯಾ? ಬಾಯಿ ಮುಚ್ಚು$! ಹೊತ್ತಾಗುತ್ತಿದೆ!'

ಹೀಗೆ ಹೇಳಿ, ಶೂಲವನ್ನೇರ ತೊಡಗಿದನು.

ಆಗ, ಶಿಷ್ಯನು ಗುರುವನ್ನು ಹಿಡಿದುಕೊಂಡು, ತಳ್ಳಿ, ದೂರ ಮಾಡಿದನು. [ಮತ್ತು] ತಾನೇ ಏರತೊಡಗಿದನು.

ಮತ್ತೆ ಗುರುವೂ ಕೂಡ, ಹಾಗೆಯೇ ಮಾಡಲಾರಂಭಿಸಿದನು.

ಅಷ್ಟರ ತನಕ ಐಲುಪೈಲಿನ ವ್ಯವಸ್ಥಾಪಕ ಸಿಪಾಯಿಗಳು ಎಲ್ಲಾ ತಮಾಷೆಯನ್ನೂ ನೋಡುತ್ತಿದ್ದರು.

'ನೀವು ಶೂಲದ ಮೇಲೆ ಏರುವುದಕ್ಕಾಗಿ ಏಕೆ ಕಾದಾಡುತ್ತಿದ್ದೀರಿ?', ಎಂದು ಕೇಳಿದರು.

ಆಗ, **ಸಾಧುಗಳಿಬ್ಬರೂ** —'ನಮ್ಮಿಂದ ಈ ಮಾತನ್ನು ಕೇಳಬೇಡಿ. ಏರಗೊಡಿರಿ! ಏಕೆಂದರೆ, ನಮಗೆ ಇಂತಹ ಸಮಯವು [ಮತ್ತೆ] ಸಿಗುವುದು ದುರ್ಲಭವಾಗುತ್ತದೆ', ಎಂದು ಹೇಳಿದರು.

ಈ ಕಡೆ, ಈ ಸಂಗತಿ ಹೀಗೆಯೇ ನಡೆಯುತ್ತಿತ್ತು.

(ಐಲುದೊರೆಯ ದರ್ಬಾರಿನಲ್ಲಿ ಬದನೆಕಾಯಿಯ ಪ್ರಶಂಸೆ)

ಮತ್ತು ಆ ಕಡೆ ಐಲು [ರಾಜ]ನ ಬಳಿ ಭಟ್ಟಂಗಿಗಳ ಸಭೆ ನೆರೆದಿತ್ತು.

'ಮಹಾಸ್ವಾಮಿ'ಗಳು ಅಲ್ಲಿಂದ ಎದ್ದು ಹೋಗಿ, ಭೋಜನ ಮಾಡಿಕೊಂಡು [ಬಂದು], ಸಿಂಹಾಸನದ ಮೇಲೆ ಕುಳಿತುಕೊಂಡು, ಎಲ್ಲರೊಡನೆ — 'ಬದನೇಕಾಯಿಯ ಪಲ್ಯ ಅತ್ಯುತ್ತಮವಾಗಿರುತ್ತದೆ', ಎಂದು ಹೇಳಿದರು.

---

* ಇಂದ್ರಿಯ ನಿಗ್ರಹಕ್ಕೆ ಆವಶ್ಯಕವಾದಷ್ಟು ಅಳತೆ ಇರುವುದು ಲಂಗೋಟ! ಕುಸ್ತಿ-ವ್ಯಾಯಾಮಕ್ಕಾಗಿ ಆವಶ್ಯಕವಾದಷ್ಟು ದೊಡ್ಡದಾಗಿರುವುದು ಲಂಗೋಟ!

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

[ಇದನ್ನು] ಕೇಳಿ, **ಭಟ್ಟಂಗಿಗಳು** — 'ಮಹಾರಾಜರ ಬುದ್ಧಿಗೆ ಏನು ಹೇಳೋಣ! ಬದನೇಕಾಯಿಯ ಪಲ್ಯವನ್ನು ಸವಿದೊಡನೆಯೇ, ಕೂಡಲೇ ಅದರ ಪರೀಕ್ಷೆಯನ್ನು ಮಾಡಿ ಬಿಟ್ಟರು.

'ಮಹಾರಾಜರೇ! ಆಲಿಸೋಣವಾಗಲಿ! ಬದನೇಕಾಯಿ ಚೆನ್ನಾಗಿರುವುದರಿಂದಲೇ, ಪರಮೇಶ್ವರನು ಅದರ ಮೇಲೆ ಕಿರೀಟವನ್ನಿಟ್ಟು, ನಾಲ್ಕೂ ಕಡೆಯೂ ಗರಿಗೀನ್ನೂ [ಸಿಕ್ಕಿಸಿ], ಹೊರಗಿನ ವರ್ಣವನ್ನು ಮೇಘದ ಕಂದು ಬಣ್ಣದಂತೆ [ಮಾಡಿ], ಒಳಗಿನ ವರ್ಣವನ್ನು ಬೆಣ್ಣೆಯಂತೆ ಮಾಡಿದ್ದಾನೆ', ಎಂದು ಹೇಳಿದರು.

ಇದನ್ನು ಕೇಳಿ, ಐಲು ದೊರೆ ಮತ್ತು ಸಭೆಯ ಜನರೆಲ್ಲರೂ ಅತಿ ಪ್ರಸನ್ನರಾಗಿ, ನಕ್ಕರು.

ಯಾವಾಗ ಐಲು ದೊರೆಯು ತನ್ನ ಅರಮನೆಗೆ ಮಲಗಲು ಹೋದನೋ, [ಆಗ] ಮಹಾದ್ವಾರವು ಮುಚ್ಚಲ್ಪಟ್ಟಿತು.

(ಭಟ್ಟಂಗಿಗಳ ಕುತಂತ್ರ)

ಆಗ ಬಟ್ಟಂಗಿಗಳು ಠಾಣೆಯ ಕಾವಲುಗಾರರಿಗೆ— 'ಬೆಳಿಗ್ಗೆ ಎಲ್ಲಿನ ತನಕ ನಾವು ಬರುವುದಿಲ್ಲವೋ, ಅಲ್ಲಿನ ತನಕ ಮಹಾರಾಜರೊಡನೆ ಯಾರ ಭೇಟಿಯನ್ನೂ ಮಾಡಗೊಡಕೂಡದು', ಎಂದು ಹೇಳಿದರು.

ಅವರು — 'ಆಗಲಿ! [ಆದರೆ], ಇವತ್ತಿನ ದಿನ ಸ್ವಲ್ಪ ಭಾರಿಯಾದದ್ದೇನೂ [ನಮಗೆ] ಸಿಗಲಿಲ್ಲ', ಎಂದು ಹೇಳಿದರು.

ಭಟ್ಟಂಗಿಗಳು— ಇಪತ್ತಾಗದಿದ್ದರೇ[ನು?] ನಾಳೆ ಆಗಿ ಬಿಡುವುದು! ನಮ್ಮದು ಮತ್ತು ನಿಮ್ಮದು ಪಾಲುಗಾರಿಕೆಯೇ ಅಲ್ಲವೇ? ಖಜಾನೆ ಮತ್ತು ಪ್ರಜೆಗಳಿಂದ ಏನೆಷ್ಟು ಕಸಿಯಲ್ಪಟ್ಟು, ನಮ್ಮ ಮನೆ ಸೇರುವುದೋ, ಅದೇ ನಮ್ಮದು!

'ಯಾವಾಗ ರಾಜನನ್ನು ನಶೆ ಮತ್ತು ಸೂಳೆಗಾರಿಕೆ ಮೊದಲಾದ ಆಟಗಳಲ್ಲಿ ನಾವೆಲ್ಲರೂ ಸೇರಿ, [ಸಿಕ್ಕಿ] ಹಾಕಿಸಿ ಬಿಡುತ್ತೇವೋ, ಖಜಾನೆ ನಮ್ಮದೇ ಅಲ್ಲವೇ!

'ಮತ್ತು ಎಲ್ಲರೂ ಪರಸ್ಪರ ಸಂಘಟಿತರಾಗಿರಿ! ವಿಘಟಿತರಾಗಬಾರದು!'

ಎಲ್ಲರೂ— 'ಹೌದು, ಸ್ವಾಮಿ! ಹೌದು! ಇದೇ ಸರಿ', ಎಂದು ಹೇಳಿದರು.

ಅವರಂತೂ ಹೊರಟು ಹೋದರು.

(ರಾತ್ರಿಯಲ್ಲಿ ಐಲುದೊರೆಯ ಫಜೀತಿ)

ಯಾವಾಗ ಐಲು [ದೊರೆಯು] ಮಲಗಲು ಹೋದನೋ, ಆಗ ತೀಕ್ಷ್ಣ ಮಸಾಲೆ ಬಿದ್ದಿರುವ ಬದನೆಕಾಯಿ ಪಲ್ಯವು, ಉಷ್ಣವನ್ನುಂಟು ಮಾಡಿತು! ಮತ್ತೆ ಮಲತ್ಯಾಗಕ್ಕೆ 'ಅವಸರ'ವಾಯಿತು!

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಂಬಿಗೆ ಹಿಡಿದುಕೊಂಡು ಕಕ್ಕಸಿಗೆ ಹೊರಟನು. ರಾತ್ರಿಯೆಲ್ಲಾ ಚೆನ್ನಾಗಿ ಭೇದಿಯಾಯಿತು. ರಾತ್ರಿಯಲ್ಲಿ ಮೂವತ್ತರಷ್ಟು ಭೇದಿ ಆಯಿತು!

ರಾತ್ರಿಯೆಲ್ಲಾ ನಿದ್ರೆ ಬರಲಿಲ್ಲ. ಬಹಳ ವ್ಯಾಕುಲವಾಗಿತ್ತು. ಅದೇ ಸಮಯ ವೈದ್ಯರನ್ನು ಕರೆಸಿದನು.

ಅವರೂ ಕೂಡ, ಐಲು[ದೊರೆ]ಯಂತೆಯೇ ಇದ್ದರು. ಯದ್ವಾ ತದ್ವಾ ಔಷಧವನ್ನು ಕೊಟ್ಟರು. ಅವು ಇನ್ನಷ್ಟು ಕೆಡುಕನ್ನುಂಟು ಮಾಡಿದುವು.

ಏಕೆಂದರೆ, ಐಲುಪೈಲಿನ ಬಳಿ ಬುದ್ಧಿವಂತರು ಏತಕ್ಕಾಗಿ ನಿಲ್ಲಬಲ್ಲರು?

(ಭಟ್ಟಂಗಿಗಳ ಚಿಂತೆ)

ಯಾವಾಗ ಬೆಳಗಾಯಿತೋ, ಆಗ ಭಟ್ಟಂಗಿಗಳ ಮಂಡಳಿಯು ಸಭಾಸ್ಥಾದಲ್ಲಿ ಜಮಾಯಿಸಿಕೊಂಡು— 'ಮಹಾರಾಜರು ಏನು ಮಾಡುತ್ತಿದ್ದಾರೆ?', ಎಂದು ದಾಸಿಯರನ್ನು ಕೇಳಿದರು.

ದಾಸಿ— ಇಂದು ರಾತ್ರಿಯೆಲ್ಲಾ ಭೇದಿಯಾಯಿತು. ಬಹಳ ತಳಮಳದಿಂದಿದ್ದಾರೆ.

ಭಟ್ಟಂಗಿ— ರಾತ್ರಿಯಲ್ಲಿ ಯಾರಾದರೂ ಮಹಾರಾಜರ ಬಳಿಗೆ ಬಂದಿದ್ದರೇನು?

ದಾಸಿ— ಹತ್ತು-ಹನ್ನೆರಡು ಮಂದಿ ಬಂದಿದ್ದರು.

ಭಟ್ಟಂಗಿ— ಯಾರು ಯಾರು ಬಂದಿದ್ದರು? ಅವರ ಹೆಸರುಗಳನ್ನೂ ಕೂಡ, ತಿಳಿದಿದ್ದೀಯೇನು?

ದಾಸಿ— ಹೌದು! ಮೂವರ ಹೆಸರನ್ನು ಬಲ್ಲೆ; ಇತರರದನ್ನಲ್ಲ!

ಆಗಂತೂ **ಭಟ್ಟಂಗಿಗಳು** — 'ಯಾವನಾದರೂ ನಮ್ಮ ನಿಂದೆಯನ್ನಂತೂ ಮಾಡಿಬಿಟ್ಟಿರಲಿಲ್ಲವಲ್ಲಾ?', ಎಂದು ಯೋಚಿಸತೊಡಗಿದರು.

'ಇವತ್ತಿನಿಂದ ನಮ್ಮಲ್ಲಿನ ಒಬ್ಬಿಬ್ಬರು ಜನರು ರಾತ್ರಿಯಲ್ಲೂ ಕೂಡ, ಮಹಾದ್ವಾರದ ಬಳಿ ಅವಶ್ಯವಾಗಿರಬೇಕಾಗುತ್ತದೆ!'

ಎಲ್ಲರೂ — 'ಬಹಳ ಒಳ್ಳೆಯದು', ಎಂದು ಹೇಳಿದರು.

(ದರ್ಬಾರಿನಲ್ಲಿ ಬದನೆಕಾಯಿಯ ನಿಂದೆ)

ಇಷ್ಟರಲ್ಲೇ ಎಂಟು ಗಂಟೆಯ ಸಮಯಕ್ಕೆ ಐಲುರಾಜನು ಮ್ಲಾನಮುಖವುಳ್ಳವನಾಗಿ ಬಂದು, ಗದ್ದುಗೆಯ ಮೇಲೆ ಕುಳಿತನು.

ಆಗ, ಭಟ್ಟಂಗಿಗಳೂ ಕೂಡ, ಅವನದಕ್ಕಿಂತ ನೂರರಷ್ಟು ಮುಖವನ್ನು ಕೆಡಿಸಿಕೊಂಡು, [ಎಂದರೆ] ಶೋಕದಿಂದ ತುಂಬಿದ ಮುಖವಂತರಾಗಿ, ಹೊರಗಿನಿಂದ ಕೃತ್ರಿಮವಾಗಿ ತಮ್ಮ ಅಂಗಚೇಷ್ಟೆಯನ್ನು ತೋರಿಸಿದರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಐಲುದೊರೆ— ಬದನೇಕಾಯಿಯ ಪಲ್ಯವು ತಿನ್ನುವುದರಲ್ಲಂತೂ ರುಚಿಕರವಾಗಿರುತ್ತದೆ. ಆದರೆ, ವಾತಕಾರಕವಾಗಿರುತ್ತದೆ. ಆದರಿಂದ ನಮಗೆ ಬಹಳ ಭೇದಿಗಳಾಗಿ, ರಾತ್ರಿಯೆಲ್ಲಾ ಕಷ್ಟ$ವಾಯಿತು.

ಭಟ್ಟಂಗಿಗಳು— ಆಹ್ಹಾ! ಮಹಾರಾಜರೇ! [ತಾವು] ಧನ್ಯರು! ತಮ್ಮಂತಹ ಯಾವ ರಾಜನೂ [ಮೊದಲು] ಆಗಿಲ್ಲ! ಮತ್ತು [ಮುಂದೆಯೂ] ಆಗುವುದಿಲ್ಲ! ಮತ್ತು ಈ ಸಮಯದಲ್ಲೂ [ಕೂಡ], ಯಾವನೂ ಇಲ್ಲ!

ಏಕೆಂದರೆ, ಮಹಾರಾಜರು ತಿನ್ನುವ ಸಮಯದಲ್ಲಂತೂ ಅದರ ಗುಣಗಳನ್ನು ಪರೀಕ್ಷಿಸಿದ್ದರು. ಮತ್ತು ರಾತ್ರಿಯಷ್ಟರಲ್ಲಿ ದೋಷವನ್ನೂ ಕೂಡ, ಅರಿತುಕೊಂಡುಬಿಟ್ಟರು!

ನೋಡಿ, ಮಹಾರಾಜರೇ! ಬದನೇಕಾಯಿ ದುಷ್ಟವಾಗಿರುವುದರಿಂದಲೇ, ಪರಮೇಶ್ವರನು ಅದರ [ತಲೆಯ] ಮೇಲೆ ಗೂಟವನ್ನೂ, ನಾಲ್ಕೂ ಕಡೆಯೂ ಮುಳ್ಳುಗಳನ್ನೂ ಹೊಡೆದುಬಿಟ್ಟನು. ಹೊರಗಿನ ಬಣ್ಣವನ್ನು ಇದ್ದಲಿನದರಂತೆಯೂ, ಮತ್ತು ಒಳಗಿನ ಬಣ್ಣವನ್ನು ಕುಷ್ಠರೋಗಿಯ ಚರ್ಮದಂತೆಯೂ ಮಾಡಿದ್ದಾನೆ.

ಐಲುದೊರೆ— ಏನ್ರೀ! ನಿನ್ನೆ ರಾತ್ರಿಯಂತೂ ನೀವು ಇದರ ಪ್ರಶಂಸೆಯಲ್ಲಿ ಕಿರೀಟ ಮೊದಲಾದ ಅಲಂಕಾರಗಳನ್ನು ಹಾಕಿ, ಈ ಸಮಯದಲ್ಲಿ ಅದರ ನಿಂದೆಯಲ್ಲಿ ಗೂಟ ಮೊದಲಾದುವುಗಳ ಉಪಮೆಯನ್ನು ಹೇಳುತ್ತಿದ್ದೀರಲ್ಲಾ? ಈಗ, ನಾವು ಯಾವುದನ್ನು ಸರಿ, ಎಂದು ಅಂಗೀಕರಿಸೋಣ!

ಭಟ್ಟಂಗಿಗಳು ಗಾಬರಿಯಿಂದ — "ಸಾಧು! ಸಾಧು! ತಮ್ಮ ವಿಶಾಲ ಬುದ್ಧಿಗೆ ಸಾಧು!!

'ಏಕೆಂದರೆ, ನಿನ್ನೆ ಸಾಯಂಕಾಲದ ಮಾತನ್ನು ಈವರೆಗೂ ಕೂಡ, [ತಾವು] ಮರೆತಿಲ್ಲ!

'ಆಲಿಸಿರಿ, ಮಹಾರಾಜರೇ! ಈ ಬಡ್ಡಿಮಗ* ಬದನೆಕಾಯಿಯಿಂದ ನಾವು ತೆಗೆದುಕೊಳ್ಳಬೇಕಾದ್ದೇನಿತ್ತು? ಕೊಡಬೇಕಾದ್ದೇನಿತ್ತು?

'ನಮಗಂತೂ ತಮ್ಮ ಪ್ರಸನ್ನತೆಯಲ್ಲಿ ಪ್ರಸನ್ನತೆ, ಮತ್ತು ಅಪ್ರಸನ್ನತೆಯಲ್ಲಿ ಅಪ್ರಸನ್ನತೆ ಇರುತ್ತದೆ.

'ತಾವು ರಾತ್ರಿಯನ್ನು ಹಗಲು ಎಂದೂ, ಮತ್ತು ಹಗಲನ್ನು ರಾತ್ರಿ, ಎಂದೂ; ಹಾಗೂ ಸತ್ಯವನ್ನು ಸುಳ್ಳು, ಎಂದೂ, ಮತ್ತು ಸುಳ್ಳನ್ನು ಸತ್ಯ, ಎಂದೂ ಹೇಳಿದರೆ — 'ಎಲ್ಲವೂ ಸರಿಯೇ!!, ಎಂದು [ನಾವು] ಹೇಳುತ್ತೇವೆ", ಎಂದು ಹೇಳಿದರು.

---

* ಹಿಂದಿಯಲ್ಲಿ 'ಸಾಲೇ', ಎಂಬ ಪ್ರಯೋಗವಿದೆ. ಇದರರ್ಥ ಹೆಂಡತಿಯ ತಮ್ಮ, ಎಂದು. ಉತ್ತರ ಭಾರತದಲ್ಲಿ ಜನಸಾಮಾನ್ಯರು ಯಾವಾಗಲೂ ಬೈಯುವುದಕ್ಕೂ ಅಥವಾ ಏನೂ ಅರ್ಥ ಪ್ರಸಂಗ ಇಲ್ಲದೆಯೂ, ಈ ಪದವನ್ನು ಲೋಕಾಭಿರಾಮವಾಗಿ ಉಪಯೋಗಿಸುತ್ತಾರೆ. ಹೆಂಗಸರನ್ನು ಬೈಯುವಾಗ— 'ಸಾಲೀ', ಎಂಬ ಪದ ಉಪಯೋಗಿಸುತ್ತಾರೆ. ಇದರರ್ಥ- ಹೆಂಡತಿಯ ತಂಗಿ, ಎಂದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಐಲುದೊರೆ— ಹೌದು! ಹೌದು! ಎಂದಿಗೂ ಸ್ವಾಮಿಯ ಯಾವ ಮಾತಿಗೂ ಪ್ರತ್ಯುತ್ತರ ಕೊಡದೇ,—'ಹೌದು ಸ್ವಾಮಿ! ಹೌದು ಸ್ವಾಮಿ!', ಎಂದೇ ಹೇಳುತ್ತಿರುವುದು ನೌಕರರ ಏಕಮಾತ್ರ ಧರ್ಮ ಆಗಿರುತ್ತದೆ.

(ಭಟ್ಟಂಗಿಗಳಿಂದ 'ರಾಜಧರ್ಮ'ದ(?) ಉಪದೇಶ)

ಭಟ್ಟಂಗಿಗಳು— ಸರಿ! ರಾಜರುಗಳ ಏಕಮಾತ್ರ ಧರ್ಮವೇನೆಂದರೆ—

ಯಾವ ವಿಷಯದ ಚಿಂತೆಯನ್ನೂ ಎಂದಿಗೂ ಮಾಡಬಾರದು!

ರಾತ್ರಿ-ಹಗಲು ತಮ್ಮ ಸುಖದಲ್ಲೇ ಮಗ್ನರಾಗಿರಬೇಕು!

ನೌಕರ-ಚಾಕರರ ಮೇಲೆ ಯಾವಾಗಲೂ ವಿಶ್ವಾಸವನ್ನಿಟ್ಟು, ಎಲ್ಲಾ ಕೆಲಸಗಳನ್ನೂ ಅವರ ಅಧೀನದಲ್ಲಿಡಬೇಕು!

ವ್ಯಾಪಾರಿ-ಗುಮಾಸ್ತರಂತೆ ಲೆಕ್ಕ-ಪತ್ರಗಳನ್ನು ಎಂದಿಗೂ ಅವಲೋಕಿಸಬಾರದು!

ಬಿಳಿಯದನ್ನು ಕರಿಯದನ್ನಾಗಿಯೂ, ಮತ್ತು ಕರಿಯದನ್ನು ಬಿಳಿಯದನ್ನಾಗಿಯೂ ಮಾಡಿದರೆ, ಅದನ್ನೇ ಸರಿ, ಎಂದು ತಿಳಿಯಬೇಕು!*

ಯಾವ ವೃಕ್ಷವನ್ನು ನೆಡುತ್ತಾರೋ, ಅದನ್ನು ಎಂದಿಗೂ ಕತ್ತರಿಸಬಾರದು!+

ಯಾವನನ್ನು ಹಿಡಿದರೋ, ಅವನನ್ನು ಎಂದಿಗೂ ಬಿಡಬಾರದು; ಬೇಕಾದರೆ, ಎಷ್ಟೇ [ಕಡಿಮೆ] ಅಪರಾಧ ಮಾಡಲೀ!

ಏಕೆಂದರೆ, ರಾಜರಾಗಿಯೂ ಕೂಡ, ಯಾವ ಕೆಲಸದ ಮೇಲಾದರೂ ತಾವು ಧ್ಯಾನ ಕೊಟ್ಟು, ತಮ್ಮ ಆತ್ಮಾ ಮನಸ್ಸು, ಮತ್ತು ಶರೀರದಿಂದ ಪರಿಶ್ರಮ ಮಾಡಿದರೆ, ತಮ್ಮ ಕರ್ಮ ವ್ಯರ್ಥವಾಯಿತೆಂದು ತಿಳಿಯಿರಿ!

ಮತ್ತು ಯಾವಾಗ [ರಾಜನು] ಲೆಕ್ಕ ಮೊದಲಾದುವುಗಳ ಮೇಲೆ ಕಣ್ಣು ಹಾಯಿಸುತ್ತಾನೋ, [ಆಗ] ಅವನು ಮಹಾದರಿದ್ರನಾಗಿರುತ್ತಾನೆ; ರಾಜನಾಗಿರುವುದಿಲ್ಲ!

(ಐಲುದೊರೆ 'ಸಾಕ್ಷಾತ್ ಪರಮೇಶ್ವರ!')

ಐಲುದೊರೆ — ಏನ್ರೀ! ಎಂದಾದರೂ ನನ್ನಂತಹ ರಾಜಾ ಮತ್ತು ನಿಮ್ಮಂತಹ ಸಭಾಸದರು ಯಾರಾದರೂ ಇದ್ದಿರಬಹುದೋ? ಮತ್ತು ಮುಂದೆ ಯಾರಾದರೂ ಆಗಬಹುದೋ, ಅಥವಾ ಇಲ್ಲವೋ?

---

* ಎಂದರೆ, ಲೆಕ್ಕ-ಪತ್ರಗಳಲ್ಲಿ ಮಾಡುವ ವಂಚನೆ.

\+ ಎಂದರೆ, ಮನೆಗಾಗಿ ಉಪಯೋಗಿಸಬಾರದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭಟ್ಟಂಗಿಗಳು— ಇಲ್ಲ! ಎಂದಿಗೂ ಇಲ್ಲ! ಇರಲೂ ಇಲ್ಲ, ಇರುವುದೂ ಇಲ್ಲ ಮತ್ತು ಇಲ್ಲವೂ ಇಲ್ಲ!

ಐಲುದೊರೆ— ನಿಜ! ಏನು, ಈಶ್ವರನೂ ಕೂಡ, ನಮಗಿಂತ ಹೆಚ್ಚು ಉತ್ತಮನಿರಬಹುದೋ?

ಭಟ್ಟಂಗಿಗಳು— ಎಂದಿಗೂ ಇರಲಾರನು! ಏಕೆಂದರೆ, ಅವನನ್ನು ಯಾವನು ನೋಡಿದ್ದಾನೆ?

'ತಾವಂತೂ ಸಾಕ್ಷಾತ್ ಪರಮೇಶ್ವರ ಆಗಿದ್ದೀರಿ! ಏಕೆಂದರೆ, ತಮ್ಮ ಕೃಪೆಯಿಂದ ದರಿದ್ರನು ಧನಾಢ್ಯನೂ, ಅಯೋಗ್ಯನು ಯೋಗ್ಯನೂ [ಆಗಬಲ್ಲನು]; ಮತ್ತು ಕೃಪೆ ಇಲ್ಲದಿದ್ದರೆ, ಧನಾಢ್ಯನು ದರಿದ್ರನೂ, ಯೋಗ್ಯನು ಅಯೋಗ್ಯನೂ ತತ್ಕಾಲವೇ ಆಗಿಬಿಡಬಲ್ಲನು!,

ಇಷ್ಟರಲ್ಲಿಯೇ, [ಮೊದಲು] ನಿರ್ಧರಿಸಿದಂತೆ, ಪ್ರಾತಃಕಾಲವನ್ನು ಸಾಯಂಕಾಲ, ಎಂದು ಅಂಗೀಕರಿಸಿ, ಎಲ್ಲರೂ ಮಲಗುವುದಕ್ಕಾಗಿ ಹೋದನು.

(ಶೂಲಕ್ಕೇರಿ ಐಲುದೊರೆಯ ಮರಣ)

ಯಾವಾಗ ಸಾಯಂಕಾಲವಾಯಿತೋ, ಆಗ ಮತ್ತೆ ಸಭೆ ಸೇರಿತು.

ಇಷ್ಟರಲ್ಲಿ ಸಿಪಾಯಿಗಳು ಬಂದು, ಸಾಧುಗಳ ಕಲಹದ ವಾರ್ತೆಯನ್ನು ತಿಳಿಸಿದರು.

[ಇದನ್ನು] ಕೇಳಿ, ಐಲುದೊರೆಯು ಸಭೆಯ ಜೊತೆಗೆ ಅಲ್ಲಿಗೆ ಹೋಗಿ, ಸಾಧುಗಳನ್ನು—

'ನೀವು ಶೂಲದ ಮೇಲೆ ಏರುವುದನ್ನು ಸುಖ, ಎಂದು ಏಕೆ ಅಂಗೀಕರಿಸುತ್ತೀರಿ?', ಎಂದು ಕೇಳಿದನು.

ಸಾಧು— ನೀವು ನಮ್ಮನ್ನು ಕೇಳಬೇಡಿರಿ! ಏರಗೊಡಿರಿ! ಸಮಯ ಹೊರಟು ಹೋಗುತ್ತಿದೆ. ಇಂತಹ ಸಮಯವು ನಮಗೆ ದೊಡ್ಡ ಭಾಗ್ಯದಿಂದ ಸಿಕ್ಕಿದೆ.

ಐಲುದೊರೆ— ಈ ಸಮಯದಲ್ಲಿ ಶೂಲದ ಮೇಲೆ ಏರುವುದರಿಂದ ಏನು ಫಲವಾಗುತ್ತದೆ?

ಸಾಧು— ನಾವು ಹೇಳುವುದಿಲ್ಲ! ಯಾವನು ಏರುತ್ತಾನೋ, ಅವನು ಫಲವನ್ನು ಕಂಡುಕೊಳ್ಳುವನು. ನಮ್ಮನ್ನು ಏರಲು ಬಿಡಿರಿ!

ಐಲುದೊರೆ — ಇಲ್ಲ, ಇಲ್ಲ! ಯಾವ ಫಲವು ಉಂಟಾಗುವುದೋ, ಅದನ್ನು ಹೇಳಿ!

'ಸಿಪಾಯಿಗಳೇ! ಇವರನ್ನು ಇಲ್ಲಿಗೆ ಹಿಡಿದು ತನ್ನಿ!,

[ಅವರು] ಹಿಡಿದು ತರಲ್ಪಟ್ಟರು.

ಸಾಧು— ನಮ್ಮನ್ನು ಏಕೆ ಏರಲು ಬಿಡುವುದಿಲ್ಲ? ಜಗಳ ಏಕೆ ಆಡುತ್ತೀರಿ?

ಐಲುದೊರೆ— ಎಲ್ಲಿನ ತನಕ ನೀವು ಇದರ ಫಲವನ್ನು ಹೇಳುವುದಿಲ್ಲವೋ, ಅಲ್ಲಿನ ತನಕ ನಾವು ಎಂದಿಗೂ ಏರಲು ಬಿಡುವುದಿಲ್ಲ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಾಧು— ಇನ್ನೊಬ್ಬನಿಗೆ ತಿಳಿಸುವ$ ಮಾತಂತೂ ಅಲ್ಲ! ಆದರೆ, ನೀವು ಹಠ ಮಾಡುತ್ತಿದ್ದೀರಿ. ಆದ್ದರಿಂದ ಕೇಳಿ—

ಯಾವನಾದರೂ ಮನುಷ್ಯನು ಈ ಸಮಯದಲ್ಲಿ ಶೂಲವನ್ನು ಏರಿ, ಪ್ರಾಣತ್ಯಾಗ ಮಾಡುವನೋ, ಅವನು ಚತುರ್ಭುಜನಾಗಿ, ವಿಮಾನದಲ್ಲಿ ಕುಳಿತುಕೊಂಡು, ಆನಂದರೂಪನಾಗಿ, ಸ್ವರ್ಗಕ್ಕೆ ತಲುಪುವನು!

ಐಲುದೊರೆ— ಓಹೋ! ಹೀಗಿದೆಯೋ ಸಂಗತಿ! ಹಾಗಾದರೆ, ನಾನೇ ಏರುತ್ತೇನೆ. ನಿನ್ನನ್ನು ಏರಗೊಡುವುದಿಲ್ಲ!

ಹೀಗೆ ಹೇಳಿ, ತಟಕ್ಕನೇ, ತಾನಾಗಿಯೇ ಶೂಲವನ್ನು ಏರಿ, ಪ್ರಾಣಬಿಟ್ಟನು!

ಸಾಧುಗಳು ತಮ್ಮ ಬಿಡಾರಕ್ಕೆ$ ಬಂದರು.

ಶಿಷ್ಯನು—'ಗುರುಗಳೇ$! ಹೊರಡೋಣ! ಈಗ ಇಲ್ಲಿರಬಾರದು!', ಎಂದು ಹೇಳಿದನು.

ಗುರುವು— 'ಈಗ ಸ್ವಲ್ಪವೂ ಚಿಂತೆಯಿಲ್ಲ! ಪಾಪದ ಬೇರು ಆಗಿ ಐಲುದೊರೆ ಇದ್ದನೋ, ಅವನಂತೂ ಸತ್ತು ಹೋದನು. ಈಗ ಧರ್ಮದ ರಾಜ್ಯ ಆಗುವುದು. ಚಿಂತೆಯೇಕೆ? ಇಲ್ಲೇ ಇರು', ಎಂದು ಹೇಳಿದನು.

('ಪ್ರಕಾಶವತೀ' ನಗರಿಗೆ ನ್ಯಾಯವ್ಯವಸ್ಥೆ ವಾಪಸು)

ಐಲುದೊರೆಯ ತಮ್ಮನು ದೊಡ್ಡ ವಿದ್ವಾಂಸನೂ, [ತನ್ನ] ತಂದೆಯಂತೆ ಧಾರ್ಮಿಕನೂ ಆಗಿದ್ದನು.

ಐಲುದೊರೆಯು ತನ್ನ ತಂದೆಯ ಮರಣಾನಂತರ, ತನ್ನ ತಂದೆಯಂತೆ ಧಾರ್ಮಿಕರಾದ ಸಭಾಸದರೂ ಮತ್ತು ಪ್ರಜೆಗಳಲ್ಲಿ ಸತ್ಪುರುಷರೂ ಆದವರನ್ನು [ರಾಜ್ಯದಿಂದ] ಹೊರದೂಡಿದ್ದನು. ಅವರೆಲ್ಲರೂ ಈ ಸಮಯದಲ್ಲಿ [ವಾಪಸು] ಬಂದು, **'ಸುನೀತಿ'**, ಎಂಬ ಹೆಸರಿನ ಆ ತಮ್ಮನನ್ನು ರಾಜ್ಯಾಧಿಕಾರಿಯನ್ನಾಗಿ ಮಾಡಿದರು.

ಮತ್ತು ಐಲು ದೊರೆಯ$ ಶವವನ್ನು ಶೂಲ[ಕಂಬ]ದಿಂದ ಕೆಳಗಿಳಿಸಿ, ಸುಟ್ಟುಬಿಟ್ಟರು.

ಭಟ್ಟಂಗಿಗಳ ಮಂಡಳಿಗೆ ಅತ್ಯಂತ ಉಗ್ರ ಶಿಕ್ಷೆಯನ್ನು ಕೊಟ್ಟು, ಕೆಲವರನ್ನು ಜೈಲಿಗೆ ಹಾಕಿದರು. ಮತ್ತು ಬಹಳ ಮಂದಿಗಳನ್ನು ನೌಕೆಯಲ್ಲಿ ಕೂಡಿಸಿ, ಸಮುದ್ರದ ಮಧ್ಯೆ ಇದ್ದ, ದೂರದ ಯಾವುದೋ ನಿರ್ಜನ ದ್ವೀಪದಲ್ಲಿ ಕಾರಾಗೃಹದಲ್ಲಿ ಹಾಕಿದರು.

[ನಂತರ,] ಅತ್ಯುತ್ತಮ ವಿದ್ವಾಂಸರೂ, ಧಾರ್ಮಿಕರೂ ಆದವರ ಸಮ್ಮತಿಯಂತೆ ಶ್ರೇಷ್ಠರ ಪಾಲನೆಯನ್ನೂ, ದುಷ್ಟರ ತಾಡನವನ್ನೂ, ವಿದ್ಯೆ, ವಿಜ್ಞಾನ ಮತ್ತು ಸತ್ಯ-ಧರ್ಮಗಳ ವೃದ್ಧಿ, ಮೊದಲಾದ ಉತ್ತಮ ಕರ್ಮಗಳನ್ನೂ ಮಾಡುತ್ತಾ, ಪುರುಷಾರ್ಥದಿಂದ, ಯಥಾಯೋಗ್ಯವಾಗಿ ರಾಜ್ಯದ ಪ್ರಬಂಧವನ್ನು ನಡೆಸತೊಡಗಿದರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮತ್ತು ಪುನಃ ಪ್ರಕಾಶವತೀ ನಗರಿಯಲ್ಲಿ ['ಯಥಾಯೋಗ್ಯಕಾರಕ'], ಎಂಬ ಹೆಸರಿನ ವ್ಯವಸ್ಥೆಯನ್ನು ನಡೆಸತೊಡಗಿದರು.

ಆಗ, ಮತ್ತೆ, ನಗರಿಯ **'ಪ್ರಕಾಶವತೀ'**, ಎಂಬ ಹೆಸರು ಪ್ರಸಿದ್ಧವಾಯಿತು. ಮತ್ತು ಉಚಿತ ಸಮಯದಲ್ಲಿ ಎಲ್ಲಾ ಉತ್ತಮ ಕೆಲಸಗಳೂ ಆಗ ತೊಡಗಿದುವು.

(ನೀತಿ)

(ದೇಶದ ಅಭಾಗ್ಯ-ಸೌಭಾಗ್ಯಗಳ ಪರಿಣಾಮ)

ಯಾವಾಗ ದೇಶದ ಜನರ ಅಭಾಗ್ಯದ ಉದಯವಾಗುತ್ತದೋ—

ಆಗ ಐಲುದೊರೆಯಂತಹ ಸ್ವಾರ್ಥಿಯೂ, ಅಧರ್ಮಿಯೂ, [ಹಾಗೂ] ಪ್ರಜೆಗಳ ವಿನಾಶ ಮಾಡುವಂತಹವನಾದ ರಾಜನೂ;

ಧನಾಢ್ಯರೂ, ಮತ್ತು ಭಟ್ಟಂಗಿಗಳಿಂದಲೂ ಕೂಡಿದ ಸಭೆಯೂ;

ಮತ್ತು ಅವರಿಗೆ ಸಮತುಲ್ಯವಾಗಿ ಅಧರ್ಮಿಗಳೂ, ಉಪದ್ರವಿಗಳೂ, [ಹಾಗೂ] ರಾಜದ್ರೋಹಿಗಳೂ ಆದ ಪ್ರಜೆಗಳೂ ಕೂಡ, ಉಂಟಾಗುತ್ತಾರೆ.

ಮತ್ತು **ಯಾವಾಗ ದೇಶದ ಜನರ ಸೌಭಾಗ್ಯದ ಉದಯವುಂಟಾಗುವ [ಸಮಯ] ಬರುತ್ತದೋ—**

ಆಗ **'ಸುನೀತಿ'**ಯಂತಹ ಧಾರ್ಮಿಕನೂ, ವಿದ್ವಾಂಸನೂ, [ಪ್ರಜೆಗಳನ್ನು] ಪುತ್ರರಂತೆ [ನೋಡುವವನೂ] ಆದ [ರಾಜ]ನೂ;

ಪ್ರಜೆಗಳ ಪಾಲನೆ ಮಾಡುವ, ರಾಜನಿಂದೊಡಗೂಡಿದ ಸಭೆಯೂ;

ಮತ್ತು ಧಾರ್ಮಿಕನೂ, ಪುರುಷಾರ್ಥಿಯೂ ಆದ, ತಂದೆಗೆ ಸಮಾನರಾದ ರಾಜ್ಯವ್ಯವಸ್ಥೆಯಲ್ಲಿ, ಪ್ರೀತಿಯುಕ್ತರಾದ ಮಂಗಳಕಾರಿ ಪ್ರಜೆಗಳೂ ಉಂಟಾಗುತ್ತಾರೆ.

ಎಲ್ಲಿ ಅಭಾಗ್ಯೋದಯವಾಗುತ್ತದೋ,— ಅಲ್ಲಿ ವಿಪರೀತಬುದ್ಧಿಯುಳ್ಳ ಮನುಷ್ಯರು ಪರಸ್ಪರ ದ್ರೋಹವೇ ಮೊದಲಾದ ಸ್ವರೂಪಗಳಿಂದ [ಕೂಡಿದ್ದು], ಧರ್ಮಕ್ಕೆ ವಿಪರೀತವಾಗಿ ದುಃಖದ ಕೆಲಸಗಳನ್ನೇ ಮಾಡುತ್ತಾ ಹೋಗುತ್ತಾರೆ!

ಮತ್ತು **ಎಲ್ಲಿ ಸೌಭಾಗ್ಯೋದಯವಾಗುತ್ತದೋ,—** ಅಲ್ಲಿ [ಯಾರು] ಪರಸ್ಪರ ಉಪಕಾರ, ಪ್ರೀತಿ, ವಿದ್ಯೆ, ಸತ್ಯ, ಧರ್ಮ ಮೊದಲಾದ ಉತ್ತಮ ಕಾರ್ಯಗಳನ್ನು, ಅಧರ್ಮದಿಂದ ದೂರ ಸರಿದು, ಮಾಡುತ್ತಾರೋ, ಅವರು ಯಾವಾಗಲೂ ಆನಂದವನ್ನು ಹೊಂದುತ್ತಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಎಲ್ಲರಿಗೂ ವಿದ್ಯೆ, ಧರ್ಮ ಮತ್ತು ಸುಶಿಕ್ಷಣ ದೊರಕಬೇಕು!)

ಯಾವ ಮನುಷ್ಯನು ವಿದ್ಯೆಯನ್ನು ಕಡಿಮೆಯಾಗಿ ತಿಳಿದಿದ್ದರೂ ಕೂಡ, ಮೊದಲು ಹೇಳಿದ ದುಷ್ಟ ವ್ಯವಹಾರಗಳನ್ನು ತ್ಯಜಿಸಿ, ಧಾರ್ಮಿಕನಾಗಿ, ಕುಡಿಯುವ-ತಿನ್ನುವ, ಹೇಳುವ-ಕೇಳುವ, ಕುಳಿತುಕೊಳ್ಳುವ-ಏಳುವ, ಕೊಡುವ-ತೆಗೆದುಕೊಳ್ಳುವ ಮೊದಲಾದ ವ್ಯವಹಾರಗಳನ್ನು ಸತ್ಯದಿಂದ ಕೂಡಿರುವಂತೆ ಯಥಾಯೋಗ್ಯವಾಗಿ ಮಾಡುತ್ತಾನೋ, ಅವನು ಎಲ್ಲಿಯೂ ಎಂದಿಗೂ ದುಃಖವನ್ನು ಹೊಂದುವುದಿಲ್ಲ.

ಮತ್ತು ಯಾವನು ವಿದ್ಯೆಯನ್ನು ಸಂಪೂರ್ಣವಾಗಿ ಓದಿ[ದರೂ ಕೂಡ], ಮೊದಲು ಹೇಳಿದ ಉತ್ತಮ ವ್ಯವಹಾರಗಳನ್ನು ತ್ಯಜಿಸಿ, ದುಷ್ಟಕರ್ಮಗಳನ್ನು ಮಾಡುತ್ತಾನೋ, ಅವನು ಎಲ್ಲಿಯೂ, ಎಂದಿಗೂ ಸುಖವನ್ನು ಹೊಂದಲಾರನು.

ಆದುದರಿಂದ, ಮನುಷ್ಯರೆಲ್ಲರಿಗೂ ಉಚಿತವಾದುದೇನೆಂದರೆ, ತಾವು ತಮ್ಮ ಹುಡುಗರು-ಹುಡುಗಿಯರು, ಇಷ್ಟರು-ಮಿತ್ರರು, ನೆರೆಯವರು-ಹೊರೆಯವರು ಮತ್ತು ಸ್ವಾಮಿಗಳು-ಸೇವಕರು ಮೊದಲಾದವರನ್ನು ವಿದ್ಯೆ ಮತ್ತು ಸುಶಿಕ್ಷಣದಿಂದ ಯುಕ್ತರನ್ನಾಗಿ ಮಾಡಿ, ಯಾವಾಗಲೂ ಆನಂದದಿಂದ ಇರುತ್ತಿರಬೇಕು!*

7750

पुस्तकालय गुरुकुल कांगड़ी विश्वविद्यालय

ಇತಿ ಶ್ರೀಮದ್ದಯಾನಂದಸರಸ್ವತೀಸ್ವಾಮಿನಿರ್ಮಿತೋ 'ವ್ಯವಹಾರಭಾನುಃ' ಸಮಾಪ್ತಃ ॥

* ಈ ಗ್ರಂಥದ ಕನ್ನಡಾನುವಾದವನ್ನು ಪಂ. ಉಪೇಂದ್ರ ಭೂಪಾಲರು ದಿ. 1-5-1992ರಂದು ಆರಂಭಿಸಿ, ದಿ. 27-5-1992ರಂದು ಮುಗಿಸಿದರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

GURUKUL KANGRI LIBRARY

Access no
Class no
Cat no
Tag etc.
Checked
Any Other

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆರ್ಯ ಸಮಾಜದ ಪ್ರಕಾಶನಗಳು

		ಪುಟಗಳು	ಬೆಲೆ
1)	ಸತ್ಯಾರ್ಥ ಪ್ರಕಾಶ ಭಾಗ ೧ + ಭಾಗ ೨	1427	100/-
2)	ಸಂಸ್ಕಾರವಿಧಿ	408	40/-
3)	ಅಗ್ನಿಹೋತ್ರ	64	6/-
4)	ವೇದಶಿಕ್ಷಣ ಭಾಗ-1	136	12/-
5)	ಸಂಧ್ಯೋಪಾಸನೆಯ ಮಹತ್ವ	16	1/-
6)	ವೈದಿಕ ಉಪಾಸನಾ ಪದ್ಧತಿ	48	5/-
7)	ಮೂರ್ತಿಪೂಜೆ ಜಿಜ್ಞಾಸೆ	70	4/-
8)	ಯೋಗ ಮೀಮಾಂಸಾ	204	25/-
9)	ಆದರ್ಶ ಗೃಹಸ್ಥಾಶ್ರಮ	32	3/-
10)	ವಿದ್ಯಾಭ್ಯಾಸ	56	4/-
11)	ದೇವರ ಸ್ವರೂಪ ಮತ್ತು ಅವನ ಪೂಜೆ	32	3/-
12)	ಆರ್ಯೋದ್ದೇಶ್ಯರತ್ನಮಾಲಾ	38	4/-
13)	ಸಂಸ್ಕಾರಗಳ ಮಹತ್ವ	46	10/-
14)	ಭಾರತ ಆರ್ಯರ ಮೂಲನಿವಾಸ	52	5/-
15)	The Vedas	122	16/-
16)	ಕಾಶೀ ಶಾಸ್ತ್ರಾರ್ಥ	76	10/-
17)	ಅದ್ವೈತಮತ ಪರೀಕ್ಷಣ	30	2/-
18)	ಓಂಕಾರಪ್ರಯೋಗಪ್ರಕಾಶ	40	1/-
19)	ಆರ್ಯ ಸಮಾಜ, ಎಂದರೇನು?	24	1/-
20)	*ದಯಾನಂದ ಪ್ರವಚನಮಾಲಾ	320	35/-
21)	ಸಂಸ್ಕೃತ ವಾಕ್ಯ-ವ್ಯವಹಾರ ಪ್ರಬೋಧ	106	18/-
22)	ವ್ಯವಹಾರಭಾನು	86	15/-
23)	ಸ್ವಾಸ್ಥ್ಯ-ಸದಾಚಾರ ಸೂತ್ರಗಳು	52	8/-
24)	ಸುಪ್ರಭಾತ ಶಿವಸಂಕಲ್ಪ	15	3/-
25)	ವಿವಾಹ ಪ್ರತಿಜ್ಞೆ	50	8/-
	ವೇದಮಂತ್ರ (ಕ್ಯಾಸೆಟ್)		30/-
	ವೈದಿಕ ಭಜನಾವಳಿ (ಕ್ಯಾಸೆಟ್)		25/-

Printed by : Parimala Mudranalaya, Hanumanthanagar, Bangalore-19. ☎ 625516

CC-0. In Public Domain. Gurukul Kangri Collection, Haridwar